

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮಾರ್ಚ್ 20 ಬುಧವಾರ 2024

ಸಂಪುಟ: 44 | ಸಂಚಿಕೆ: 331 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ 87 ಅಡಿಗೆ ಕುಸಿತ

ಕುಡಿಯುವ ನೀರಿಗೆ ಹಾಹಾಕಾರ ಉಂಟಾಗುವ ಆತಂಕ

ಮೈಸೂರು, ಮಾ. 19(ಆರ್‌ಕೆ)– ಬೇಸಿಗೆ ಬಿಸಿಲಿನ ತೀವ್ರತೆ ಹೆಚ್ಚಾಗುತ್ತಿದ್ದಂತೆಯೇ ಕೃಷ್ಣ ರಾಜ ಸಾಗರ (ಕೆಆರ್‌ಎಸ್) ಜಲಾಶಯದಲ್ಲಿ ನೀರಿನ ಮಟ್ಟವೂ ದಿನದಿಂದ ದಿನಕ್ಕೆ ಕುಸಿಯುತ್ತಿದೆ.

124.80 ಅಡಿ ಗರಿಷ್ಠ ಮಟ್ಟದ ನೀರಿನ ಸಂಗ್ರಹ ಸಾಮರ್ಥ್ಯವಿರುವ ಜಲಾಶಯದಲ್ಲಿ ಇಂದು 87.45 ಅಡಿಗೆ ಕುಸಿದಿದೆ. ಅಣೆಕಟ್ಟೆಗೆ 132 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, 747 ಕ್ಯುಸೆಕ್ ನೀರನ್ನು ಹೊರಕ್ಕೆ ಬಿಡಲಾಗುತ್ತಿದೆ. ಕಳೆದ ವರ್ಷ ಇದೇ ದಿನ 102.36 ಅಡಿ ನೀರಿನ ಮಟ್ಟವಿತ್ತು. 352 ಕ್ಯುಸೆಕ್ ಒಳಹರಿವು ಮತ್ತು 4000 ಕ್ಯುಸೆಕ್ ಹೊರ ಹರಿವು ದಾಖಲಾಗಿತ್ತು.

ಕಳೆದ ವರ್ಷ ಮಳೆ ಪ್ರಮಾಣ ಕಡಿಮೆಯಾದ್ದರಿಂದ ಜಲಾಶಯದಲ್ಲಿ ನೀರಿನ ಮಟ್ಟ ಕೇವಲ 110 ಅಡಿ ತಲುಪಿತ್ತು. ಗರಿಷ್ಠ ಮಟ್ಟ ತಲುಪದ ಕಾರಣ 2023ರಲ್ಲಿ ಮುಖ್ಯಮಂತ್ರಿಗಳು ಕಾವೇರಿ ಮಾತೆಗೆ ಬಾಗಿನ ಸಮರ್ಪಿಸುವ ಭಾಗ್ಯ ಒದಗಲಿಲ್ಲ.

ಜೂನ್, ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ ಮಾಹೆಯಲ್ಲಿ ನಿರೀಕ್ಷಿತ ಪ್ರಮಾಣದ ಮಳೆಯಾಗದೇ ಇರುವುದು, ಮೇಲಾಗಿ ತಮಿಳುನಾಡಿಗೆ ಅನಿವಾರ್ಯವಾಗಿ ನೀರು ಹರಿಸಿದ ಕಾರಣ, 2023ರಲ್ಲಿ ಕೆಆರ್‌ಎಸ್ ಜಲಾಶಯ ಅಂತೂ ಭರ್ತಿಯಾಗಲಿಲ್ಲ. ಈ ಎಲ್ಲದರ ಪರಿಣಾಮ ಈ ವರ್ಷ ಮಾರ್ಚ್ ತಿಂಗಳಲ್ಲೇ ನೀರಿನ ಮಟ್ಟ 87 ಅಡಿಗೆ ಕುಸಿದಿದೆ. ಈಗಾಗಲೇ ನೀರಿನ ಲಭ್ಯತೆ ಅರಿತು ಬೇಸಾಯಕ್ಕೆ ವಿಶ್ವೇಶ್ವರಯ್ಯ, ವರುಣ, ಆರ್‌ಬಿಎಲ್‌ಎಲ್ ನಾಲೆಗಳ ಮೂಲಕ ನೀರು ಹರಿಸುವುದನ್ನು ತಪ್ಪಿಸಿ ಮೈಸೂರು ಮತ್ತು ಬೆಂಗಳೂರಿಗೆ ಕುಡಿಯುವ ಉದ್ದೇಶಕ್ಕೆ ಮಾತ್ರ ಬಳಸಲಾಗುತ್ತಿದೆ. ಜಲಾಶಯದಲ್ಲಿರುವ ನೀರು ಒಂದು ಅಥವಾ ಎರಡು ತಿಂಗಳಿಗೆ ಸಾಕಾಗ ಬಹುದು. ಅಷ್ಟರಲ್ಲಿ ಮಳೆ ಬೀಳದಿದ್ದಲ್ಲಿ ಈ ಬಾರಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಲಿದೆ. ಬೇಸಿಗೆ ಬಿಸಿಲಿನ ತಾಪ ಹೆಚ್ಚಾಗುತ್ತಿದ್ದಂತೆಯೇ ನೀರಿನ ಬಳಕೆ ಪ್ರಮಾಣ ಸಹ ಹೆಚ್ಚಾಗುತ್ತಿರುವುದರಿಂದ ತೀವ್ರ ಕೊರತೆ ಉಂಟಾಗದಂತೆ ನೀರನ್ನು ಮಿತವಾಗಿ ಬಳಸಬೇಕೆಂದು



ಅಧಿಕಾರಿಗಳು ಮನವಿ ಮಾಡುತ್ತಿದ್ದಾರೆ. ಕೃಷಿಗೆ ನೀರು ಸ್ಥಗಿತಗೊಳಿಸಿರುವುದರಿಂದ ನಾಲೆಗಳು ಒಣಗಿ ಬರಡು ಭೂಮಿಯಂತಾಗಿವೆ. ದನ–ಕರು, ಪಕ್ಷಿಗಳಿಗೆ ಕುಡಿಯಲು ನೀರು ಸಿಗುತ್ತಿಲ್ಲ ಮಂಡ್ಯ ಜಿಲ್ಲೆ ಮತ್ತು ವರುಣ ನಾಲೆ ಅವಲಂಬಿಸಿರುವ ರೈತರ ಭೂಮಿಯೂ ನೀರಿಲ್ಲದೆ ಬರಡಾಗಿವೆ. ಕೆಆರ್‌ಎಸ್ ಜಲಾಶಯದಲ್ಲಿ ಪ್ರಸ್ತುತ ಲಭ್ಯವಿರುವ ನೀರನ್ನು ಇನ್ನೂ 2 ತಿಂಗಳು ಕುಡಿಯಲು ಪೂರೈಸಬಹುದು ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಹೇಳುತ್ತಿದ್ದರಾದರೂ, ವಾಸ್ತುಸ್ಥಿತಿ ನೋಡಿದರೆ ಇನ್ನೊಂದು ತಿಂಗಳಲ್ಲಿ ನೀರಿನ ಸಮಸ್ಯೆ ತೀವ್ರವಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಕೆಆರ್‌ಎಸ್, ಕಬಿನಿ ಜಲಾಶಯಗಳಲ್ಲಿ ಕುಡಿಯಲು ಸಾಕಾಗುವಷ್ಟು ನೀರಿದೆ



ಬೆಂಗಳೂರು, ಮಾ.19–ಕೆಆರ್‌ಎಸ್ ಮತ್ತು ಕಬಿನಿ ಜಲಾಶಯಗಳಲ್ಲಿ ಕ್ರಮವಾಗಿ 11.02 ಟಿಎಂಸಿ ಅಡಿ ಮತ್ತು 9.02 ಟಿಎಂಸಿ ಅಡಿ ನೀರು ಸಂಗ್ರಹವಿದ್ದು, ಕುಡಿಯುವ ಉದ್ದೇಶಕ್ಕೆ ಸಾಕಷ್ಟು ನೀರಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ನೀರಿನ ಕೊರತೆ ನೀಗಿಸುವ ಕುರಿತು ನಗರಾಭಿವೃದ್ಧಿ ಇಲಾಖೆ ಹಾಗೂ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿಕಾರಿಗಳೊಂದಿಗೆ ನಡೆದ ತುರ್ತು ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮಹದೇವಪುರ, ಕೆಆರ್ ಪುರಂ, ಆರ್‌ಆರ್ ನಗರ, ಬೊಮ್ಮನಹಳ್ಳಿ ಮುಂತಾದ ಬಿಬಿಎಂಪಿ ಹೊರವಲಯಗಳಲ್ಲಿ ನೀರು ಸರಬರಾಜು ಮಾಡುವ ಕೊಳವೆಬಾವಿಗಳು ವಿಫಲವಾಗಿರುವುದೇ ಕುಡಿಯುವ ನೀರಿನ ಕೊರತೆಗೆ ಕಾರಣ ಎಂದು ಹೇಳಿದರು.

ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಸರ್ಕಾರದಿಂದ ಕೊರೆದಿರುವ 14,000 ಕೊಳವೆಬಾವಿಗಳ ಪೈಕಿ 6,900 ಬತ್ತಿಹೋಗಿವೆ. ಬಿಬಿಎಂಪಿ ವ್ಯಾಪ್ತಿಗೆ ಹೊಸದಾಗಿ ಸೇರಿಸಿರುವ 110 ಹಳ್ಳಿಗಳ ಪೈಕಿ 55 ಹಳ್ಳಿಗಳಲ್ಲಿ ನೀರಿನ ಸಮಸ್ಯೆ ಉಂಟಾಗಿದೆ. ಸಮಸ್ಯೆ ಉಲ್ಬಣಿಸದಂತೆ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಕೊಳವೆಬಾವಿಗಳನ್ನು ಅವಲಂಬಿಸಿರುವ ಪ್ರದೇಶಗಳಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆಗೆ ಸೂಚಿಸಲಾಗಿದೆ. ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ಟ್ಯಾಂಕರ್‌ಗಳು ಮತ್ತು ಖಾಸಗಿ ● 9ನೇ ಪುಟಕ್ಕೆ

ಯದುವೀರ್‌ಗೆ ನನ್ನ ಅಭಿವೃದ್ಧಿ ಕಾರ್ಯಗಳೇ ಶ್ರೀರಕ್ಷೆ; ಯಾರ ನಾಮ ಬಲವೂ ಬೇಡ

ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅಭಿಪ್ರಾಯ

■ ಪುಟ–5



ಸಿಎಂ ಸಿದ್ದರಾಮಯ್ಯ–ಡಿಸಿಎಂ ಡಿ.ಕೆ.ಶಿವಕುಮಾರ್ ಅಸಮಾಧಾನದ ನಡುವೆ

ಇಂದು ಕಾಂಗ್ರೆಸ್ 2ನೇ ಪಟ್ಟಿ ಪ್ರಕಟ

● ಬಿಜೆಪಿ ಅಸಮಾಧಾನಿತರ ಸೆಳೆಯುವ ಡಿಕೆಶಿ ನಿರ್ಧಾರಕ್ಕೆ ಸಿದ್ದರಾಮಯ್ಯ ವಿರೋಧ

● ಒಂದೆರಡು ಕ್ಷೇತ್ರ ಹೊರತು ಉಳಿದ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಘೋಷಣೆ



ಬೆಂಗಳೂರು, ಮಾ. 19(ಕೆಎಂಶಿ)– ಲೋಕಸಭಾ ಚುನಾವಣಾ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವಿನ ಭಿನ್ನಾಭಿಪ್ರಾಯದ ನಡುವೆಯೇ ರಾಜ್ಯ ಕಾಂಗ್ರೆಸ್ ಅಭ್ಯರ್ಥಿಗಳ ಉಳಿದ ಪಟ್ಟಿ ನಾಳೆ ಪ್ರಕಟಗೊಳ್ಳಲಿದೆ.

ಬಿಜೆಪಿಯಲ್ಲಿ ಟಿಕೆಟ್ ಸಿಗದೆ ಅತೃಪ್ತಗೊಂಡಿರುವ ನಾಯಕರುಗಳನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡು ಟಿಕೆಟ್ ನೀಡುವ ಬಗ್ಗೆ ಉಭಯ ನಾಯಕರಲ್ಲಿ ಭಿನ್ನಾಭಿಪ್ರಾಯ ತಲೆದೋರಿದೆ. ಯಾರನ್ನಾದರೂ ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳೋಣ, ಅವರಿಗೆ ಟಿಕೆಟ್ ನೀಡುವುದು ಬೇಡ. ಅಧಿಕಾರದ ಹಿಂದೆ ಬಿದ್ದವರಿಗೆ ಮಣೆ ಹಾಕಿದರೆ ನಮಗೆ ಲಾಭವಿಲ್ಲ ಎಂದು ಮುಖ್ಯಮಂತ್ರಿ ಅವರು ವರಿಷ್ಠರ ಮುಂದೆ ಸ್ಪಷ್ಟಪಡಿಸಿದ್ದಾರೆ.

ಆದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಗದೀಶ್ ಶೆಟ್ಟರ್ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡು ಹೇಗೆ ಲಾಭವಾಯಿತೋ ಅದೇ ರೀತಿ ಬಿಜೆಪಿಯಿಂದ ಅತೃಪ್ತರಾಗಿರುವ ಸದಾನಂದಗೌಡರನ್ನು ಪಕ್ಷಕ್ಕೆ ಸೇರಿಸಿಕೊಂಡು ಚುನಾವಣೆಯಲ್ಲಿ ಸ್ಪರ್ಧೆಗಿಳಿಸಿದರೆ, ಬಿಜೆಪಿಯ ಒಕ್ಕಲಿಗ ಮತಗಳನ್ನು ಕಸಿಯಲು ನಮಗೆ ಇದು ಸದವಕಾಶ ಎಂದು ಶಿವಕುಮಾರ್ ವಾದ ಮಂಡಿಸಿದ್ದಾರೆ. ಸದಾನಂದಗೌಡರನ್ನು ಮೈಸೂರು–ಕೊಡಗು ಕ್ಷೇತ್ರದಿಂದ ಕಣಕ್ಕಿಳಿಸಿದರೆ ಮೂಲ ಕೊಡವ ಮತ್ತು ಕೊಡವಗೌಡ ಮತಗಳಿಂದ ಕ್ಷೇತ್ರವನ್ನು ನಾವು ಮತ್ತೆ ನಮ್ಮದಾಗಿಸಿಕೊಳ್ಳಬಹುದು ಎಂಬ ವಾದ ಶಿವಕುಮಾರ್ ಅವರದು.

ಇದೇ ರೀತಿ ತುಮಕೂರು, ಕೊಪ್ಪಳ, ಹಾವೇರಿ ಸೇರಿದಂತೆ ಐದು ಕ್ಷೇತ್ರಗಳಲ್ಲಿ ಬಿಜೆಪಿ ನಾಯಕರಲ್ಲಿ ಅಸಮಾಧಾನವಿದೆ. ಈಗಾಗಲೇ ಹಾವೇರಿ, ತುಮಕೂರು ಅಭ್ಯರ್ಥಿಗಳ ಆಯ್ಕೆ ಆಗಿದ್ದರೂ ಅಭ್ಯರ್ಥಿಗಳ ಬದಲಾವಣೆ ಮಾತು ಈ ನಾಯಕರ ಗುಂಪಿನಿಂದ ಬಂದಿದೆ. ಇದರ ನಡುವೆ ಉಳಿದಿರುವ 21 ಕ್ಷೇತ್ರಗಳ ಪೈಕಿ ಕಗ್ಗಂಟಾಗಿರುವ ಒಂದೆರಡು ● 9ನೇ ಪುಟಕ್ಕೆ

ಮೈಸೂರು–ಕೊಡಗು ಲಕ್ಷ್ಮಣ್; ಚಾ.ನಗರ ಸುನೀಲ್ ಬೋಸ್ ಕಾಂಗ್ರೆಸ್ ಅಭ್ಯರ್ಥಿ ಸಾಧ್ಯತೆ



ಎಂ.ಲಕ್ಷ್ಮಣ್



ಸುನೀಲ್‌ಬೋಸ್

ಮೈಸೂರು, ಮಾ.19(ಎಸ್‌ಬಿಡಿ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಎಂ.ಲಕ್ಷ್ಮಣ್ ಹಾಗೂ ಚಾಮರಾಜನಗರ ಕ್ಷೇತ್ರದಿಂದ ಸುನೀಲ್ ಬೋಸ್ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಕಣಕ್ಕಿಳಿಯುವುದು ಬಹುತೇಕ ಖಚಿತವಾಗಿದೆ.

ಕಾಂಗ್ರೆಸ್ ಅಭ್ಯರ್ಥಿಗಳ ಎರಡನೇ ಪಟ್ಟಿ ಬುಧವಾರ ಪ್ರಕಟವಾಗಲಿದ್ದು, ಮೈಸೂರು–ಕೊಡಗು, ಚಾಮರಾಜನಗರ ಸೇರಿದಂತೆ ರಾಜ್ಯದಲ್ಲಿ ಬಾಕಿ ಇರುವ ಎಲ್ಲಾ ಕ್ಷೇತ್ರಗಳ ಅಭ್ಯರ್ಥಿಗಳನ್ನು ಅಧಿಕೃತಗೊಳಿಸಲಾಗುತ್ತಿದೆ. ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಪುತ್ರ ಸುನೀಲ್ ಬೋಸ್ ಹೆಸರು ಅಂತಿಮಗೊಂಡಿದೆ ಎಂದು ಪಕ್ಷದ ಮೂಲಗಳಿಂದ ತಿಳಿದು ಬಂದಿದೆ.

ಮೈಸೂರು–ಕೊಡಗು ಕ್ಷೇತ್ರದಲ್ಲಿ ಆಕಾಂಕ್ಷಿಗಳ ಪಟ್ಟಿ ದೊಡ್ಡದಾಗಿದ್ದರೂ ಅಂತಿಮ ಹಂತದಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಹಾಗೂ ಎಂ.ಲಕ್ಷ್ಮಣ್, ಈ ಇಬ್ಬರಲ್ಲಿ ಒಬ್ಬರಿಗೆ ಟಿಕೆಟ್ ದೊರಕಲಿದೆ ಎಂಬ ಮಾತುಗಳು ಕೇಳಿಬಂದಿದ್ದವು. ಚಾಮರಾಜನಗರದಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್‌ಗಾಗಿ ನಡೆಸಿದ್ದ ಭಾರೀ ಕಸರತ್ತು ವಿಫಲವಾಗಿತ್ತು. ಹಾಗಾಗಿ ಲೋಕಸಭಾ ಚುನಾವಣೆಗೂ ಪ್ರಬಲ ಆಕಾಂಕ್ಷಿಯಾಗಿದ್ದರು. ಈ ನಡುವೆ ನಂಜನಗೂಡು ● 9ನೇ ಪುಟಕ್ಕೆ

ಜೆಡಿಎಸ್–ಬಿಜೆಪಿ ಮೈತ್ರಿಗೆ ಯಾವುದೇ ಧಕ್ಕೆ ಇಲ್ಲ

● ಮಾಜಿ ಸಿಎಂ ಕುಮಾರಸ್ವಾಮಿ ಸ್ಪಷ್ಟನೆ ● ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ವಾಗ್ದಾಳಿ ● ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ನಡೆಯುತ್ತಿರುವ ಅಕ್ರಮಗಳ ಸಂಬಂಧ ಚುನಾವಣೆ ಆಯೋಗಕ್ಕೂ ತರಾಟೆ

ಬೆಂಗಳೂರು, ಮಾ. 19(ಕೆಎಂಶಿ)– ಜೆಡಿಎಸ್–ಬಿಜೆಪಿ ನಡುವಿನ ಮೈತ್ರಿಯಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ, ನಮ್ಮ ಪಕ್ಷದ ಕತ್ತು ಹಿಸುಕಿ ಸಾಯಿಸಲು ಹೊರಟಿದ್ದ ಡಿ.ಕೆ.ಶಿವಕುಮಾರ್ ಅವರ ಅನುಕಂಪ ನಮಗೆ ಬೇಕಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಕೆಂಡಕಾರಿದ್ದಾರೆ.

ಚೆನ್ನೈ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ತೆರಳುವುದಕ್ಕೂ ಮುನ್ನ ತುರ್ತು ಸುದ್ದಿಗೋಷ್ಠಿ ನಡೆಸಿದ ಕುಮಾರಸ್ವಾಮಿ ಅವರು, ಡಿ.ಕೆ. ಸಹೋದರರ ಮಾನ ಜಾಲಾಡಿದರು. ಬಿಜೆಪಿ ಮತ್ತು ನಮ್ಮ ನಡುವೆ ಸೀಟು ಹಂಚಿಕೆ ಮಾತುಕತೆ ಸಂದರ್ಭದಲ್ಲಿ ನಮಗೆ ಮೂರರಿಂದ ನಾಲ್ಕು ಸೀಟು ಬಿಟ್ಟುಕೊಡುವ ಮಾತುಕತೆ ಆಗಿತ್ತು. ಈಗ ಎರಡು ಮಾತ್ರ ಎಂದು ಮಾಹಿತಿ ಬರುತ್ತಿದ್ದಂತೆ ನಮ್ಮ ಪಕ್ಷದ ಮುಖಂಡರು, ಕಾರ್ಯಕರ್ತರು ನಿನ್ನೆ ಕರೆದಿದ್ದ ಸಭೆಯಲ್ಲಿ ಕಿಡಿಕಾರಿದ್ದಾರೆ.



ನಾವು ಮಂಡ್ಯ, ಹಾಸನ, ಕೋಲಾರದಲ್ಲಿ ಸ್ಪರ್ಧೆ ಮಾಡುವುದಾಗಿ ಪ್ರಕಟ ಮಾಡಿದ್ದೇನೆ. ಕಣಕ್ಕಿಳಿಯುತ್ತೇವೆ ಎಂದ ತಕ್ಷಣ ನಮ್ಮ ಮೈತ್ರಿಗೆ ಯಾವುದೇ ಧಕ್ಕೆ ಇಲ್ಲ. ಕಾಂಗ್ರೆಸ್‌ನವರನ್ನು ನಂಬಿ ನಾನು ಕತ್ತು ಕೊಯ್ಯಿಸಿಕೊಂಡಿದ್ದೇನೆ. ಮತ್ತೆ ಅಂತಹ ಪಾಪದ ಕೆಲಸ ಮಾಡುವುದಿಲ್ಲ. ಯಡಿಯೂರಪ್ಪ ಅವರ ಜೊತೆ 20 ತಿಂಗಳು ಆಡಳಿತ ಮಾಡಿದ್ದರಿಂದಲೇ ಪಕ್ಷ ಉಳಿಸಿಕೊಳ್ಳಲು ಸಾಧ್ಯವಾಯಿತು, ಕಾಂಗ್ರೆಸ್ ಸಹವಾಸ ಮಾಡಿ ನನ್ನ ಪಕ್ಷ ಬಲಿ ಕೊಟ್ಟೆ, ಯಡಿಯೂರಪ್ಪ, ವಿಜಯೇಂದ್ರ, ರಾಧಾ ಮೋಹನ ದಾಸ್ ಅಗರ್‌ವಾಲ್ ಅವರು ನಮ್ಮ ಜೊತೆ ಮಾತನಾಡಿದ್ದಾರೆ. ● 9ನೇ ಪುಟಕ್ಕೆ

ಬಿಜೆಪಿ–ಜೆಡಿಎಸ್ ಮೈತ್ರಿ ಸುಸೂತ್ರ



ಬೆಂಗಳೂರು, ಮಾ.19(ಕೆಎಂಶಿ)– ಸೀಟು ಹೊಂದಾಣಿಕೆಗೆ ಸಂಬಂಧಿಸಿದಂತೆ ಬಿಜೆಪಿ–ಜೆಡಿಎಸ್ ನಡುವೆ ಯಾವುದೇ ಸಣ್ಣಪುಟ್ಟ ವ್ಯತ್ಯಾಸಗಳಿದ್ದರೂ ಎಲ್ಲವೂ ಸುಖಾಂತ್ಯಗೊಂಡು ಮೈತ್ರಿ ಸುಸೂತ್ರವಾಗಿ ಮುಂದುವರೆಯಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೆಡಿಎಸ್ ನಾಯಕರಿಗೂ ಸಮಾಧಾನ ಆಗುವ ರೀತಿಯಲ್ಲಿ ಬಿಜೆಪಿ ರಾಷ್ಟ್ರೀಯ ನಾಯಕರು ತೀರ್ಮಾನ ಮಾಡುವ ● 9ನೇ ಪುಟಕ್ಕೆ



ತೆಲಂಗಾಣದಲ್ಲಿ ಭೀಕರ ರಸ್ತೆ ಅಪಘಾತ

ಕಾಶಿಗೆ ತೆರಳುತ್ತಿದ್ದ ಮೈಸೂರಿನ ಇಬ್ಬರು ದುರ್ಮರಣ

ನಾಲ್ವರಿಗೆ ತೀವ್ರ ಗಾಯ, ಶಾದ್‌ನಗರ ಬೈಪಾಸ್ ರಸ್ತೆಯಲ್ಲಿ ಸೋಮವಾರ ಮಧ್ಯಾಹ್ನ ದುರ್ಘಟನೆ



ಮೈಸೂರು/ಶಾದ್‌ನಗರ, ಮಾ. 19(ಆರ್‌ಕೆ)– ಕಾಶಿ ವಿಶ್ವನಾಥನ ದರ್ಶನಕ್ಕಾಗಿ ಮೈಸೂರಿನಿಂದ ತೆರಳುತ್ತಿದ್ದ ವ್ಯಾನ್ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿ, ನಾಲ್ವರು ತೀವ್ರವಾಗಿ ಗಾಯಗೊಂಡ ಘಟನೆ ತೆಲಂಗಾಣದ ಶಾದ್‌ನಗರ ಬೈಪಾಸ್ ರಸ್ತೆಯಲ್ಲಿ ಸೋಮವಾರ ಮಧ್ಯಾಹ್ನ ಸಂಭವಿಸಿದೆ. ಮೈಸೂರಿನ ರಾಮಕೃಷ್ಣನಗರ 'ಜಿ' ಬ್ಲಾಕ್ ನಿವಾಸಿಗಳಾದ ರತ್ನಾಕರ(47) ಮತ್ತು ನರಸಿಂಹನ್ ಐಯ್ಯರ್(46) ಸ್ಥಳದಲ್ಲೇ ಸಾವನ್ನಪ್ಪಿದವರು. ತೀವ್ರವಾಗಿ ಗಾಯಗೊಂಡಿರುವ ವಿಶ್ವನಾಥನ್ ಐಯ್ಯರ್(43), ರಘುರಾಮ್, ಮದನ್‌ಕುಮಾರ್ ಮತ್ತು ಶ್ರೀರಾಂ ಅವರನ್ನು ತೆಲಂಗಾಣದ ಶಂಶಾಬಾದ್ ನಗರದ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.



ಎಸ್.ಕೆ.ರತ್ನಾಕರ

ಮೈಸೂರಿನಿಂದ ಮಾರುತಿ ಇಕೋ ವ್ಯಾನ್‌ನಲ್ಲಿ ಈ 6 ಮಂದಿ ಭಾನುವಾರ ರಾತ್ರಿ ಮೈಸೂರಿನಿಂದ ಕಾಶಿಗೆ ಪ್ರಯಾಣ ಬೆಳೆಸಿದ್ದರು. ಇವರು ಪ್ರಯಾಣಿಸುತ್ತಿದ್ದ ಕಾರು ಸೋಮವಾರ ಮಧ್ಯಾಹ್ನ 2.30ರ ಸುಮಾರಿನಲ್ಲಿ ತೆಲಂಗಾಣದ ಶಾದ್‌ನಗರ ಸಮೀಪ ಬೈಪಾಸ್ ರಸ್ತೆಯಲ್ಲಿ ತೆರಳುತ್ತಿದ್ದಾಗ ನಾಯಿ ಅಡ್ಡ ಬಂದಿದ್ದು, ಅದಕ್ಕೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಕಾರು ಚಾಲನೆ ಮಾಡುತ್ತಿದ್ದ ರತ್ನಾಕರ ಅವರು ಎಡಕ್ಕೆ ತಿರುಗಿಸಿದಾಗ ಇಳಿಜಾರಾಗಿದ್ದ ರಸ್ತೆಯಲ್ಲಿ ಅವರ ನಿಯಂತ್ರಣ ತಪ್ಪಿದ ಕಾರು, ಮರಕ್ಕೆ ಡಿಕ್ಕಿ ಹೊಡೆದಿದೆ.

ಮರಕ್ಕೆ ಕಾರು ಅಪ್ಪಳಿಸಿದ ರಭಸಕ್ಕೆ ವಾಹನ ಚಾಲನೆ ಮಾಡುತ್ತಿದ್ದ ರತ್ನಾಕರ ಮತ್ತು ಅವರ ಎಡಬದಿ ಕುಳಿತಿದ್ದ ನರಸಿಂಹನ್ ಐಯ್ಯರ್ ಸ್ಥಳದಲ್ಲೇ ಮೃತಪಟ್ಟಿದ್ದು, ತೀವ್ರವಾಗಿ ಗಾಯಗೊಂಡಿದ್ದ ನಾಲ್ವರನ್ನು ● 9ನೇ ಪುಟಕ್ಕೆ



ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಚಾಮರಾಜ ಕ್ಷೇತ್ರದ ದೇವರಾಜ ಬ್ಲಾಕ್‌ನ ನೂತನ ಅಧ್ಯಕ್ಷರಾಗಿ ಯು.ಎಸ್.ರಮೇಶ್ ಅಧಿಕಾರ ಸ್ವೀಕರಿಸಿದರು. ಈ ವೇಳೆ ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಮಾಜಿ ಮೇಯರ್‌ಗಳಾದ ಟಿ.ಬಿ. ಚಿಕ್ಕಣ್ಣ, ಪುಷ್ಪಲತಾ ಟಿ.ಬಿ.ಚಿಕ್ಕಣ್ಣ, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್, ಶಿವಣ್ಣ, ಮಾಜಿ ಉಪಮೇಯರ್ ಪುಷ್ಪವಲ್ಲಿ ಮತ್ತಿತರರು ಹಾಜರಿದ್ದರು.

ನುಡಿ ಪ್ರತಿಷ್ಠಾನದಿಂದ ನಿಘಂಟು ವಿತರಣೆ



ನುಡಿ ಪ್ರತಿಷ್ಠಾನದಿಂದ ಕುವೆಂಪುನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗಕ್ಕೆ ಕನ್ನಡ-ಕನ್ನಡ ನಿಘಂಟನ್ನು ನೀಡಲಾಯಿತು.

ಮೈಸೂರು,ಮಾ.19-ಹಾಸನದ ಸಕಲೇಶಪುರ ತಾಲೂಕಿನ ಅತ್ತಿಹಳ್ಳಿ ಗ್ರಾಮದಲ್ಲಿರುವ ನುಡಿ ಪ್ರತಿಷ್ಠಾನವು ಮೈಸೂರಿನ ಕುವೆಂಪುನಗರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗಕ್ಕೆ ಕನ್ನಡ-ಕನ್ನಡ ನಿಘಂಟಿನ ಎಂಟು ಸಂಪುಟಗಳನ್ನು ಕೊಡುಗೆಯಾಗಿ ನೀಡಿತು.

ಇತ್ತೀಚೆಗೆ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಾಂಶುಪಾಲೆ ಡಾ.ರಾಗಿಣಿ ಅವರ ಮೂಲಕ ಕನ್ನಡ ವಿಭಾಗದ ಗ್ರಂಥಾಲಯಕ್ಕೆ ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಡಾ.ರಕ್ಷಿತ್ ಅವರು ನಿಘಂಟು ಸಂಪುಟಗಳನ್ನು ಹಸ್ತಾಂತರಿಸಿದರು.

ನಂತರ ಮಾತನಾಡಿದ ಅವರು, ಪ್ರತಿಷ್ಠಾನವು ತನ್ನ ದೀರ್ಘಕಾಲಿಕ ಯೋಜನೆಯಾಗಿ ಕಾಲೇಜಿಗೊಂದು ಕನ್ನಡ ನಿಘಂಟು ಯೋಜನೆಯನ್ನು ರೂಪಿಸಿಕೊಂಡಿದ್ದು; ಇದರಡಿ ರಾಜ್ಯದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ಕನ್ನಡ ವಿಭಾಗಗಳಿಗೆ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಕನ್ನಡ-ಕನ್ನಡ ಬೃಹತ್ ನಿಘಂಟಿನ ಎಂಟು ಸಂಪುಟಗಳನ್ನು ಉಚಿತವಾಗಿ ವಿತರಿಸುವ ಗುರಿಯನ್ನು ಹೊಂದಿದ್ದು, ಹಂತ ಹಂತವಾಗಿ ಇದನ್ನು ಕಾರ್ಯಗತಗೊಳಿಸಲಾಗುವುದು ಎಂದರು.

ಈ ಸಂದರ್ಭ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಪಿ.ಬೆಟ್ಟೇಗೌಡ, ವಿಭಾಗದ ಅಧ್ಯಾಪಕರಾದ ಡಾ.ಅಶ್ವಿನಿ, ಡಾ.ಗುರುಸ್ವಾಮಿ, ಶೋಭಾರಾಣಿ ಜೆ.ಸಿ., ಡಾ.ಹರ್ಷಿಣಿ, ಡಾ.ಯಲ್ಲವ್ವ ಹೆಬ್ಬಳ್ಳಿ ಮತ್ತು ಕಾಲೇಜಿನ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸ್ವಯಂ ಸೇವಾಸಂಸ್ಥೆಗಳ ದಿನ; ವಿಶ್ವ ಮಹಿಳಾ ದಿನಾಚರಣೆ



ಮೈಸೂರು,ಮಾ.19-ಇತ್ತೀಚೆಗೆ ಮೈಸೂರಿನ 'ಮೈತ್ರಿ' ಸ್ವಯಂ ಸೇವಾಸಂಸ್ಥೆಗಳ ಒಕ್ಕೂಟದ ವತಿಯಿಂದ ಕುಕ್ಕರಹಳ್ಳಿ ಸಮುದಾಯ ಭವನದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ದಿನ (WORLD NGO'S DAY) ಹಾಗೂ ವಿಶ್ವ ಮಹಿಳಾ ದಿನಾಚರಣೆಯನ್ನು ಆಯೋಜಿಸಲಾಗಿತ್ತು.

ಕೈಗಾರಿಕೋದ್ಯಮಿಗಳು ಹಾಗೂ ಎನ್.ಆರ್. ಫೌಂಡೇಷನ್‌ನ ಆರ್.ಗುರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಮುದಾಯ ಅಭಿವೃದ್ಧಿಯಲ್ಲಿ ಸ್ವಯಂ ಸೇವಾಸಂಸ್ಥೆಗಳ ಪಾತ್ರ ಅನನ್ಯವಾದದ್ದು ಸರ್ಕಾರಗಳ ಅಂಗ ಸಂಸ್ಥೆಗಳಾಗಿ ಸ್ವಯಂ ಸೇವಾಸಂಸ್ಥೆಗಳು ನಿರಂತರವಾಗಿ ಸಹಕಾರ ಮತ್ತು ಸಲಹೆಗಳನ್ನು ನೀಡುತ್ತಾ ಅವಶ್ಯಕತೆಯುಳ್ಳ ಶೋಷಿತ ಸಮಾಜದ ಸರ್ವರ ಏಳಿಗೆಯನ್ನೇ ತಮ್ಮ ಧ್ಯೇಯವಾಗಿಸಿಕೊಂಡು ನಿಸ್ವಾರ್ಥ ಸೇವೆಯನ್ನು ಮಾಡುತ್ತಿರುವ ಸಂಸ್ಥೆಗಳು ಈ ದಿನವನ್ನು ಆಚರಿಸುತ್ತಿರುವುದು ಅರ್ಥಪೂರ್ಣವಾಗಿದೆ ಎಂದರು.

ಎಸ್.ಎಸ್.ಟಿ ಮೈಸೂರು, ಹಿರಿಯ ನಿರ್ದೇಶಕ ಎನ್.ಮೋಹನ್ ಕಾರ್ನಟ್, ಮೈತ್ರಿ ಸ್ನೇಹ ಸಂಸ್ಥೆ ಖಜಾಂಚಿ ಹೇಮಾವತಿ, ಆರ್.ಎಲ್.ಹೆಚ್.ಪಿ ನಿರ್ದೇಶಕಿ ಸರಸ್ವತಿ ಉಪಸ್ಥಿತರಿದ್ದರು. ಸಿ.ಎ.ಸಿ.ಎಲ್.ಕೆ, ರಾಜ್ಯ ಸಂಚಾಲಕ ರಾಜೇಗೌಡ ಅಧ್ಯಕ್ಷತೆ ವಹಿಸಿದ್ದರು. ಭಾರತೀಯ ಸಾರ್ವಜನಿಕ ಆರೋಗ್ಯ ಸಂಶೋಧನಾ ಕೇಂದ್ರದ ಪಿ.ರಶ್ಮಿ, ವಿಶ್ವ ಮಹಿಳಾ ದಿನಾಚರಣೆ ಮಹತ್ವ 'ಮಹಿಳಾ ಒಳಗೊಳ್ಳುವಿಕೆ ಮತ್ತು ಪ್ರಭಾವ' ಮತ್ತು ಮಹಿಳಾ ಸಬಲೀಕರಣ ಕುರಿತು ಮಾತನಾಡಿದರು.

ವಿಶ್ವ ಸ್ವಯಂ ಸೇವಾ ಸಂಸ್ಥೆಗಳ ನಿರ್ದೇಶಕ ಪ್ರಸನ್ನಮೂರ್ತಿ ಮಹಿಳಾ ದಿನಾಚರಣೆ ಮಹತ್ವ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಸೋಮಣ್ಣ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು ಹಾಗೂ ಸಿಸ್ಟ ಆಲೀಸ್ ಜೋಸೆಫ್ ಸುಮನ ಸಂಸ್ಥೆ ಸಮಾಜ ಸೇವಕ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮೈತ್ರಿ ಅಧ್ಯಕ್ಷ ಮೋಹನ್ ಕೋಟೆಕೆರೆ, ಒಡನಾಡಿ ಸೇವಾ ಸಂಸ್ಥೆ ಸ್ಟ್ಯಾನ್ಲಿ, ಪರಶುರಾಮ್, ಹರೀಶ್, ಆರೋಕ್ಯ ಮೇರಿ ಮೈತ್ರಿ, ಕಾರ್ಯ ದರ್ಶಿ, ಒ.ಡಿ.ಪಿ ಸಂಸ್ಥೆ ಭಾಗವಹಿಸಿದ್ದರು.

ಗೃಹಿಣಿ ನಾಪತ್ತೆ



ಮೈಸೂರು,ಮಾ.19-ಗೃಹಿಣಿಯೋರ್ವರು ಕಾಣೆಯಾಗಿರುವ ಬಗ್ಗೆ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಚಾಮರಾಜನಗರ ತಾಲೂಕು ಮಲಿಯೂರು ಗ್ರಾಮದ ಬಿ.ಮಹೇಶ್ ಅವರ ಪತ್ನಿ ಶ್ರೀಮತಿ ಮಮತ (38) ಕಾಣೆಯಾದವರು. ಇವರು ಮಾ.12ರಂದು ಮ. 2 ಗಂಟೆ ಸಮಯದಲ್ಲಿ ಮನೆಯಿಂದ ಹೊರ ಹೋದವರು ಇದುವರೆಗೂ ವಾಪಸ್ ಬಂದಿಲ್ಲ ಎಂದು ಅವರ ಪತಿ ಬಿ.ಮಹೇಶ್ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಮೊ. 7094655765, 6383029277 ಸಂಪರ್ಕಿಸಲು ಕೋರಲಾಗಿದೆ

ನಿಧನ



ಚೋಳಂಡ ಧರಣಿ ಪೂವಯ್ಯ

ಬೆಂಗಳೂರು, ಮಾ. 19- ನಿವೃತ್ತ ಡಿಸಿಪಿ ಚೋಳಂಡ ಪೂವಯ್ಯ ಅವರ ಪತ್ನಿ ಚೋಳಂಡ ಧರಣಿ ಪೂವಯ್ಯ (ಸ್ವೀಟಿ-ಮನವಟ್ಟೀರಾ) ಮಂಗಳವಾರ ಬೆಳಗ್ಗೆ ಬೆಂಗಳೂರಿನಲ್ಲಿ ನಿಧನರಾದರು. ಅವರಿಗೆ 53 ವರ್ಷ ವಯಸ್ಸಾಗಿತ್ತು.

ಬೆಂಗಳೂರಿನ ನಂ. 6/3, ಪಾರ್ವತಿ ಕಾಟೇಜ್, 4ನೇ ಕ್ರಾಸ್, ಬಚ್‌ಪನ್ ಶಾಲೆ ಸಮೀಪ, ಆತ್ಮಾನಂದ ಕಾಲೋನಿ, ಸುಲ್ತಾನ್‌ಪಾಳ್ಯ, ಆರ್.ಟಿ. ನಗರ ಪೋಸ್ಟ್ ಇಲ್ಲಿನ ನಿವಾಸಿಯಾದ ಇವರು ಪತಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ನಾಳೆ (ಮಾ.20) ಬೆಳಗ್ಗೆ 11 ಗಂಟೆಗೆ ಬೆಂಗಳೂರಿನ ಹೆಬ್ಬಾಳು ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಎಂ.ಎ.ಅರ್ಜುನ(ಅಲೆಮಾಡ)

ಹುಣಸೂರು, ಮಾ.19- ನಗರದ ವಿ.ಪಿ.ಬೋರೆ ನಿವಾಸಿ, ಉದ್ಯಮಿ ಎಂ.ಎ.ಅರ್ಜುನ(ಅಲೆಮಾಡ-78) ಮಂಗಳವಾರ ಸಂಜೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ, ಇಬ್ಬರೂ ಪುತ್ರಿಯರು, ಅಳಿಯಂದಿರು, ಸೊಸೆ ಹಾಗೂ ಅಪಾರ ಬಂಧು ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಗರದ ತಾಲೂಕು ಕಚೇರಿ ಪಕ್ಕದಲ್ಲಿರುವ ಸ್ಮಶಾನದಲ್ಲಿ ಬುಧವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ

ಮೈಸೂರು ಜಿಲ್ಲಾಧಿಕಾರಿ, ಪೊಲೀಸ್ ಆಯುಕ್ತರಿಂದ ಚೆಕ್‌ಪೋಸ್ಟ್‌ಗಳ ಕಾರ್ಯವೈಖರಿ ಪರಿಶೀಲನೆ

ಪರಿಣಾಮಕಾರಿಯಾಗಿ ಚುನಾವಣಾ ನೀತಿ ಸಂಹಿತೆ ಅನುಷ್ಠಾನಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ



ಮೈಸೂರು ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ಅವರು ಮಂಗಳವಾರ ಮೈಸೂರಿನ ಚೆಕ್‌ಪೋಸ್ಟ್‌ಗಳಿಗೆ ತೆರಳಿ ಕಾರ್ಯವೈಖರಿ ಪರಿಶೀಲಿಸಿದರು.

ಮೈಸೂರು-ಬೆಂಗಳೂರು ರಸ್ತೆಯ ಸಿದ್ದಲಿಂಗಪುರ ಬಳಿ, ಕೆಆರ್‌ಎಸ್ ರಸ್ತೆಯ ಸುನಂದ ಫ್ಯಾಕ್ಟರಿ, ಹುಣಸೂರು ರಸ್ತೆಯ ಲಿಂಗದೇವರಕೊಪ್ಪಲು ಬಳಿ, ಬೋಗಾದಿ ಫೈವ್‌ಲೈಟ್ ಸರ್ಕಲ್, ಹೆಚ್.ಡಿ.ಕೋಟೆ ರಿಂಗ್ ರೋಡ್ ಜಂಕ್ಷನ್, ತಿ.ನರಸೀಪುರ ರಸ್ತೆಯ ಚಿಕ್ಕಹಳ್ಳಿ ಬಳಿ, ಬನ್ನೂರು ರಸ್ತೆ ಹಾಗೂ ಮಹದೇವಪುರ ರಸ್ತೆಗಳಲ್ಲಿನ ಚೆಕ್‌ಪೋಸ್ಟ್‌ಗಳಲ್ಲಿ ಪೊಲೀಸರು ವಾಹನ ತಪಾಸಣಾ ಕಾರ್ಯವನ್ನು ತೀವ್ರಗೊಳಿಸಿದ್ದಾರೆ.

ಮೈಸೂರು,ಮಾ.19(ಆರ್‌ಕೆ)- 2024ರ ಲೋಕಸಭಾ ಚುನಾವಣೆ ಘೋಷಣೆಯಾಗುತ್ತಿದ್ದಂತೆಯೇ ಮೈಸೂರು ಜಿಲ್ಲಾಡಳಿತ, ನಗರ ಹಾಗೂ ಜಿಲ್ಲಾ ಪೊಲೀಸ್ ಘಟಕದ ಅಧಿಕಾರಿಗಳು ನೀತಿ ಸಂಹಿತೆ ಕಟ್ಟುನಿಟ್ಟಿನ ಪರಿಪಾಲನೆಗೆ ಮುಂದಾಗಿದ್ದಾರೆ.

ಮತಗಟ್ಟೆ ಅಧಿಕಾರಿಗಳು, ಸಿಬ್ಬಂದಿಗೆ ಚುನಾವಣೆ ಸಂಬಂಧ ತರಬೇತಿ ನೀಡಿರುವ ಜಿಲ್ಲಾ ಚುನಾವಣಾಧಿಕಾರಿಗಳು, ಇವಿಎಂ ಮತ್ತು ವಿವಿ ಪ್ಯಾಟ್‌ಗಳ ತಪಾಸಣೆ ನಡೆಸಿ ಮತದಾನಕ್ಕೆ ಸಜ್ಜುಗೊಳಿಸಿದ್ದಾರೆ. ಭಾರತ ಚುನಾವಣಾ ಆಯೋಗವು ಹೊರಡಿಸಿರುವ ನೀತಿ ಸಂಹಿತೆಯನ್ನು ಚಾಚೂ ತಪ್ಪದೇ ಅನುಷ್ಠಾನಗೊಳಿಸುವಂತೆಯೂ ಅಧಿಕಾರಿಗಳು, ಸಿಬ್ಬಂದಿಗೆ ಸೂಚನೆ ನೀಡಿದ್ದಾರೆ.

ಇಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್‌ರೊಂದಿಗೆ ಮೈಸೂರಿನ ರಾಷ್ಟ್ರೀಯ, ರಾಜ್ಯ ಹೆದ್ದಾರಿಗಳಲ್ಲಿ ಸ್ಥಾಪಿಸಿರುವ ಚೆಕ್‌ಪೋಸ್ಟ್‌ಗಳಿಗೆ ಭೇಟಿ ನೀಡಿ ವಾಹನಗಳ ತಪಾಸಣೆ ಮಾಡುತ್ತಿರುವ ಅಧಿಕಾರಿಗಳು, ಸಿಬ್ಬಂದಿಯ ಕಾರ್ಯವೈಖರಿ ಪರಿಶೀಲಿಸಿದರು. ಮೈಸೂರಿಗೆ ಪ್ರವೇಶಿಸುವ ಎಲ್ಲಾ ವಾಹನಗಳನ್ನೂ ನಿಲ್ಲಿಸಿ ಪರಿಶೀಲಿಸಿ ಸೌಜನ್ಯದಿಂದ ಮಾಹಿತಿಗಳನ್ನು ಕೇಳಿ ಪಡೆಯಿರಿ ಎಂದು ಡಾ.ಕೆ.ವಿ.ರಾಜೇಂದ್ರ ಚೆಕ್‌ಪೋಸ್ಟ್ ಅಧಿಕಾರಿಗಳಿಗೆ ಸಲಹೆ ನೀಡಿದರು.

50,000 ರೂ.ಗಳಿಗಿಂತ ಹೆಚ್ಚು ನಗದು ದಾಖಲಾತಿಗಳಿಲ್ಲದ ಚಿನ್ನ, ಬೆಳ್ಳಿ ಆಭರಣ, ಮದ್ಯ, ಗೃಹೋಪಯೋಗಿ ವಸ್ತುಗಳು ಕಂಡು ಬಂದರೆ, ತಕ್ಷಣ ಸ್ಟ್ಯಾಟಿಕ್ ಸರ್ವೇಲೆನ್ಸ್ ಟೀಂಗೆ ಮಾಹಿತಿ ನೀಡಬೇಕು. ದಿನದ 24 ಗಂಟೆಯೂ ಚೆಕ್ ಪೋಸ್ಟ್‌ಗಳಲ್ಲಿ ಜಾಗೃತಿಯಿಂದ ಕೆಲಸ ಮಾಡಬೇಕೆಂದು ಜಿಲ್ಲಾಧಿಕಾರಿ ಮತ್ತು ನಗರ ಪೊಲೀಸ್ ಆಯುಕ್ತರು ಇದೇ ವೇಳೆ ಸೂಚನೆ ನೀಡಿದ್ದಾರೆ.

ಚೆಕ್‌ಪೋಸ್ಟ್‌ಗಳಲ್ಲಿ ಒದಗಿಸಿರುವ ಮೂಲಭೂತ ಸೌಲಭ್ಯ, ಪ್ರತೀ ದಿನ ಮೈಸೂರಿಗೆ ಬರುವ ವಾಹನಗಳ ಸಂಖ್ಯೆ, ಪ್ರಯಾಣಿಸುವವರ ವಿವರ, ಎಲ್ಲಿಂದ ಎಲ್ಲಿಗೆ, ಯಾವ ಉದ್ದೇಶದಿಂದ ಹೋಗುತ್ತಿದ್ದೀರಿ ಎಂಬಿತ್ಯಾದಿ ಮಾಹಿತಿಯನ್ನು ಪಡೆಯಬೇಕು ಎಂದು ಪೊಲೀಸ್ ಕಮೀಷನರ್ ಬಿ. ರಮೇಶ್ ತಿಳಿಸಿದರು.

ಅಧಿವಕ್ತಾ ಪರಿಷತ್‌ನಿಂದ ವಿಶ್ವ ಮಹಿಳಾ ದಿನಾಚರಣೆ




ಮೈಸೂರು,ಮಾ.19-ಅಧಿವಕ್ತಾ ಪರಿಷತ್, ಕರ್ನಾಟಕ ದಕ್ಷಿಣ ಪ್ರಾಂತ, ಜಿಲ್ಲಾ ಘಟಕ ಮೈಸೂರು ಹಾಗೂ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಜಂಟಿ ಆಶ್ರಯದಲ್ಲಿ 2024ನೇ ಸಾಲಿನ ಮಹಿಳಾ ದಿನಾಚರಣೆ ಅಂಗವಾಗಿ ಹಿರಿಯ ವಕೀಲರು ಹಾಗೂ ಸಾಧಕ ಮಹಿಳೆಯರಿಗೆ ಅಭಿನಂದನಾ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ಪ್ರಭಾವತಿ ಎಂ.ಹಿರೇಮಠ ಉದ್ಘಾಟಿಸಿದರು. ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಪ್ರಾಧಿಕಾರದ ಮುಖ್ಯಸ್ಥರಾದ ದಿನೇಶ್, ನೇಗಿಲಯೋಗಿ ಸಂಸ್ಥೆ ಅಧ್ಯಕ್ಷ ಡಿ.ರವಿಕುಮಾರ್, ಅಧಿವಕ್ತಾ ಪರಿಷತ್ ಕರ್ನಾಟಕ ದಕ್ಷಿಣ ಪ್ರಾಂತ ಮೈಸೂರು ಕಾರ್ಯದರ್ಶಿ ಕೆ.ಎಸ್.ಸವಿತಾ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಹಿರಿಯ ವಕೀಲರು ಹಾಗೂ ಅಧ್ಯಕ್ಷರು ಅಧಿವಕ್ತಾ ಪರಿಷತ್ ಜಿಲ್ಲಾಧ್ಯಕ್ಷೆ ಶ್ರೀಮತಿ ಶಾರದ ವಹಿಸಿದ್ದರು.

ಬಳಿಕ ಪ್ರಭಾವತಿ ಎಂ. ಹಿರೇಮಠ ಮಾತನಾಡಿ, ಮಹಿಳೆಯರು ಹಿಂದಿನಿಂದಲೂ ಸಮಾಜದಲ್ಲಿ ಎಲ್ಲಾ ತರಹದ ಜವಾಬ್ದಾರಿಗಳನ್ನು ನಿಭಾಯಿಸುತ್ತಾ ಬಂದಿದ್ದಾರೆ. ಮಹಿಳೆಯರು ತ್ಯಾಗಮಯಿ, ಮಮತಾಮಯಿ, ಕಷ್ಟಗಳನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಹೊಂದಿದ್ದಾಳೆ. ಆದಿಮಾನವರ ಕಾಲದಲ್ಲಿ ಕಾಡಿನಲ್ಲಿ ಜೀವನ ಮಾಡಬೇಕಾದ ಪರಿಸ್ಥಿತಿಯಲ್ಲಿಯೂ ಸಹ ಗಂಡಸರಿಗೆ ಸರಿಸಮನಾಗಿ ನಿಂತು ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಮಹಿಳೆಯರು, ಪುರುಷರು ಅಧಿಪತ್ಯ ಸ್ಥಾಪಿಸಿರುವ ಕ್ಷೇತ್ರದಲ್ಲಿಯೂ ಸಹ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಹೇಳಿದರು.

ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಡಿ.ರವಿಕುಮಾರ್ ಮಾತನಾಡಿ, ಮಹಿಳಾ ದಿನಾಚರಣೆ ಕೇವಲ ಒಂದು ಕಾರ್ಯಕ್ರಮವಲ್ಲ; ಅದು ಜವಾಬ್ದಾರಿ ತಿಳಿಸುವ ಕಾರ್ಯಕ್ರಮ. ಆದ್ದರಿಂದ ಮಹಿಳಾ ದಿನಾಚರಣೆ ಒಂದು ದಿನಕ್ಕೆ ಸೀಮಿತವಾಗದೆ ವರ್ಷಾಪೂರ್ತಿ ದಿನಾಚರಣೆಯಾಗಬೇಕು ಎಂದರು. ಹಿರಿಯ ವಕೀಲರಾದ ಶ್ರೀದೇವಿ, ಸುಕನ್ಯಾ, ಕರ್ನಾಟಕದ ಮೊದಲ ತೃತೀಯ ಲಿಂಗಿ ವಕೀಲರಾದ ಕುಮಾರಿ ಶಶಿ, ಸಮಾಜ ಸೇವಕಿ ಹಾಗೂ ಮಹಿಳೆಯರಿಗಾಗಿ ಆಶ್ರಮವನ್ನು ನಡೆಸುತ್ತಿರುವ ಪಂಕಜಾ ರಾಮಚಂದ್ರ ಹಾಗೂ ಧನ್ಯ ಫೌಂಡೇಶನ್ ಗೋಶಾಲೆಯ ಕುಮಾರಿ ಚೈತ್ರ ಅವರನ್ನು ಅಭಿನಂದಿಸಲಾಯಿತು.

ಹಾಸನ ಹಾಲು ಒಕ್ಕೂಟದ ಅಧ್ಯಕ್ಷರಾಗಿ 7ನೇ ಬಾರಿ ಶಾಸಕ ಹೆಚ್.ಡಿ.ರೇವಣ್ಣ ಆಯ್ಕೆ



ಹಾಸನ, ಮಾ.19- ಜಿಲ್ಲಾ ಹಾಲು ಒಕ್ಕೂಟ(ಹಾಮುಲ್)ದ ಅಧ್ಯಕ್ಷರಾಗಿ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಪುನರಾಯ್ಕೆಯಾಗಿದ್ದಾರೆ. ಈ ಮೂಲಕ 1994 ರಿಂದ ಈವರೆಗೆ ಸತತ 7ನೇ ಬಾರಿಗೆ ರೇವಣ್ಣ ಅವಿರೋಧ ಆಯ್ಕೆಯಾಗಿ, ದಾಖಲೆ ಬರೆದಿದ್ದಾರೆ.

ಕಳೆದ ಮಾ.8 ರಂದು ಹಾಮುಲ್ ನಿರ್ದೇಶಕ ಸ್ಥಾನಕ್ಕೆ ನಡೆದಿದ್ದ ಚುನಾವಣೆಯಲ್ಲಿ 14 ಮಂದಿ ನೂತನವಾಗಿ ಅವಿರೋಧವಾಗಿ ಆಯ್ಕೆಯಾಗಿದ್ದರು. ಮಂಗಳವಾರ ಹಾಮೂಲ್ ಕಚೇರಿಯಲ್ಲಿ ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಎಲ್ಲಾ ನಿರ್ದೇಶಕರು ಸೇರಿ ರೇವಣ್ಣ ಅವರನ್ನೇ ಮತ್ತೊಮ್ಮೆ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ. ಅವರು 2024 ರಿಂದ 2029 ರವರೆಗೆ ಅಧ್ಯಕ್ಷರಾಗಿರಲಿದ್ದಾರೆ. ಆಯ್ಕೆ ನಂತರ ಮಾತನಾಡಿದ ರೇವಣ್ಣ, ಮತ್ತೆ ಅಧ್ಯಕ್ಷರಾಗಿ ಆಯ್ಕೆಯಾಗಲು ಕಾರಣರಾದ ಹಾಸನ, ಕೊಡಗು, ಚಿಕ್ಕಮಗಳೂರು ಜಿಲ್ಲೆಗಳ ಪ್ರತಿನಿಧಿಸುವ ಎಲ್ಲಾ ನಿರ್ದೇಶಕರು, ಹಾಲು ಉತ್ಪಾದಕರ ಸಂಘಗಳವರಿಗೆ ಧನ್ಯವಾದ. ಹಾಲು ಒಕ್ಕೂಟದ ಎಲ್ಲರೂ, ಶಾಸಕರ ಸಹಕಾರ, ಮಾರ್ಗದರ್ಶನದಿಂದ ರೈತರ ಅಭಿವೃದ್ಧಿಗೆ ಶ್ರಮಿಸುವುದಾಗಿ ಹೇಳಿದರು.

ಹಾಸನ ಹಾಲು ಒಕ್ಕೂಟ ಈ ಹಂತಕ್ಕೆ ಬೆಳೆಯಲು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು, ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಅವರ ಸಹಕಾರ ಕಾರಣ. ಹಾಲು ಉತ್ಪಾದನೆಯಲ್ಲಿ ಹಾಮೂಲ್ ರಾಜ್ಯದಲ್ಲಿ ಎರಡನೇ ಸ್ಥಾನದಲ್ಲಿದ್ದು, ಮೊದಲ ಸ್ಥಾನಕ್ಕೆ ಕೊಂಡೊಯ್ಯಲು ಎಲ್ಲಾ ರೀತಿಯ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು. ರೇವಣ್ಣ ಅವರಿಗೆ ಅಭಿನಂದನೆ ಸಲ್ಲಿಸಿದ ಶ್ರವಣಬೆಳಗೊಳ ಶಾಸಕ ಸಿ.ಎನ್. ಬಾಲಕೃಷ್ಣ, ಹಾಸನ ಹಾಲು ಒಕ್ಕೂಟದಿಂದ ದಿನವಹಿ 12.50 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದ್ದು, ಜಿಲ್ಲೆಯಲ್ಲಿ ಹೈನೋದ್ಯಮ ಅಭಿವೃದ್ಧಿಗೆ ರೇವಣ್ಣ ಅವರ ಕೊಡುಗೆ ಅಪಾರ ಇದೆ ಎಂದು ಬಣ್ಣಿಸಿದರು.

ಶೇಷಾದ್ರಿಪುರಂ ಕಾಲೇಜು ವಿದ್ಯಾರ್ಥಿಗಳಿಗೆ ಆರ್‌ವೈಎಲ್‌ಎ 2024 ರೋಟರಿ ಯುವ ನಾಯಕತ್ವ ಪ್ರಶಸ್ತಿಗಳು



ಮೈಸೂರು, ಮಾ. 19-ರೋಟರಿ ಕ್ಲಬ್ ಆಫ್ ಮೈಸೂರು ಮಿಡ್‌ಟೌನ್ ವತಿಯಿಂದ ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದ ಸಭಾಂಗಣದಲ್ಲಿ ಎರಡು ದಿನಗಳ ನಾಯಕತ್ವ ಗುಣವರ್ಧಕ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜಿನ ರೋಟರಾಕ್ಟ್ ಕ್ಲಬ್‌ನ 53 ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ತಜ್ಞರಾದ ರಘುನಾಥ ಆಲದಕಟ್ಟಿ ನೇತೃತ್ವದಲ್ಲಿ ಸಿ.ಪಿ.ಆರ್. ಚಿಕಿತ್ಸೆ ಕುರಿತು ಕಿರುಕಾರ್ಯಾಗಾರವನ್ನು ನಡೆಸಲಾಯಿತು. ರಘುನಾಥ ಅವರ ಮಾರ್ಗದರ್ಶನದಲ್ಲಿ ಅವಘಡಗಳು ಮತ್ತು ತುರ್ತು ಸಂದರ್ಭಗಳು ಸಂಭವಿಸಿದಾಗ ತಕ್ಷಣದ ಮುನ್ನೆಚ್ಚರಿಕಾ ಕ್ರಮದ ಮೂಲಕ ಜೀವಗಳನ್ನು ಉಳಿಸಲು ಮಾಡಬೇಕಾದ ಪ್ರಮುಖ ತಂತ್ರಗಳನ್ನು ತಿಳಿಸಿಕೊಡಲಾಯಿತು.

ಜಗದೀಶ್ ಅಡಪ ಮಾತನಾಡಿ, ಅಗ್ನಿಶಾಮಕ ಸುರಕ್ಷತಾ ನಿರ್ವಹಣೆಯ ಪ್ರಾತ್ಯಕ್ಷಿಕೆ ನಡೆಸಿಕೊಡುವ ಮೂಲಕ ಬೆಂಕಿಯ ಸ್ಫೋಟಗಳನ್ನು ತಡೆಗಟ್ಟುವಲ್ಲಿ ಸರಳ ಸುರಕ್ಷತಾ ಕ್ರಮಗಳನ್ನು ತಿಳಿಸುವುದರೊಂದಿಗೆ ಅವುಗಳ ಮಹತ್ವವನ್ನು ತಿಳಿಸಿದರು.

ಉದಯೋನ್ಮುಖ ಭಾರತದ ರಾಯಭಾರಿ ದೀಪಕ್ ವೋಹ್ರಾ, ವಿದ್ಯಾರ್ಥಿಗಳಲ್ಲಿ ಆಳವಾದ ದೇಶಭಕ್ತಿಯ ಭಾವನೆಯನ್ನು ಹುಟ್ಟುಹಾಕಿ, ತಮ್ಮ ರಾಷ್ಟ್ರಕ್ಕಾಗಿ ತಮ್ಮನ್ನು ತೊಡಗಿಸಿಕೊಳ್ಳಲು ಸದಾ ಸಿದ್ಧರಾಗಿರುವಂತೆ ಪ್ರೇರೇಪಿಸಿದರು. ಡಾ.ಉಷಾ ಯಾನಮದಿರಾ, ಸಾಮಾಜಿಕ ಬುದ್ಧಿವಂತಿಕೆ ಮತ್ತು ಯುವ ರಾಜತಾಂತ್ರಿಕತೆಯ ಬಗ್ಗೆ ಪ್ರವಚನ ನೀಡಿದರು.

ಚೇತನ್ ರಾಮ್, ನಾಯಕತ್ವ ಅಭಿವೃದ್ಧಿ ಅಧಿವೇಶನದ ಮೂಲಕ ವಿದ್ಯಾರ್ಥಿಗಳ ಗಮನ ಸೆಳೆದರು. ರೊಟೇರಿಯನ್ ಭಾನುಚಂದ್ರ ಆರ್ಥಿಕ ನಿರ್ವಹಣೆಯ ಕುರಿತು ಉಪನ್ಯಾಸ ನೀಡಿದರು. ಅಂದು ಸಂಜೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ಶೇಷಾದ್ರಿಪುರಂ ಪದವಿ ಕಾಲೇಜಿನ ವಿದ್ಯಾರ್ಥಿಗಳ ತಂಡವು ಕರ್ನಾಟಕದ ಜಾನಪದ ಕಂಸಾಳೆ ನೃತ್ಯವನ್ನು ಪ್ರದರ್ಶಿಸಿ ಅತ್ಯುತ್ತಮ ಸಾಂಸ್ಕೃತಿಕ ಪ್ರದರ್ಶನ ಪ್ರಶಸ್ತಿಯನ್ನು ಪಡೆದುಕೊಂಡಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಚಾಯ್ಸ್ ಈಕ್ವಿಟಿ ಗಳಿಕೆ-ಉಳಿಕೆ- ಹೂಡಿಕೆ-ಹಣಕಾಸಿನ ಮಾಹಿತಿಯ ಬಾನುಲಿ ಸರಣಿ, ಪ್ರಸ್ತುತಿ-ಮೂಕನಹಳ್ಳಿ ರಂಗಸ್ವಾಮಿ, 6.40 ಪದಸಂಸ್ಕೃತಿ-ಪ್ರೊ. ಲಕ್ಷ್ಮೀನಾರಾಯಣ ಅರೋರಾ, 6.50 ರೈತರಿಗೆ ಸಲಹೆ, 7.15 ಆರೋಗ್ಯವಾಣಿ-ಪ್ರಾಯೋಜಿತ ಕಾರ್ಯಕ್ರಮ, 9.00 ವೃತ್ತಿಮಾರ್ಗದರ್ಶನ-ಮೈಸೂರಿನ ಸಿಎಸ್‌ಐಆರ್, ಸಿಎಫ್‌ಟಿಆರ್‌ಐನಲ್ಲಿರುವ ಆಹಾರ ಸಂಸ್ಕರಣೆ ಮತ್ತು ತಂತ್ರಜ್ಞಾನದ ಕೋರ್ಸ್‌ಗಳು ಮತ್ತು ವೃತ್ತಿಪರ ಅವಕಾಶಗಳು ಕುರಿತು ಅರುಣ್ ಕುಮಾರ್ ಅವರೊಂದಿಗೆ ಸಂದರ್ಶನ, 10.00ಆಲಿ ಅಹಮದ್ ಹುಸೇನ್-ಷಹನಾಯ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು-ಆರ್. ಶೈಲ, 3.00ಸಿಕ್ಕಿಲ್ ಸಹೋದರಿಯರು-ವೇಣುವಾದನ, 4.00 ಮಹಿಳಾರಂಗ 'ಸ್ತ್ರೀ ಚೇತನ'. ಭಾಗವಹಿಸುವವರು ಉದ್ಯಮಿ ಹಾಗೂ ಸಮಾಜಸೇವಕಿ ಶುಭಾ ಸಂಜಯ್ ಅರಸ್, 4.45 ಹಿಂದಿ ಪಾಠ, ಪ್ರಸ್ತುತಿ - ಸ್ಮಿತಾ ಚಿಪ್ಲೂಣ್‌ಕರ್, 6.50 ಕೃಷಿರಂಗ-ಕೈ ತೋಟ ಹಾಗೂ ತಾರಸಿ ತೋಟದ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ ಡಾ. ದಿವ್ಯಾ ಮತ್ತು ಎಸ್.ಮೋಹನ, 8.00 ಕ್ಷಿತಿಜ-ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 ಎಂ. ವೆಂಕಟೇಶ್ ಕುಮಾರ್-ಹಾಡುಗಾರಿಕೆ, 10.00 ಹಳ್ಳಿಹಾಡು, 10.30 ಸವಿನೆನಪು



ಇಂದಿನ ಪಂಚಾಂಗ

20.3.2024 ಬುಧವಾರ, ಮಳೆ ನಕ್ಷತ್ರ: ಉತ್ತರಾಭಾದ್ರ 17.03.2024ರಿಂದ 30.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಪುಷ್ಯ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ.

■ **ದೀಕ್ಷಿತ್ ಹೆಲ್ತ್ ಕ್ಲಿನಿಕ್ ಮತ್ತು ಸಂಶೋಧನಾ ಕೇಂದ್ರ :** ಸ್ವರ್ಣಾಮೃತಪ್ರಾಶನ, ಸ್ಥಳ: ಕೇಂದ್ರದ ಆವರಣ, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರಂ, ಬೆಳಗ್ಗೆ 7 ರಿಂದ.

■ **ದೀಕ್ಷಿತ್ ಆರೋಗ್ಯ ಧಾಮ :** ಸ್ವರ್ಣಾಮೃತಪ್ರಾಶನ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ವಿಜಯನಗರ 3ನೇ ಹಂತ, ಬೆಳಗ್ಗೆ 7ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸುವರ್ಣಪ್ರಾಶನ ಅಭಿಯಾನ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 8ರಿಂದ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಮುಖ್ಯ ಅತಿಥಿಗಳು : ಸಮಾಜಕಾರ್ಯ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಹೆಚ್.ಪಿ. ಜ್ಯೋತಿ, ಕರಾಮುವಿವಿ ಕುಲಸಚಿವ ಪ್ರೊ. ಕೆ.ಬಿ. ಪ್ರವೀಣ್, ಸ್ಥಳ: ಕಾವೇರಿ ಸಭಾಂಗಣ, ಬೆಳಗ್ಗೆ 11.30ಕ್ಕೆ.

■ **ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್:** ವಿಶ್ವ ಗುಬ್ಬಚ್ಚಿ ದಿನಾಚರಣೆ ಅಂಗವಾಗಿ ಗುಬ್ಬಚ್ಚಿ ಹಬ್ಬ, ಮುಖ್ಯ ಅತಿಥಿಗಳು: ಪಕ್ಷಿ ತಜ್ಞ, ಪರಿಸರವಾದಿ ಸಪ್ತ ಗಿರೀಶ್, ಕರಾಮುವಿವಿ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಆರ್.ಎಚ್.ಪವಿತ್ರ, ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಪರಿಸರ ಪ್ರೇಮಿ ಶ್ರೀನಿವಾಸ್ ಭಾಷ್ಯಂ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸರ್ಕಾರಿ ಶಾಲೆ ಮುಖ್ಯೋಪಾಧ್ಯಾಯ ಮೋಹನ್ ಕುಮಾರ್, ಅಜಯ್ ಶಾಸ್ತ್ರಿ, ಸ್ಥಳ: ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ (ಗುಬ್ಬಚ್ಚಿ ಶಾಲೆ) ಆವರಣ, ಕೃಷ್ಣಮೂರ್ತಿಪುರಂ, ಮಧ್ಯಾಹ್ನ 12ಕ್ಕೆ.

■ **ಜೆಎಸ್‌ಎಸ್ ವಿಕಲಚೇತನರ ಪಾಲಿಟೆಕ್ನಿಕ್:** ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ: ಪ್ರಾಜೆಕ್ಟ್ ಅಂಡ್ ಪ್ರೋಗ್ರಾಮ್ಸ್ ಚೆಸೈರ್ ಡಿಸಬಲಿಟಿ ಟ್ರಸ್ಟ್ ಮುಖ್ಯಸ್ಥ ಪಿ.ವಿಜಯ್, ಸಂಜೆ 4ಕ್ಕೆ ಹಿರಿಯ ವೈದ್ಯಕೀಯ ಅಧಿಕಾರಿ ಡಾ.ಸಿ.ಕಾವೇರಿ ನಾಣಯ್ಯ ಅವರಿಂದ ಆರೋಗ್ಯ ಮತ್ತು ನಿತ್ಯ ಜೀವನದಲ್ಲಿ ಆರೋಗ್ಯ ಪದ್ಧತಿ ಕುರಿತು ಉಪನ್ಯಾಸ, ಅಧ್ಯಕ್ಷತೆ: ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಮುಖ್ಯಸ್ಥ ಎನ್.ಎಂ.ಶಿವಕುಮಾರಸ್ವಾಮಿ, ಸಂಜೆ 6ರಿಂದ ಜನಪದ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಅಂತಾರಾಷ್ಟ್ರೀಯ ಜನಪದ ಗಾಯಕ ಜಿ. ಅಮ್ಮ ರಾಮಚಂದ್ರ, ಅಧ್ಯಕ್ಷತೆ: ಜೆಎಸ್‌ಎಸ್ ಪಾಲಿಟೆಕ್ನಿಕ್ ಪ್ರಾಂಶುಪಾಲ ಡಾ.ಕೆ.ಎಸ್.ಭಕ್ತವತ್ಸಲ, ಸ್ಥಳ: ಪಾಲಿಟೆಕ್ನಿಕ್ ಆವರಣ.

■ **ದೇಸಿರಂಗ ಸಾಂಸ್ಕೃತಿಕ ಸಂಸ್ಥೆ:** ರಂಗ-ನೃತ್ಯ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಜಾನಪದ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರೊ.ಕಾಳೇಗೌಡ ನಾಗವಾರ, ಅಧ್ಯಕ್ಷತೆ: ರಂಗಾಯಣ ಉಪ ನಿರ್ದೇಶಕಿ ನಿರ್ಮಲ ಮಠಪತಿ, ಮುಖ್ಯ ಅತಿಥಿಗಳು: ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಕನ್ನಡ ವಿಭಾಗದ ಮುಖ್ಯಸ್ಥ ಡಾ.ಕೆ.ಇ.ಗೋವಿಂದೇಗೌಡ, ಸಹಾಯಕ ಪ್ರಾಧ್ಯಾಪಕ ಎಂ. ನಂಜುಂಡಯ್ಯ, ಪ್ರಾಧ್ಯಾಪಕಿ ಡಾ.ವಿಜಯಲಕ್ಷ್ಮಿ ಮನಾಪುರ, ಸ್ಥಳ: ಶ್ರೀರಂಗ ವೇದಿಕೆ, ರಂಗಾಯಣ, ಸಂಜೆ 4.30ಕ್ಕೆ

ಶ್ರೇಷ್ಠ ಭಾರತಕ್ಕಾಗಿ ಬಿಜೆಪಿಗೆ ಮತ ಹಾಕಿ

ನಿಮ್ಮ ಆಶೀರ್ವಾದ ನನ್ನ ಮೇಲಿರಲಿ; ವಿಪ್ರ ಸಂಘಟನೆಗಳಲ್ಲಿ ಬಿಜೆಪಿ ಅಭ್ಯರ್ಥಿ ಯದುವೀರ್ ಮನವಿ



ಮೈಸೂರಿನ ಕೃಷ್ಣಮೂರ್ತಿಪುರಂನ ಶ್ರೀರಾಮ ಮಂದಿರದಲ್ಲಿ ಮಂಗಳವಾರ ಮೈಸೂರು–ಕೊಡಗು ಬಿಜೆಪಿ ಅಭ್ಯರ್ಥಿ ಯದುವೀರ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು,ಮಾ.19(ಪಿಎಂ)– ಶ್ರೇಷ್ಠ ಭಾರತ ನಿರ್ಮಾಣಕ್ಕಾಗಿ ನಮ್ಮ ಪ್ರಧಾನ ಮಂತ್ರಿಗಳು ದೂರದೃಷ್ಟಿ ಹೊಂದಿದ್ದು, ಅದಕ್ಕಾಗಿ ಬಿಜೆಪಿಗೆ ಮತ ಚಲಾಯಿಸಿ. ನಿಮ್ಮ ಆಶೀರ್ವಾದ ನನ್ನ ಮೇಲಿರಲಿ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ವಿಪ್ರ ಸಮುದಾಯದ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸದಸ್ಯರಲ್ಲಿ ಮನವಿ ಮಾಡಿದರು.

ಮೈಸೂರಿನ ಕೃಷ್ಣಮೂರ್ತಿಪುರಂನ ಶ್ರೀರಾಮ ಮಂದಿರದಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ವಿಪ್ರ ಸಂಘ–ಸಂಸ್ಥೆಗಳ ಪದಾಧಿಕಾರಿಗಳ ಮತ್ತು ಸದಸ್ಯರೊಂದಿಗಿನ ಪರಿಚಯ ಕಾರ್ಯಕ್ರಮದಲ್ಲಿ (ಅಭ್ಯರ್ಥಿ ಮತ್ತು ವಿಪ್ರ ಸಂಘಟನೆಗಳ ಪರಸ್ಪರ ಪರಿಚಯ ಕಾರ್ಯಕ್ರಮ) ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಮೈಸೂರು ಸಂಸ್ಥಾನದ ಪರಂಪರೆ ಸಂರಕ್ಷಣೆಯೊಂದಿಗೆ ಮುಂದುವರೆಯುತ್ತಿದ್ದೇನೆ. ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಬೇಕೆಂಬ ಬಯಕೆ ವರ್ಷದಿಂದಲೂ ಇತ್ತು. ಕಾರಣ ನೀತಿ–ನಿಯಮ ರಚಿಸುವ ಮೂಲಕ ಸಮಾಜದಲ್ಲಿ ಉನ್ನತ ಬದಲಾವಣೆ ತರಲು ರಾಜಕೀಯ ಅಧಿಕಾರದಿಂದ ಮಾತ್ರ ಸಾಧ್ಯ. ನಿಮ್ಮ ಮತ, ಸಹಕಾರದೊಂದಿಗೆ ಮೈಸೂರು–ಕೊಡಗು ಕ್ಷೇತ್ರದಲ್ಲಿ ದೊಡ್ಡ ಬದಲಾವಣೆ ತರಬೇಕೆಂಬ ನಿಟ್ಟಿನಲ್ಲಿ ಮುಂದುವರೆಯುತ್ತಿದ್ದೇನೆ ಎಂದರು.

ಭಾರತೀಯ ಪರಂಪರೆ ಮತ್ತು ಸಂಸ್ಕೃತಿ ಸಂರಕ್ಷಣೆಯನ್ನು ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಮಾಡಲಾಗುತ್ತಿದೆ. ಪ್ರಸ್ತುತ ಭಾರತೀಯ ಪರಂಪರೆ ಸಂರಕ್ಷಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮುನ್ನಡೆಯುತ್ತಿದೆ. ಹಾಗಾಗಿ ಈ ಚುನಾವಣೆ ದೇಶಕ್ಕಾಗಿಯೇ ಆಗಿದೆ. ಈ ನಿಟ್ಟಿನಲ್ಲಿ ಬಿಜೆಪಿಗೆ ತಮ್ಮ ಮತದಾನ ಮಾಡಿ ಎಂದು ಹೇಳಿದರು.

ಮೈಸೂರು ಅರಸರು ವಿವಿಧ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ಸಮಾಜಕ್ಕೆ ಅಪಾರ ಕೊಡುಗೆ ನೀಡಿದರು. ಮೈಸೂರಿನ ಅಂತಹ ಸುವರ್ಣ ಯುಗದ ಕಥೆಗಳನ್ನು ನಮ್ಮ ಹಿರಿಯರಿಂದ ಕೇಳಿದ್ದೇವೆ ಈಗ ಕಾಲ ಬಂದಿದ್ದು ನಾವೆಲ್ಲರೂ ಜೊತೆಯಲ್ಲಿ ಭಾರತ ಮಾತೆಗಾಗಿ ಮತ ಚಲಾಯಿಸಿ ಶ್ರೇಷ್ಠ ಭಾರತ ನಿರ್ಮಾಣದಲ್ಲಿ ನಮ್ಮ ಪಾತ್ರವೂ ಇತ್ತೆಂಬ ಸುವರ್ಣ ಕಥೆಗಳನ್ನು ನಮ್ಮ ಮುಂದಿನ ಪೀಳೀಗೆಗೆ ಹೇಳಬೇಕಿದೆ. ವಿಕಸಿತ ಭಾರತ ನಿರ್ಮಾಣಕ್ಕಾಗಿ ನಮ್ಮ–ನಿಮ್ಮೆಲ್ಲರ ಪಾತ್ರ ಇಂದು ಅಗತ್ಯವಾಗಿದೆ ಎಂದರು.

ನಿಮ್ಮ ಆಶೀರ್ವಾದ ನೀಡಿದರೆ ನಮ್ಮ ಕಚೇರಿ ಕೇವಲ ಅರಮನೆಗೆ ಸೀಮಿತವಾಗುವುದಿಲ್ಲ. ಹೊರಗೂ ಇರಲಿದೆ. ಪರಿಚಯಕ್ಕಾಗಿ ಈ ಒಂದು ಸಭೆ ನಡೆಸಿದ್ದೀರಾ. ನಿಮ್ಮ ಅನೇಕ ಚಟುವಟಿಕೆಗಳಲ್ಲಿ ಈಗಾಗಲೇ ಭಾಗವಹಿಸಿದ್ದೇನೆ. ಹಾಗಾಗಿ ನಿಮ್ಮಲ್ಲಿ ಅನೇಕರ ಪರಿಚಯ ಈ ಮೊದಲೇ ಇದೆ ಎಂದು ತಿಳಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ನನಗೆ ಆಶೀರ್ವಾದ ಮಾಡಿದ್ದೀರಿ. ಅದೇ ರೀತಿಯಲ್ಲಿ ಯದುವೀರ್ ಅವರಿಗೂ ಆಶೀರ್ವಾದ ಮಾಡಿ. ನರೇಂದ್ರ ಮೋದಿ ನೇತೃತ್ವದಲ್ಲಿ 400ಕ್ಕೂ ಹೆಚ್ಚು ಸ್ಥಾನಗಳನ್ನು ಪಡೆಯುವ ಸಂಕಲ್ಪ ಮಾಡಲಾಗಿದೆ. ಈ ಸಂಕಲ್ಪದ ಮೊದಲನೆಯ ಗೆಲುವು ಮೈಸೂರು–ಕೊಡಗು ಕ್ಷೇತ್ರದ್ದಾಗಬೇಕು. ಹಾಗಾಗಿ ಯದುವೀರ್ ಅವರನ್ನು 3 ಲಕ್ಷ ಮತಗಳ ಅಂತರದಲ್ಲಿ ಗೆಲ್ಲಿಸಲು ನಮ್ಮ ಸಮುದಾಯದ ಪಾತ್ರ ದೊಡ್ಡದಿದೆ. ದೇಶವಿಂದು ಬಲಿಷ್ಠವಾಗುತ್ತಿರುವ ಸಂದರ್ಭದಲ್ಲಿ ನಮ್ಮ ಮೈಸೂರಿನ ಕೊಡುಗೆಯೂ ಬೇಕಾಗಿದೆ. ಯದುವೀರ್ ಅವರು ಲೋಕಸಭಾ ಸದಸ್ಯರಾಗುವ ಮೂಲಕ ಮಂತ್ರಿಯೂ ಆಗಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದು ತಿಳಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ವಿಪ್ರ ಸಂಘಟನೆಗಳಿಂದಲೂ ಪ್ರತ್ಯೇಕವಾಗಿ ಯದುವೀರ್ ಅವರನ್ನು ಸನ್ಮಾನಿಸಲಾಯಿತು. ವಿಪ್ರ ಜಾಗೃತಿ ವೇದಿಕೆ, ವಿವೇಕಾನಂದ ಬ್ರಾಹ್ಮಣ ಸಂಘ, ಹಳೇನಾಡು ಬ್ರಾಹ್ಮಣ ಸಂಘ, ಬಡಗನಾಡು ಬ್ರಾಹ್ಮಣ ಸಂಘ, ಆದರ್ಶ ಸೇವಾ ಸಂಘ ಸೇರಿದಂತೆ ಹಲವು ಸಂಘಟನೆಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ನಗರ ಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮ್‌ಪ್ರಸಾದ್, ಸಮುದಾಯದ ಮುಖಂಡರಾದ ಗೋಪಾಲ್‌ರಾವ್, ಪುಷ್ಪ ಅಯ್ಯಂಗಾರ್, ಡಾ.ಲಕ್ಷ್ಮೀ ವೇದಿಕೆಯಲ್ಲಿದ್ದರು. ಜಿಎಸ್‌ಎಸ್‌ಎಸ್ ಸಂಸ್ಥೆಯ ವಾಸಿಷ ಪಂಡಿತ್, ನಗರ ಪಾಲಿಕೆ ಮಾಜಿ ಸದಸ್ಯ ಪಾರ್ಥಸಾರಥಿ, ಸಮುದಾಯದ ಮುಖಂಡರಾದ ವಿಕ್ರಂಅಯ್ಯಂಗಾರ್, ಅಜಯ್‌ಶಾಸ್ತ್ರಿ, ಚಕ್ರಪಾಣಿ, ನಿಶಾಂತ್, ಸುದೀಂದ್ರ ಭಾಷ್ಯಂ, ಮಿರ್ಲೆ ಫಣೀಶ್ ಮತ್ತಿತರರು ಹಾಜರಿದ್ದರು.

ಸಂಘಟನೆಗಳ ಬೆಂಬಲ

ಮೈಸೂರು ಪ್ರಾಂತ್ಯ ಮಾತ್ರವಲ್ಲದೇ ಇಡೀ ಕರ್ನಾಟಕದುದ್ದಕ್ಕೂ ಮೈಸೂರು ಮಹಾರಾಜರ ಕೊಡುಗೆ ಅಪಾರವಾಗಿದೆ ತಮ್ಮ ಪೂರ್ವಜರಂತೆ ತಾವು ಸಮಾಜಕ್ಕೆ ಕೊಡುಗೆ ನೀಡಬೇಕೆಂಬ ತುಡಿತವನ್ನು ಯದುವೀರ್ ಹೊಂದಿದ್ದಾರೆ. ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳ ಮಧ್ಯೆ ಇದ್ದು ಅವರಿಗೆ ಸ್ಪಂದಿಸಬೇಕೆಂಬ ಉತ್ಸಾಹದಿಂದ ರಾಜಕೀಯ ಪ್ರವೇಶಿಸಿದ್ದಾರೆ. ಜನ ಸೇವೆಯನ್ನು ರಾಜಕೀಯ ಅಧಿಕಾರದಲ್ಲಿ ಮುಂದುವರೆಸಬೇಕೆಂದು ಆಕಾಂಕ್ಷೆ ಹೊಂದಿದ್ದಾರೆ. ಅವರಿಗೆ ಬೆಂಬಲ ವ್ಯಕ್ತಪಡಿಸಲು ಮೈಸೂರು ನಗರ ಮತ್ತು ಜಿಲ್ಲೆಯ 30ಕ್ಕೂ ಹೆಚ್ಚು ವಿಪ್ರ ಸಂಘಟನೆಗಳು ಇಂದಿನ ಸಭೆಯಲ್ಲಿ ಪಾಲ್ಗೊಂಡಿವೆ.

-ಡಿ.ಟಿ.ಪ್ರಕಾಶ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ

ಲೋಕಸಭಾ ಚುನಾವಣೆ ಹಿನ್ನೆಲೆ;

ಯುಪಿಎಸ್‌ಸಿ 2024ರ ಪ್ರಿಲಿಮ್ ಪರೀಕ್ಷೆ ಮುಂದೂಡಿಕೆ

ನವದೆಹಲಿ, ಮಾ.19– ಮುಂಬರುವ ಲೋಕಸಭಾ ಚುನಾವಣೆಯ ವೇಳಾಪಟ್ಟಿಯಿಂದಾಗಿ ಯುಪಿಎಸ್‌ಸಿ ಸಿಎಸ್‌ಇ ಪರೀಕ್ಷೆಯನ್ನು ಮುಂದೂಡಲಾಗಿದ್ದು, ಜೂನ್ 16, 2024ರಂದು ನಡೆಸಲಾಗುವುದು. ಈ ಮೊದಲು ಮೇ 26ರಂದು ಪರೀಕ್ಷೆ ನಿಗದಿಯಾಗಿತ್ತು.

ಆಯೋಗ ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಿದ ಅಧಿಸೂಚನೆಯಲ್ಲಿ ಮುಂಬರುವ ಸಾರ್ವತ್ರಿಕ ಚುನಾವಣೆಯ ವೇಳಾಪಟ್ಟಿಯಿಂದಾಗಿ, ಆಯೋಗವು ನಾಗರಿಕ ಸೇವೆಗಳ (ಪ್ರಾಥಮಿಕ) ಪರೀಕ್ಷೆ – 2024ಯನ್ನು ಮುಂದೂಡಲು ನಿರ್ಧರಿಸಿದೆ. ಇದು ಭಾರತೀಯ ಅರಣ್ಯ ಸೇವೆಗಳ ಪರೀಕ್ಷೆ 2024 ರ ಸ್ಕ್ರೀನಿಂಗ್ ಪರೀಕ್ಷೆಯಾಗಿ ಕಾರ್ಯನಿರ್ವಹಿಸುತ್ತದೆ, ಇದು 26–05–2024 ರಿಂದ 16–06–2024 ರವರೆಗೆ ಮುಂದೂಡಲು ನಿರ್ಧರಿಸಿದೆ ಎಂದು ತಿಳಿಸಿದೆ.

TENDER NOTICE AT&S

Sealed tenders are invited for **Hazardous & Non-Hazardous Scrap Sales from authorized recyclers.**

Major Scrap Sale Items: Rejected PCBs, E-waste, Aluminum, Copper, MS & SS scrap, Drill & Router bits, Kraft paper, Solder, Batteries, wooden pallets, plastic cans, Lubricating oils Etc.

Visit us with license certificate to collect tender form from AT&S purchase department on any working day on or before **23.03.2024** between10AM to 5PM. Last date to submit the tender is **25. 03.2024** before 5PM.

Senior Manager – Purchase
M/s. AT&S India Pvt. Limited
12A,12B & 82 Nanjangud Industrial Area, Nanjangud, Mysore District
Tel: +91(0) 08221-244000. E-mail: kanti.sumanth@in.ats.net

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

9ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆದಿದೆ. ನಿಮ್ಮ ಜೀವನ ಶೈಲಿಯನ್ನು ಸದಾಕಾಲ ಸ್ಮರಿಸುತ್ತಾ, ಅಳವಡಿಸಿಕೊಳ್ಳುತ್ತಾ ಜೀವನ ಸಾಗಿದೆ. ದುಃಖತಪ್ತರು ಪತ್ನಿ ಶ್ರೀಮತಿ ಶಶಿಕಲಾ ಶಂಕರ್, ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು ಹಾಗೂ ಕುಟುಂಬವರ್ಗ, ಬೆಣಕನಹಳ್ಳಿ
ಬಿ.ಸೋಮಶಂಕರ್

ಮದುವೆ, ಶುಭ ಸಮಾರಂಭಗಳಿಗೆ
50% ರಿಯಾಯಿತಿ
ಕಾಂಚೀಪುರಂ ರೇಷ್ಮೆ ಸೀರೆಗಳು
ಮಾರಾಟ ಮತ್ತು
ಹಳೆ ಸೀರೆಗಳ ಎಕ್ಸ್‌ಚೇಂಜ್ ಆಫರ್
ಈ ಅವಕಾಶ ಕೆಲವೇ ದಿನಗಳು ಮಾತ್ರ
ಹೋಟೆಲ್ ಮಯೂರ ಹೊಯ್ಸಳ
(ಕೆಎಸ್‌ಟಿಡಿಸಿ ಯೂನಿಟ್), ಜೆಎಲ್‌ಬಿ ರಸ್ತೆ, ಮೈಸೂರು
ಮೊ. : 9481820079

ಗೌರವಾನ್ವಿತ 12ನೇ ಹೆಚ್ಚುವರಿ 1ನೇ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, (ಕಿ.ಶ್ರೇ) ಮೈಸೂರು

ಅಸಲು ದಾವಾ ಸಂಖ್ಯೆ: 1327/2022

ವಾದಿ : ಶ್ರೀ ಎಲ್.ನಾಗರಾಜು, ಬಿನ್ ಲೇಟ್ ಲಿಂಗಪ್ಪ, ಸುಮಾರು 56 ವರ್ಷ,
ವಾಸ: ಮುರಡಗಳ್ಳಿ ಗ್ರಾಮ, ಜಯಪುರ ಹೋಬಳಿ, ಮೈಸೂರು ತಾಲ್ಲೂಕು.

ವಿರುದ್ಧ

ಪ್ರತಿವಾದಿ : ಅನಂತರಾಮು.ಕೆ.ಎನ್. ಬಿನ್. ಲೇಟ್ ನಾರಾಯಣಗೌಡ, ಸುಮಾರು ವಯಸ್ಸು 47 ವರ್ಷ, ಕಟೇರಿ ಗ್ರಾಮ,
ವಾಸ: ಅರಳಿಗುಪ್ಪ ಅಂಚೆ, ಚಿನಕುರಳಿ ಹೋಬಳಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.

ಸಾರ್ವಜನಿಕ ಪ್ರಕಟಣೆ

ವಾದಿಯು ಪ್ರತಿವಾದಿಯ ವಿರುದ್ಧ ಮೇಲ್ಕಂಡ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ: 1327/2022 ರಲ್ಲಿ ಈ ನ್ಯಾಯಾಲಯದಲ್ಲಿ ಶಾಶ್ವತ ಪ್ರತಿಬಂಧಕಾಜ್ಞೆ ಕೋರಿ ದಾವಾ ಸಲ್ಲಿಸಿರುತ್ತಾರೆ. ಸದರಿ ದಾವಾದಲ್ಲಿ ತಾವು 1ನೇ ಪ್ರತಿವಾದಿಗಳಾಗಿರುತ್ತೀರಿ. ತಾವು ಸದರಿ ದಾವಾದಲ್ಲಿ ನ್ಯಾಯಾಲಯದಿಂದ ನೀಡಿದ ಸಮನ್ಸ್‌ಗೆ ಹಾಜರಾಗಿರುವುದಿಲ್ಲ. ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ, ಸದರಿ ದಾವೆಯು ದಿನಾಂಕ: 26/04/2024 ರಂದು ವಿಚಾರಣೆಗೆ ಬಾಕಿ ಇರುತ್ತದೆ. ಮೇಲ್ಕಂಡ ದಿನಾಂಕದಂದು ಸರಿಯಾಗಿ 11.00 ಗಂಟೆಗೆ ನೀವುಗಳು ಖುದ್ದಾಗಿ ಆಗಲೀ ಅಥವಾ ವಕೀಲರ ಮೂಲಕವಾಗಲೀ ಈ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು. ತಪ್ಪಿದಲ್ಲಿ, ಮಾನ್ಯ ಈ ನ್ಯಾಯಾಲಯವು ಏಕಪಕ್ಷೀಯವಾಗಿ ಸದರಿ ದಾವೆಯನ್ನು ಇತ್ಯರ್ಥಪಡಿಸಲಾಗುತ್ತದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಗೌರವಾನ್ವಿತ 12ನೇ ಹೆಚ್ಚುವರಿ 1ನೇ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, (ಕಿ.ಶ್ರೇ) ಮೈಸೂರು

ವಾದಿ ಪರ ವಕೀಲರು
ಸಹಿ/– ಜಿ.ಜಗದೀಶ್, ಬಿ.ಎ., ಎಲ್.ಎಲ್.ಬಿ
ವಕೀಲರು, ನಂ. 48, 2ನೇ ಮೇನ್,
2ನೇ ಕ್ರಾಸ್, ಶ್ರೀರಾಮಮಂದಿರದ ಹತ್ತಿರ,
ಗೀತಾ ಸ್ಟೋರ್ ಮೇಲುಗಡೆ
ಜಯನಗರ, ಮೈಸೂರು–14
ದಿನಾಂಕ: 18–03–2024

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ನಾಲ್ಕನೇ ವರ್ಷದ ಸವಿನೆನಪು



ನಿಧನ: 20.03.2020
ವಿ. ರಾಜೀವ
ನನ್ನ ತಮ್ಮನಾದ ವಿ.ರಾಜೀವ ರವರ 4ನೇ ವರ್ಷದ ಸವಿನೆನಪು
ದುಃಖತಪ್ತರು: ಹೆಂಡತಿ, ಮಗ ಮತ್ತು ಕುಟುಂಬಸ್ಥರು,

HP DTCP APPROVAL
ನಿಸರ್ಗ ಇಕೋ ಪ್ಯಾರಡೈಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
ನಿಮ್ಮ ಕನಸಿನ ನಿವೇಶನ ಮೈಸೂರಿನಲ್ಲಿ
ಸುಲಭ 4 ಕಂತುಗಳ ಸೌಲಭ್ಯವಿದೆ
ಕೇವಲ ₹650/ ಪ್ರತಿ ಚದರ ಅಡಿ
30x40 | 30x50 | 40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಕೆಲವೇ ಸೈಟ್‌ಗಳು ಮಾತ್ರ ಲಭ್ಯ
ಹೈಲ್ಯಾಂಡ್ ಪ್ರಾಪರ್ಟೀಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
95133 01854
90713 86615

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಹನುಮಾನ್ ಚಾಲೀಸಾ ಕೇಸ್

ಹಲ್ಲೆಗೆ ಒಳಗಾಗಿದ್ದ ಅಂಗಡಿ ಮಾಲೀಕನನ್ನೇ ವಶಕ್ಕೆ ಪಡೆದ ಪೊಲೀಸರು

- ಬೆಂಗಳೂರಿನ ನಗರ್ತಪೇಟೆಯಲ್ಲಿ ಬಿಗುವಿನ ವಾತಾವರಣ
- ಶೋಭಾ ಕರಂದ್ಲಾಜೆ ಸೇರಿದಂತೆ ಹಿಂದೂ ಕಾರ್ಯಕರ್ತರು ವಶಕ್ಕೆ

ಬೆಂಗಳೂರು: ನಗರ್ತಪೇಟೆಯ ಹಿಂದೂ ಯುವಕನ ಮೇಲೆ ಹಲ್ಲೆ ಮಾಡಿದ್ದನ್ನು ಖಂಡಿಸಿ ಪ್ರತಿಭಟನೆಗೆ ಮುಂದಾಗಿದ್ದಕ್ಕೆ ಸಂಸದೆ ಶೋಭಾ ಕರಂದ್ಲಾಜೆ ಸೇರಿ ಹಿಂದೂ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಹನುಮಾನ್ ಚಾಲೀಸಾ ಹಾಕಿದ್ದಕ್ಕೆ ಅಂಗಡಿ ಮಾಲೀಕ ಮುಕೇಶ್ ಮೇಲೆ ಹಲ್ಲೆ ನಡೆಸಿದ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದರು. ಆದರೆ ಬಂಧನಕ್ಕೆ ಒಳಗಾದವರು ಹಲ್ಲೆ ಮಾಡಿದ ವ್ಯಕ್ತಿಗಳಲ್ಲ. ಹಲ್ಲೆ ಮಾಡಿದ ಯುವಕರನ್ನು ರಕ್ಷಿಸಲು ಬೇರೆ ಯುವಕರನ್ನು ಬಂಧಿಸಿದ್ದನ್ನು ಖಂಡಿಸಿ ಇಂದು ಪ್ರತಿಭಟನೆ ನಡೆಸಲು ಹಿಂದೂ ಸಂಘಟನೆಗಳ ಕಾರ್ಯಕರ್ತರು ಸ್ಥಳಕ್ಕೆ ಆಗಮಿಸಿದ್ದರು.

ಅಂಗಡಿ ಮಾಲೀಕ ಮುಕೇಶ್ ಅವರು ಪ್ರತಿಭಟನಾ ರ‍್ಯಾಲಿಗೆ ಮುಂದಾಗುತ್ತಿದ್ದಂತೆ ಪೊಲೀಸರು ಚುನಾವಣಾ ನೀತಿ ಸಂಹಿತೆ ಜಾರಿಯಾಗಿದೆ. ಯಾವುದೇ ಪ್ರತಿಭಟನೆಗೆ ಅವಕಾಶವಿಲ್ಲ ಎಂದು ಹೇಳಿ ಅವರನ್ನು ತಡೆದು ವಶಕ್ಕೆ ಪಡೆದಿದ್ದಾರೆ. ಈ ಸಂದರ್ಭದಲ್ಲಿ ಸ್ಥಳಕ್ಕೆ ಆಗಮಿಸಿದ ರಾಜಾಜಿನಗರದ ಶಾಸಕ ಸುರೇಶ್ ಕುಮಾರ್ ಆಕ್ಷೇಪ ವ್ಯಕ್ತಪಡಿಸಿದರು.

ಮಾಧ್ಯಮಗಳ ಜೊತೆ ಮಾತನಾಡಿದ ಮುಕೇಶ್, ನಾವು ಬೆಂಗಳೂರಿನಲ್ಲಿ ಇಲ್ಲ. ಹಿಂದೆ ಕಾಶ್ಮೀರದಲ್ಲಿ ಆದಂತೆ ಇಲ್ಲಿ ಆಗುತ್ತಿದೆ. ನಮ್ಮ ಮೇಲೆ ಇಲ್ಲಿ ದೌರ್ಜನ್ಯ ನಡೆಯುತ್ತಿದೆ ಎಂದು ಕಿಡಿಕಾರಿದರು. ನೂರಾರು ಪ್ರತಿಭಟನಾಕಾರರು ಪ್ರತಿಭಟನೆಗಿಳಿದಾಗ ಪೊಲೀಸರು ಪರಿಸ್ಥಿತಿಯನ್ನು ನಿಯಂತ್ರಿಸಲು ಹರಸಾಹಸಪಟ್ಟರು.

ಈ ಬಗ್ಗೆ ಮಾಧ್ಯಮದೊಂದಿಗೆ ಮಾತನಾಡಿದ ಸ್ಥಳೀಯರು, ಆ ಗ್ಯಾಂಗ್ ಮೇಲೆ ಬಹಳಷ್ಟು ದೂರುಗಳು ದಾಖಲಾಗಿದ್ದರೂ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ. ಬಂಧನ ಮಾಡಿದವರ ಫೋಟೋ ಬಿಡುಗಡೆ ಮಾಡಿ ಎಂದರೆ ಪೊಲೀಸರು ಇಲ್ಲಿಯವರೆಗೆ ರಿಲೀಸ್ ಮಾಡಿಲ್ಲ. ಈ ಕಾರಣಕ್ಕೆ ನಾವೆಲ್ಲ ಪ್ರತಿಭಟನೆಗೆ ಬಂದಿದ್ದೇವೆ ಎಷ್ಟು ಜನರನ್ನು ಬಂಧಿಸುತ್ತಾರೋ ನಾವು ನೋಡುತ್ತೇವೆ ಎಂದು ಆಕ್ರೋಶ ಹೊರಹಾಕಿದರು. ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿ, ಸ್ವಯಂ ಪ್ರೇರಿತವಾಗಿ ಅಂಗಡಿಗಳನ್ನು ಮುಚ್ಚಿದರು.

ನಾನೊಬ್ಬ ಸ್ಟ್ರಾಂಗ್ ಸಿಎಂ, ನಿಮ್ಮ ಹಾಗೆ ವೀಕ್ ಪಿಎಂ ಅಲ್ಲ

ಮೋದಿಗೆ ಸಿದ್ದರಾಮಯ್ಯ ಟಾಂಗ್



ಬೆಂಗಳೂರು: ಸೂಪರ್‌ರೂ ಇಲ್ಲ, ಶ್ಯಾಡೋನೂ ಇಲ್ಲ ಇಲ್ಲಿರುವುದು ಒಬ್ಬರೇ ಸಿಎಂ. ಅದು ಸ್ಟ್ರಾಂಗ್ ಸಿಎಂ ಎಂದು ಹೇಳುವ ಮೂಲಕ ಪ್ರಧಾನಿ ನರೇಂದ್ರ ಮೋದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಟಾಂಗ್ ನೀಡಿದ್ದಾರೆ.

ಈ ಸಂಬಂಧ ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿರುವ ಅವರು, ನಿಮ್ಮ ಹಾಗೆ ನಾನು 'ವೀಕ್ ಪಿಎಂ' ಅಲ್ಲ. ನಿಮ್ಮ ಅಭಿಮಾನಿಗಳು ನಿಮ್ಮನ್ನು ವಿಶ್ವಗುರು ಎಂದು ಕೊಂಡಾಡುತ್ತಾರೆ. ಆದರೆ ನೀವೊಬ್ಬ 'ವೀಕ್ ಪಿಎಂ' ಎಂದು ಮತ್ತೆ ಮತ್ತೆ ತೋರಿಸಿಕೊಡುತ್ತಿದ್ದೀರಿ ಎಂದು ವಾಗ್ದಾಳಿ ನಡೆಸಿದ್ದಾರೆ.

ಎಕ್ಸ್‌ನಲ್ಲೇನಿದೆ: ಪ್ರಧಾನಿ ಅವರೇ, ಕಾಂಗ್ರೆಸ್ ಪಕ್ಷದಲ್ಲಿ ಸೂಪರ್ ಸಿಎಂ, ಶ್ಯಾಡೋ ಸಿಎಂಗಳಿದ್ದಾರೆ ಎಂದು ಶಿವಮೊಗ್ಗದ ನಿಮ್ಮ ಪಕ್ಷದ ಸಭೆಯಲ್ಲಿ ನೀವು ಗೇಲಿ ಮಾಡಿದ್ದೀರಿ! ನಮ್ಮಲ್ಲಿ ಸೂಪರ್‌ರೂ ಇಲ್ಲ, ಶ್ಯಾಡೋನೂ ಇಲ್ಲ ಇರುವುದು ಒಬ್ಬರೇ ಸಿಎಂ ಅದು "ಸ್ಟ್ರಾಂಗ್ ಸಿಎಂ", ನಿಮ್ಮ ಹಾಗೆ ನಾನು 'ವೀಕ್ ಪಿಎಂ' ಅಲ್ಲ. ಮೋದಿಯವರೇ ನಿಮ್ಮನ್ನು ನೀವು 56 ಇಂಚಿನ ಎದೆಯುಳ್ಳವನು ಎಂದು ಬಣ್ಣಿಸಿಕೊಳ್ಳುತ್ತೀರಿ, ನಿಮ್ಮ ಅಭಿಮಾನಿಗಳು ನಿಮ್ಮನ್ನು ವಿಶ್ವಗುರು ಎಂದು ಕೊಂಡಾಡುತ್ತಾರೆ. ಆದರೆ ನೀವೊಬ್ಬ 'ವೀಕ್ ಪಿಎಂ' ಎಂದು ಮತ್ತೆ ಮತ್ತೆ ತೋರಿಸಿಕೊಡುತ್ತಿದ್ದೀರಿ.

ಬಿ.ಎಸ್ ಯಡಿಯೂರಪ್ಪನವರು ಒಂದು ಕಾಲದಲ್ಲಿ ನಿಮ್ಮ ನಾಯಕತ್ವದ ವಿರುದ್ಧವೇ ಬಂಡಾಯ ಎದ್ದವರು. ನಿಮ್ಮನ್ನು ಹೀನಾಯವಾಗಿ ನಿಂದಿಸಿದವರು. ಅಂತಹವರ ಕಾಲಿಗೆ ಬಿದ್ದು ಮತ್ತೆ ಪಕ್ಷಕ್ಕೆ ಕರೆತಂದು ಮೆರವಣಿಗೆ ಮಾಡುವ ಮೂಲಕ ನೀವೊಬ್ಬ 'ವೀಕ್ ಪಿಎಂ' ಎಂದು ನೀವೇ ತೋರಿಸಿಕೊಟ್ಟಂತಾಗಲಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಕರ್ನಾಟಕದಲ್ಲಿ ನಿಮ್ಮ ನಾಯಕತ್ವದ ವಿರುದ್ಧ ಅರ್ಧ ಡಜನ್ ಬಿಜೆಪಿ ನಾಯಕರು ಬಂಡೆದಿದ್ದಾರೆ. ಟಿಕೆಟ್ ಪಡೆಯಲು ಅಸಮರ್ಥರಾದ ನಿಮ್ಮ ಪಕ್ಷದ ನಾಯಕರು ಹಾದಿ ಬೀದಿಲಿ ಹೊಡೆದಾಡಿಕೊಳ್ಳುತ್ತಿದ್ದಾರೆ, ಪರಸ್ಪರ ಕೆಸರೆರಚಾಟ ನಡೆಸುತ್ತಿದ್ದಾರೆ. ನಿಮ್ಮ ಯಾವ ಮನವಿಗೂ ಅವರು ಕಿವಿಕೊಟ್ಟಿಲ್ಲ. ಇವರಲ್ಲಿ ಕೆಲವರು ನಮ್ಮನ್ನೂ ಸಂಪರ್ಕಿಸುತ್ತಿದ್ದಾರೆ. ಶಿಸ್ತಿನ ಪಕ್ಷದಲ್ಲಿ ಇದೆಂತಹ ಅಶಿಸ್ತಿನ ತಾಂಡವ ಇದಕ್ಕೆಲ್ಲ ಕಾರಣ ನೀವೊಬ್ಬ 'ವೀಕ್ ಪಿಎಂ' ಆಗಿರುವುದಲ್ಲವೇ ಎಂದು ಮರು ಪ್ರಶ್ನೆ ಹಾಕಿದ್ದಾರೆ.

ಮೂವರು ವಿದ್ಯಾರ್ಥಿನಿಯರಿಗೆ ವಂಚಿಸಿದ ಪ್ರೊಬೆಷನರಿ ಸಬ್‌ಇನ್ಸ್‌ಪೆಕ್ಟರ್

- ನಾನಾ ನೆಪ ಹೇಳಿ ಲಕ್ಷ ಲಕ್ಷ ಸುಲಿಗೆ ಆರೋಪ
- ಲೈಂಗಿಕ ಸಂಪರ್ಕ ಹೊಂದದಿದ್ದರೆ ಅಶ್ಲೀಲ ಸಂದೇಶ ಬಹಿರಂಗಪಡಿಸುವುದಾಗಿ ಬ್ಲಾಕ್‌ಮೇಲ್
- 100ಕ್ಕೂ ಅಧಿಕ ದಾಖಲೆಗಳೊಂದಿಗೆ ಐಜಿಪಿ, ಡಿಜಿಪಿಗೆ ದೂರು ಸಲ್ಲಿಕೆ
- ಹಾಲಿ ಚಾಮರಾಜನಗರ ಎಸ್ಪಿ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಸ್‌ಐ



ಮೈಸೂರು, ಮಾ. 19–ಇದು ಬೇಲಿಯೇ ಎದ್ದು ಹೊಲ ಮೇಯ್ದ ಕಥೆ. ಪ್ರೊಬೆಷನರಿ ಸಬ್‌ಇನ್ಸ್‌ಪೆಕ್ಟರ್, ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಮೂವರು ಕಾಲೇಜು ವಿದ್ಯಾರ್ಥಿನಿಯರನ್ನು ಮದುವೆಯಾಗುವುದಾಗಿ ನಂಬಿಸಿ, ಅವರಿಂದ ಲಕ್ಷಾಂತರ ರೂ. ಹಣ ಪಡೆದದ್ದಲ್ಲದೇ ಅವರಿಗೆ ಅಶ್ಲೀಲ ವಿಡಿಯೋಗಳನ್ನು ರವಾನಿಸಿ, ತನ್ನೊಂದಿಗೆ ಲೈಂಗಿಕ ಸಂಪರ್ಕ ಹೊಂದದಿದ್ದರೆ ಅವರೊಂದಿಗಿನ ಅಶ್ಲೀಲ ಮೆಸೇಜ್‌ಗಳನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡುವುದಾಗಿ ಬ್ಲಾಕ್‌ಮೇಲ್ ಮಾಡಿದ್ದಾನೆ. ಹುಣಸೂರು, ಹಾಸನ ಮತ್ತು ಚಾಮರಾಜನಗರಕ್ಕೆ ಸೇರಿದ ಈ ಯುವತಿಯರು ಮೈಸೂರಿನ ಕಾಲೇಜೊಂದರಲ್ಲಿ ಪ್ರಥಮ ವರ್ಷದ ಪದವಿ ವ್ಯಾಸಂಗ ಮಾಡುತ್ತಿದ್ದಾರೆ. ಇವರೊಂದಿಗೆ ಪ್ರತ್ಯೇಕವಾಗಿ ಸ್ನೇಹ ಬೆಳೆಸಿದ ಚಾಮರಾಜನಗರ ಎಸ್ಪಿ ಕಚೇರಿಯಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರೊಬೆಷನರಿ ಸಬ್‌ಇನ್ಸ್‌ಪೆಕ್ಟರ್ ಬಿ.ಹೆಚ್. ಜಗದೀಶ್ ಎಂಬಾತ ಇವರನ್ನು ಮದುವೆಯಾಗುವುದಾಗಿ ನಂಬಿಸಿದ್ದಾನೆ. ಈ ಯುವತಿಯರೊಂದಿಗೆ ವಾಟ್ಸಾಪ್ ಮೂಲಕ ಚಾಟ್ ಮಾಡುತ್ತಿದ್ದ ಈತ, ತಾನು ಮನೆ ಕಟ್ಟಿಸುತ್ತಿರುವುದಾಗಿಯೂ ಮನೆಯ ಕೆಲಸ ಪೂರ್ಣಗೊಂಡ ನಂತರ ಮದುವೆಯಾಗುವುದಾಗಿ ನಂಬಿಸಿದ್ದಾನೆ. ಅಲ್ಲದೇ, ಮನೆ ಕಟ್ಟಿಸಲು ಹಣ ಬೇಕೆಂದು ವಿದ್ಯಾರ್ಥಿನಿಯರಿಂದ ಲಕ್ಷಾಂತರ ರೂ. ಪಡೆದಿದ್ದಾನೆ. ಕೊನೆಗೆ ಮದುವೆಯಾಗುವಂತೆ ಕೇಳಿದಾಗ ಜಾತಿ ನಿಂದನೆ ಮಾಡಿದ್ದಲ್ಲದೇ ತನ್ನೊಂದಿಗೆ ಲೈಂಗಿಕ ಸಂಪರ್ಕ ಹೊಂದದಿದ್ದರೆ ನೀವು ನನ್ನೊಂದಿಗೆ ನಡೆಸಿರುವ ವಾಟ್ಸಾಪ್ ಸಂದೇಶಗಳನ್ನು ಸ್ಕ್ರೀನ್‌ಶಾಟ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡುವುದಾಗಿ ಬ್ಲಾಕ್‌ಮೇಲ್ ಮಾಡಿದ್ದಾನೆ. ತಾನು ಪೊಲೀಸ್ ಅಧಿಕಾರಿಯಾಗಿದ್ದು, ರಾಜಕೀಯ ಬೆಂಬಲವೂ ಇರುವುದರಿಂದ ನೀವು ನನ್ನನ್ನು ಏನೂ ಮಾಡಲಾಗುವುದಿಲ್ಲ ಎಂದು ಬೆದರಿಕೆ ಹಾಕಿದ್ದಾನೆ. ಯುವತಿಯರೊಂದಿಗೆ ಸ್ನೇಹದಿಂದಿದ್ದಾಗ ಈತ ಅವರಿಗೆ ಅಶ್ಲೀಲ ವಿಡಿಯೋಗಳನ್ನು ವಾಟ್ಸಾಪ್ ಮೂಲಕ ರವಾನಿಸಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಈತನಿಂದ ಬ್ಲಾಕ್‌ಮೇಲ್‌ಗೆ ಒಳಗಾಗಿರುವ ಮೂವರೂ ವಿದ್ಯಾರ್ಥಿನಿಯರು ಒಂದೇ ಕಾಲೇಜಿನವರಾಗಿರುವುದರಿಂದ ತಾವು ಪ್ರೊಬೆಷನರಿ ಸಬ್‌ಇನ್ಸ್‌ಪೆಕ್ಟರ್ ಜಗದೀಶ್‌ನಿಂದ ವಂಚನೆಗೊಳಗಾಗಿರುವ ವಿಚಾರ ಪರಸ್ಪರ ಹಂಚಿಕೊಂಡಿದ್ದಾರೆ. ಲಕ್ಷಾಂತರ ರೂ. ಹಣವನ್ನೂ ಕಳೆದುಕೊಂಡು ಬ್ಲಾಕ್‌ಮೇಲ್‌ಗೆ ಒಳಗಾಗಿರುವ ವಿದ್ಯಾರ್ಥಿನಿಯರು ಮುಂದೇನು ಎಂಬುದು ತೋಚದೆ ಕೊನೆಗೆ ಮೈಸೂರಿನ ಕುವೆಂಪುನಗರದಲ್ಲಿರುವ ಮೈಸೂರು ಜಿಲ್ಲೆ ಬುಡಕಟ್ಟು ಸೋಲಿಗ ಅಭಿವೃದ್ಧಿ ಸಂಘದವರನ್ನು ಸಂಪರ್ಕಿಸಿ ಅಳಲು ತೋಡಿಕೊಂಡಿದ್ದಾರೆ.

ವಿದ್ಯಾರ್ಥಿನಿಯರು ಪ್ರೊಬೆಷನರಿ ಸಬ್‌ಇನ್ಸ್‌ಪೆಕ್ಟರ್ ತಮ್ಮೊಂದಿಗೆ ನಡೆಸಿರುವ ವಾಟ್ಸಾಪ್ ಸಂದೇಶಗಳು, ಆತನಿಗೆ ಬ್ಯಾಂಕ್ ಅಕೌಂಟ್ ಮೂಲಕ ಲಕ್ಷಾಂತರ ರೂಗಳನ್ನು ನೀಡಿರುವುದೂ ಸೇರಿದಂತೆ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಸಂಘದವರಿಗೆ ನೀಡಿ ಸಹಾಯ ಕೋರಿದ್ದಾರೆ. ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆ ಬುಡಕಟ್ಟು ಸೋಲಿಗ ಅಭಿವೃದ್ಧಿ ಸಂಘದ ಪದಾಧಿಕಾರಿಗಳು ಇಂದು ದಕ್ಷಿಣ ವಲಯ ಐಜಿಪಿ ಮತ್ತು ಬೆಂಗಳೂರಿನ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ 100ಕ್ಕೂ ಹೆಚ್ಚು ದಾಖಲೆಗಳ ಸಮೇತ ದೂರು ಸಲ್ಲಿಸಿದ್ದಾರೆ.

> ಸಂತ್ರಸ್ತರಿಂದ ನಮಗೆ ಯಾವುದೇ ರೀತಿಯ ದೂರು ಬಂದಿಲ್ಲ. ಆದರೆ, ಡಿಜಿಪಿ ಮತ್ತು ದಕ್ಷಿಣ ವಲಯ ಐಜಿಪಿಯವರಿಗೆ ದೂರು ನೀಡಿದ್ದಾರೆ. ಐಜಿಪಿಯವರು ನನ್ನನ್ನು ಇಂದು ದೂರವಾಣಿ ಮೂಲಕ ಸಂಪರ್ಕಿಸಿದ್ದು, ಪ್ರೊಬೆಷನರಿ ಸಬ್‌ಇನ್ಸ್‌ಪೆಕ್ಟರ್ ಜಗದೀಶ್ ಅವರಿಗೆ ಸಂಬಂಧಪಟ್ಟ ದೂರನ್ನು ರವಾನಿಸುವುದಾಗಿಯೂ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆಯೂ ಸೂಚಿಸಿದ್ದಾರೆ. ಐಜಿಪಿ ಕಚೇರಿಯಿಂದ ದೂರಿನ ಪ್ರತಿ ದೊರೆತ ತಕ್ಷಣ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳುತ್ತೇನೆ.
> -ಪದ್ಮಿನಿ ಸಾಹು, ಚಾಮರಾಜನಗರ ಜಿಲ್ಲಾ ಎಸ್ಪಿ

ಮೈಸೂರು ಮಿತ್ರ
ವಾರ್ಷಿಕೋತ್ಸವ ವಿಶೇಷ ಸಂಚಿಕೆ

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2024ಕ್ಕೆ 44 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 45ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10. 2024 ರೊಳಗೆ ನೀಡಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಆಂಥೋಣಿ ಡೋಬ್: 8951668960
ಪ್ರೇಮ: 9880549879
ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು: ಪ್ರಸಾದ್, ಪೂಜಾ ಆರ್ಕೇಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ 9731469871
ಮಂಡ್ಯ: ಕೆ. ಮೋಹನ್‌ರಾಜ್, 3ನೇ ಕ್ರಾಸ್, ಅಶೋಕನಗರ, ಮಂಡ್ಯ 8762960325
ಶ್ರೀರಂಗಪಟ್ಟಣ: ವಿನಯ್ ಕಾರೇಕುರ, ಶ್ರೀರಂಗಪಟ್ಟಣ 9686893234
ಹುಣಸೂರು: ಕೆ. ಕೃಷ್ಣ (ಕೆ.ಕೆ.), EWS 204, KHB ಕಾಲೋನಿ, ಹುಣಸೂರು. 9448720626
ಚಾಮರಾಜನಗರ: ಸಿದ್ದಲಿಂಗಸ್ವಾಮಿ, ಎ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ 9242265657
ಟಿ. ನರಸೀಪುರ: ಕುಮಾರ್, ಸಾರ್ವಜನಿಕ ಆಸ್ಪತ್ರೆ ರಸ್ತೆ, ಆದ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590
ಗುಂಡ್ಲುಪೇಟೆ: ಸೋಮಶೇಖರ್, ದ.ರಾ. ಬೇಂದ್ರೆ ನಗರ, ಅಪ್ಪನಿ ಲೇಔಟ್,ಗುಂಡ್ಲುಪೇಟೆ. 9845995426
ಕೆ.ಆರ್. ನಗರ: ಕೆ.ಬಿ. ರಮೇಶ್, ಸ್ನೇಹ ಎಂಟರ್ ಪ್ರೈಸಸ್, ಬಿ.ಬಿ.ರಸ್ತೆ, ಕೆ.ಆರ್. ನಗರ. 9448021368
ಮಳವಳ್ಳಿ: ಶಿವಶಂಕರ, ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್–571430 9632407806
ಕೊಳ್ಳೇಗಾಲ: ರಾಜು, ಮೈಸೂರು ಮಿತ್ರ ರಿಪೋರ್ಟರ್ -101, ಮರಳಕೇರಿ ಬೀದಿ, ಕೊಳ್ಳೇಗಾಲ 9916621007
ಹಾಸನ: ಆರ್.ಎನ್.ಸೋಮೇಶ್‌ಗೌಡ, ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 9448401175
ಕುಶಾಲನಗರ: ರಘು, ಮೈಸೂರು ಮಿತ್ರ ರಿಪೋರ್ಟರ್ ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ 9845698401
ಜಯಪುರ: ಜಿಗಿರಿ, ಜಯಪುರ 9945479288
ಪಿರಿಯಾಪಟ್ಟಣ: ವೀರೇಶ್, ಪಿರಿಯಾಪಟ್ಟಣ 8660057128
ವಿರಾಜಪೇಟೆ: ಮಂಜುನಾಥ, ವಿರಾಜಪೇಟೆ 9900949353
ಕೆ.ಆರ್.ಪೇಟೆ: ಶ್ರೀನಿವಾಸ, ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ 9449326847, 7022757438
ಹೆಚ್.ಡಿ.ಕೋಟೆ: ಮಂಜುನಾಥ ಎಸ್., ಹೆಚ್.ಡಿ.ಕೋಟೆ 9483574452
ಕೆ.ಎಂ.ದೊಡ್ಡಿ: ಸತೀಶ್ ಎ.ಎಲ್, ಕೆ.ಎಂ.ದೊಡ್ಡಿ 9242120338
ನಂಜನಗೂಡು: ರಂಗಸ್ವಾಮಿ, ನಂ.4565, ಕಬಿನಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್–571301 9901602226
ಹುಣಸೂರು: ಹೆಚ್.ಆರ್. ಕೃಷ್ಣಕುಮಾರ್ (ಜನ ರಕ್ಷಕ), ನಂದಿನಿ ಮಾರಾಟ ಕೇಂದ್ರ, ಮಾರುತಿ ಪೆಟ್ರೋಲ್ ಬಂಕ್ ಹತ್ತಿರ, ಹಳೆಯ ಬಿ.ಎಂ. ರಸ್ತೆ ಹತ್ತಿರ, ಹುಣಸೂರು 9060406093
ಕೊಳ್ಳೇಗಾಲ: ನಾಗೇಂದ್ರ ಸ್ವಾಮಿ, ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849858

ನಕ್ಕರೆ ಅದೇ ಸ್ವರ್ಗ

ಗಂಡ : ನೀನು ಹೊಸ ರುಚಿ ಎಂಬ ಪುಸ್ತಕ ತಂದು ಮಾಡಿದ ತಿಂಡಿಯನ್ನು ತಿಂದು ಹಲ್ಲು ನೋವು ಶುರುವಾಗಿದೆ ಅದನ್ನು ಎಲ್ಲಿಂದ ಕೊಂಡು ತಂದೆ?

ಹೆಂಡತಿ : ಈ ಬೀದಿಯಲ್ಲಿ ಹೊಸದಾಗಿ ದಂತ ಚಿಕಿತ್ಸಾಲಯ ಪ್ರಾರಂಭಿಸಿರುವ ಡಾಕ್ಟರ್ ಆ ಹೊಸ ರುಚಿ ಪುಸ್ತಕವನ್ನು ಫ್ರೀಯಾಗಿ ಹಂಚುತ್ತಿದ್ದಾರೆ...!

ಮೈಸೂರು ಮಿತ್ರ

ಬುಧವಾರ, 20 ಮಾರ್ಚ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಮೌನ ತಳೆದು ದೃಢ ನಿರ್ಧಾರ ಕೈಗೊಂಡಲ್ಲಿ, ಉದ್ದೇಶಿತ ಕಾರ್ಯ ಸಾಧನೆಗೆ ಅಪಾರ ಮಾನಸಿಕ ಬಲ ಪ್ರಾಪ್ತವಾಗುತ್ತದೆ – ಶ್ರೀಮಾತಾ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಊರ ನೋಡಿ ಬಾ ಅಂದ್ರೆ, ತೋರಣ ಕಟ್ಟಿ ಬಂದನಂತೆ

ನಿಮ್ಮ ಪತ್ರಗಳು

ನೌಕರರ ಸಂಘ ಸಾಧಿಸಿದ್ದೇನು?

ಮಾನ್ಯರೆ,

ಅತ್ತೂ ಕರೆದು ಔತಣ...... ಎಂಬ ಗಾದೆಯಂತೆ ಚುನಾವಣೆ ನೀತಿ ಸಂಹಿತೆ ಜಾರಿಗೆ ಬರುವ ಸ್ವಲ್ಪ ಸಮಯದ ಹಿಂದೆ 7ನೇ ವೇತನ ಆಯೋಗದ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿದೆ. ಅದನ್ನು ಸ್ವೀಕರಿಸಿದ ಮುಖ್ಯಮಂತ್ರಿಗಳು ಎಂದಿನಂತೆ ಹಣಕಾಸು ಇಲಾಖೆ ಪರಿಶೀಲಿಸಿ ವರದಿ ಕೊಟ್ಟ ನಂತರ ಈ ಬಗ್ಗೆ ನಿರ್ಧರಿಸುವುದಾಗಿ ಹೇಳಿದ್ದಾರೆ. ಇದಾದ 4 ಗಂಟೆಯ ನಂತರ ನೀತಿ ಸಂಹಿತೆ ಜಾರಿಯಾದ ಕಾರಣ ವರದಿ ಇನ್ನೂ 3 ತಿಂಗಳು ಮೂಲೆ ಸೇರುವಂತಾಗಿದೆ.

ಇದಕ್ಕೂ ಮೊದಲು ಆಯೋಗದ ಅವಧಿ ಇನ್ನೂ 3 ತಿಂಗಳು ವಿಸ್ತರಣೆಯಾಗಲಿದೆ ಎನ್ನುವ ಸುದ್ದಿ ಹರಿದಾಡುತ್ತಿತ್ತು! ಆದರೆ ಅವಧಿ ವಿಸ್ತರಣೆಯಾಗದಿದ್ದರೂ ಆ ಕೆಲಸವನ್ನು "ನೀತಿ ಸಂಹಿತೆ" ಯಶಸ್ವಿಯಾಗಿ ಮಾಡಿದೆ!

ಬಹುತೇಕ ಮಾರ್ಚ್ 10 ರಂದೇ ಚುನಾವಣೆ ಘೋಷಣೆಯಾಗಲಿದೆ ಎಂದು ಒಂದೆರಡು ತಿಂಗಳ ಹಿಂದಿನಿಂದಲೇ ಮಾಧ್ಯಮಗಳಲ್ಲಿ ವರದಿಯಾಗಿತ್ತು. ಅದು ನಿಶ್ಚಿತವೂ ಆಗಿತ್ತು. ಹೀಗಿರುವಾಗ ನೌಕರರ ಸಂಘ ವರದಿಯನ್ನು ಮಾರ್ಚ್ ಮೊದಲ ವಾರದಲ್ಲೇ ಕೊಡುವಂತೆ ಒತ್ತಡ ಹೇರಿ ಆಯೋಗ ಸರ್ಕಾರಕ್ಕೆ ವರದಿ ನೀಡಲು ಪ್ರಯತ್ನಿಸಬೇಕಿತ್ತು. ಆದರೆ ಹಾಗೆ ಮಾಡದೆ ನೌಕರರ ಅವಕೃಪೆಗೆ ಪಾತ್ರವಾಯಿತು. ಫೆಬ್ರವರಿಯಲ್ಲಿ ರಾಜ್ಯಮಟ್ಟದ ಸಮಾವೇಶ ಮಾಡಿ ಅಲ್ಲಿ ಮುಖ್ಯಮಂತ್ರಿಗಳಿಂದ ವೇತನ ಆಯೋಗದ ಶಿಫಾರಸು ಅನುಷ್ಠಾನ ಮಾಡಿಸಲಾಗುವುದು ಎಂದು ನೌಕರರಿಗೆ ತಪ್ಪು ಸಂದೇಶ ರವಾನಿಸಲಾಯಿತು. ಸಮ್ಮೇಳನದಲ್ಲಿ ಮಾತನಾಡಿದ ಮುಖ್ಯಮಂತ್ರಿಗಳು, ವೇತನ ಆಯೋಗ ಮಾರ್ಚ್ 15 ರಂದು ಸರ್ಕಾರಕ್ಕೆ ವರದಿ ನೀಡಲಿದೆ. ಅದನ್ನು ಪಡೆದು ಸರ್ಕಾರ ಜಾರಿ ಮಾಡಲಿದೆ ಎಂದು ಭರವಸೆ ನೀಡಿದರು. ವರದಿಯೇ ಇನ್ನೂ ಕೈಸೇರದಿರುವಾಗ ಇದು ಸಹಜವೇ. ಹೀಗಿರುವಾಗ ನೌಕರರ ಸಂಘ, ಸಂಘದ ಹಣ ಖರ್ಚು ಮಾಡಿ ಈ ರೀತಿಯ ಅದ್ದೂರಿ ಸಮಾವೇಶ ಮಾಡುವ ಅಗತ್ಯವಾದರೂ ಏನಿತ್ತು ಎನ್ನುವುದು ನೌಕರರಿಗೆ ಯಕ್ಷಪ್ರಶ್ನೆಯಾಗಿದೆ! ಅವರು ತಮ್ಮ ಪ್ರತಿಷ್ಠೆಗಾಗಿ ಈ ಸಮಾವೇಶ ಮಾಡಿದರು ಎನ್ನುವ ಅಭಿಪ್ರಾಯ ನೌಕರರಲ್ಲಿದೆ. (ಹಿಂದಿನ ಸಮಾವೇಶಗಳ ಕಥೆಯೂ ಇದೇ) ಒಂದು ವೇಳೆ ಡಿಸೆಂಬರ್, ಜನವರಿ ತಿಂಗಳಲ್ಲಿಯೇ ಈ ರೀತಿ ಸಮಾವೇಶ ನಡೆಸಿ, ವೇತನ ಆಯೋಗದ ವರದಿಯನ್ನು ಆಗಲೇ ನೀಡುವಂತೆ ಒತ್ತಡ ಹೇರಿದ್ದರೆ ಆಗ ಸಮಾವೇಶಕ್ಕೂ ಒಂದು ಅರ್ಥವಿರುತ್ತಿತ್ತು. ಅಲ್ಲದೆ ವೇತನ ಆಯೋಗದ ಶಿಫಾರಸ್ಸುಗಳನ್ನು ಸರ್ಕಾರ ಅಂಗೀಕರಿಸಲು ಒತ್ತಡ ಹೇರಲು ಸಮಯಾವಕಾಶವೂ ಇರುತ್ತಿತ್ತು. ಇದನ್ನೆಲ್ಲಾ ನೋಡಿದರೆ ನೌಕರರ ಸಂಘ, ನೌಕರರ ಕಣ್ಣೊರೆಸುವ ಕೆಲಸ ಮಾಡಿದೆ ಎಂದಷ್ಟೇ ವೇದ್ಯವಾಗುತ್ತಿದೆ.

–ಮುಳ್ಳೂರು ಪ್ರಕಾಶ್, ಮೈಸೂರು.

ಸೈಬರ್ ವಂಚನೆ ಪ್ರಕರಣ ತಡೆಯಲು ಸಾಧ್ಯವಿಲ್ಲವೇ?

ಮಾನ್ಯರೆ,

ಪ್ರತಿ ದಿನವೂ ನಮ್ಮ ಮೊಬೈಲ್ ಫೋನ್‌ಗೆ ಸಂದೇಶವೊಂದು ಬರುತ್ತದೆ. ನಿಮ್ಮ ಬ್ಯಾಂಕ್ ಖಾತೆಯನ್ನು ಅಪ್‌ಡೇಟ್ ಮಾಡಲು ನಿಮ್ಮ ಪಾನ್ ಕಾರ್ಡ್ ಸಂಖ್ಯೆ ಮತ್ತು ಆಧಾರ್ ಕಾರ್ಡ್ ಸಂಖ್ಯೆಯನ್ನು ಕಳುಹಿಸಿ, ಇಲ್ಲದಿದ್ದರೆ ನಿಮ್ಮ ಬ್ಯಾಂಕ್ ಖಾತೆಯನ್ನು ಸ್ಥಗಿತಗೊಳಿಸಲಾಗುವುದು. ಈ ಲಿಂಕ್ ಅನ್ನು ಒತ್ತಿ ಅಪ್‌ಡೇಟ್ ಮಾಡಿ ಎಂಬ ಸಂದೇಶಗಳನ್ನು ಕಳುಹಿಸುತ್ತಾರೆ. ಇದನ್ನು ನಂಬಿ ನಾವೇನಾದರೂ ಅಪ್‌ಡೇಟ್ ಮಾಡಿದರೆ ಕೇವಲ 10 ನಿಮಿಷಗಳಲ್ಲೇ ನಮ್ಮ ಬ್ಯಾಂಕ್ ಖಾತೆಯ ಎಸ್‌ಬಿ ಹಣ ಮಂಗಮಾಯವಾಗಿರುತ್ತದೆ.

ಈ ಬಗ್ಗೆ ಬ್ಯಾಂಕ್‌ಗೆ ದೂರು ನೀಡಲು ಹೋದರೆ ನಮಗೂ ಅದಕ್ಕೂ ಸಂಬಂಧವಿಲ್ಲ ಎನ್ನುತ್ತಾರೆ. ನೀವು ಪೊಲೀಸರಿಗೆ ದೂರು ನೀಡಿ ಎನ್ನುತ್ತಾರೆ.

ಇತ್ತೀಚೆಗೆ, ಇಂತಹ ಅನ್‌ಲೈನ್ ಸೈಬರ್ ವಂಚನೆ ಪ್ರಕರಣಗಳು ಹೆಚ್ಚಾಗುತ್ತಿವೆ. ಒಂದು ವರದಿಯ ಪ್ರಕಾರ ಕಳೆದ ವರ್ಷ ಸುಮಾರು 15 ಸಾವಿರ ಸೈಬರ್ ವಂಚನೆ ಪ್ರಕರಣಗಳು ದಾಖಲಾಗಿವೆ. ಸುಮಾರು ರೂ.1,500 ಕೋಟಿ ರೂಪಾಯಿಗೂ ಹೆಚ್ಚು ಹಣ ವಂಚಕರ ಪಾಲಾಗಿದೆ ಎನ್ನುತ್ತಾರೆ.

ಮತ್ತೊಂದು ಆತಂಕದ ಸಂಗತಿ ಎಂದರೆ, ಇಂತಹ ಸೈಬರ್ ವಂಚನೆ ಪ್ರಕರಣಗಳಲ್ಲಿ ಗೃಹಿಣಿಯರೇ ಹೆಚ್ಚು ಮೋಸ ಹೋಗುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಇಷ್ಟೆಲ್ಲಾ ಆಧುನಿಕ ತಂತ್ರಜ್ಞಾನವಿದ್ದರೂ, ಸೈಬರ್ ವಂಚನೆ ಪ್ರಕರಣಗಳ ಜಾಲತಾಣಗಳನ್ನು ಕಂಡುಹಿಡಿಯಲು ಸಾಧ್ಯವಾಗಲಿಲ್ಲವೇಕೆ? ಇದು ಪೊಲೀಸರ ವಿಫಲತೆಯಲ್ಲವೇ? ಅತೀ ಹೆಚ್ಚು ಸೈಬರ್ ವಂಚನೆ ಪ್ರಕರಣಗಳು ಕರ್ನಾಟಕದಲ್ಲೇ ದಾಖಲೆಯಾಗುತ್ತಿರುವುದು ಆಶ್ಚರ್ಯಪಡುವಂತೆ ಮಾಡಿದೆ.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ಹೊಳೆಯ ನೀರಿಗೆ...

ಮಾನ್ಯರೆ,

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಇತ್ತೀಚೆಗೆ ಅರುಣಾಚಲ ಪ್ರದೇಶಕ್ಕೆ ಭೇಟಿ ನೀಡಿ ವಿಶ್ವದ ಅತೀ ಎತ್ತರದಲ್ಲಿ ನಿರ್ಮಿಸಲಾದ (13000 ಅಡಿ) ಸೆಲಾ ಸುರಂಗವನ್ನು ರಾಷ್ಟ್ರಕ್ಕೆ ಸಮರ್ಪಿಸಿದ್ದನ್ನು ಆಕ್ಷೇಪಿಸಿರುವ ಚೀನಾ ದೇಶದ ವರ್ತನೆ ಖಂಡನಾರ್ಹವಾಗಿದೆ. ಹೊಳೆಯ ನೀರಿಗೆ ದೊಣ್ಣೆನಾಯಕನ ಅಪ್ಪಣೆ ಬೇಕೇ ಅನ್ನುವ ಹಾಗೆ ನಮ್ಮ ದೇಶದ ಒಂದು ರಾಜ್ಯವಾಗಿರುವ ಅರುಣಾಚಲ ಪ್ರದೇಶ, ನಮಗೆ ಅಂದರೆ ಭಾರತೀಯರಿಗೆ ಸೇರಿದ ರಾಜ್ಯವಾಗಿದೆ. ಇಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ನಾವು ಸರ್ವ ಸ್ವತಂತ್ರರು. ಆದರೆ ಚೈನಾ ದೇಶ ಅರುಣಾಚಲ ಪ್ರದೇಶ ವಿಚಾರದಲ್ಲಿ ಪದೇ ಪದೆ ಕ್ಯಾತೆ ತೆಗೆಯುತ್ತಿರುವುದು ತೀವ್ರ ಖಂಡನೀಯವಾಗಿದೆ. ಮುಂದಾದರೂ ಚೈನಾ ದೇಶ ಇಂತಹ ದುಷ್ಟ ಪ್ರವೃತ್ತಿಯನ್ನು ನಿಲ್ಲಿಸಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು, 9341731661

ನಮಸ್ಕೃತಿ

ಪ್ರಸಕ್ತ ಸಂವತ್ಸರದ ಜ್ಞಾನಪೀಠ ಪುರಸ್ಕೃತ ಪುರುಷ ಸರಸ್ವತಿ,
ಅಂತಶ್ಚಕ್ಷು ಜ್ಯೋತಿಷ್ಮತಿ,
ಸಮಸ್ತ ವಿದ್ಯಾ ಹಿಮಾಲಯೋನ್ನತಿ,
ಹೇ ರಾಮಭದ್ರಾಚಾರ್ಯ, ಸುಕೃತಿ,
ಕ್ಷಿತಿಸಂಪೂಜ್ಯ–ನಿಮಗಿದೋ
ಶತಶತ ಪ್ರಣತಿ!
(ಭದ್ರಂ ಶುಭಂ ಮಂಗಳಂ)

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಕರ್ನಾಟಕ ಸುವರ್ಣ ಸಿಂಗಾರ

ಕನ್ನಡ ನಾಡು ಸಾವಿರಾರು ವರ್ಷಗಳ ಶ್ರೀಮಂತ ಐತಿಹಾಸಿಕ ಪರಂಪರೆಯನ್ನು ಹೊಂದಿದೆ. ಈ ನಾಡಿನ ಸಂಸ್ಕೃತಿ ಜಗತ್ತಿನ ಯಾವುದೇ ದೇಶದ ಅಥವಾ ಪ್ರದೇಶದ ಸಂಸ್ಕೃತಿಗೆ ಕಡಿಮೆಯದಲ್ಲ. ಕನ್ನಡದ ಸಾಹಿತ್ಯ ಸಿರಿವಂತಿಕೆಯಲ್ಲಿ ಇತರರಿಗಿಂತ ಮುಂದಿದೆ. ಚತುಃಷಷ್ಟಿ (64) ಕಲೆಗಳಲ್ಲಿ ಯಾವುದನ್ನು ತೆಗೆದುಕೊಂಡರೂ ಕನ್ನಡಿಗರು ಅದರಲ್ಲಿ ಮಾಡಿರುವ ಸಾಧನೆ ಪ್ರಶಂಸನೀಯವಾಗಿದೆ. ಕದಂಬರು, ರಾಷ್ಟ್ರಕೂಟರು, ಗಂಗರು, ಚಾಲುಕ್ಯರು, ಹೊಯ್ಸಳರು, ವಿಜಯನಗರ ಪ್ರಭುಗಳು, ಕೆಳದಿಯ ನಾಯಕರು, ಮೈಸೂರಿನ ಒಡೆಯರು ಸಂಸ್ಕೃತಿಗೆ ಕೊಟ್ಟ ಕೊಡುಗೆ, ಸಾಹಿತ್ಯಕ್ಕೆ ನೀಡಿದ ಪ್ರೋತ್ಸಾಹ ಚಿರಸ್ಮರಣೀಯ. ಧರ್ಮದ ವಿಷಯದಲ್ಲಿ ಕನ್ನಡಿಗರೇ ಮುಂದೆ. ಇಲ್ಲಿ ವೈದಿಕ, ಜೈನ, ಬೌದ್ಧ, ವೈಷ್ಣವ, ಶೈವ, ವೀರಶೈವ ಧರ್ಮಗಳು ಪುಷ್ಕಳವಾಗಿ ಬೆಳೆದುವು. ದರ್ಶನ ಕ್ಷೇತ್ರದಲ್ಲಿ ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ಶಿವಾದ್ವೈತ– ಎಲ್ಲವೂ ಇಲ್ಲಿ ವೃದ್ಧಿಯನ್ನು ಕಂಡವು. ಕಾವ್ಯದಲ್ಲಂತೂ ನಾವೇ ಅಗ್ರಣಿಗಳು. ಕುರಿತೋದದೆಯುಂ ಕಾವ್ಯ ಪ್ರಯೋಗಪರಿಣತ ಮತಿಗಳು. ಕಾವೇರಿಯಿಂದಲೂ ಗೋದಾವರಿವರಮಿರ್ದ ನಾಡು ಎಂದು ಸುಮಾರು ಸಾವಿರದಿನ್ನೂರು ವರ್ಷಗಳ ಹಿಂದೆ ಕರೆಸಿಕೊಂಡಿದ್ದ ನಾಡು ಒಂದಾಗಿ ಮತ್ತೆ ಕರ್ನಾಟಕ ಎಂಬ ಹೆಸರನ್ನು ಪಡೆದದ್ದು ಈಚೆಗೆ (1973ರಲ್ಲಿ). ಅದಾಗಿ 50 ವರ್ಷಗಳಾದುವೆಂದು ಕರ್ನಾಟಕ ಸರ್ಕಾರವು 1.11.2023 ರಿಂದ 1.11.2024ರವರೆಗೆ ಕರ್ನಾಟಕ ಸುವರ್ಣ ವೈಭವವನ್ನು ಆಚರಿಸುತ್ತಿರುವುದು ಕನ್ನಡಿಗರಿಗೆಲ್ಲ ಸಂಭ್ರಮದ ಸಂಗತಿ.

ಕರ್ನಾಟಕದ ಸಾಂಸ್ಕೃತಿಕ ರಾಜಧಾನಿಯೆನಿಸಿದ ಮೈಸೂರಿಗೆ ಇದು ವಿಶೇಷ ಸಂತೋಷದ ಸಂಗತಿ. ಮೈಸೂರು ರಾಜಮನೆತನ ಕನ್ನಡದ ಹಿರಿಮೆಗೆ ಕೊಟ್ಟ ಕೊಡುಗೆ ಇತಿಹಾಸ ಪ್ರಸಿದ್ಧ. ಸಂಗೀತ, ಸಾಹಿತ್ಯ, ನೃತ್ಯ ಮುಂತಾದ ಕಲೆಗಳ ಬೀಡು ಮೈಸೂರು. ಚಿತ್ರಕಲೆಯಲ್ಲಂತೂ ಇಲ್ಲಿಯ ಕಲಾವಿದರು ವಿಶ್ವಪ್ರಸಿದ್ಧರು. ಶಿಲ್ಪಕಲೆಗೆ ಮೈಸೂರು ತವರುಮನೆ. ದಸರಾ ಎಂದು ಪ್ರಸಿದ್ಧವಾದ ಶರನ್ನವರಾತ್ರೋತ್ಸವ ಎಲ್ಲಾ ಕಲೆಗಳ ಪ್ರದರ್ಶನದಿಂದ ವಿಶ್ವವಿಖ್ಯಾತವಾಗಿದೆ.

ಮೈಸೂರಿನ ಸಂಸ್ಕೃತಿ ಪರಂಪರೆಯನ್ನು ಸಂರಕ್ಷಿಸಿ ಬೆಳೆಸುವ ಘನ ಉದ್ದೇಶದಿಂದ ಮೈತಳೆದಿರುವ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನವು** ಸ್ತುತ್ಯವಾದ ಹಲವು ಯೋಜನೆಗಳನ್ನು ಹಾಕಿಕೊಂಡು, ಅದ್ಭುತವಾದ ಪ್ರದರ್ಶನಗಳನ್ನು ಹಮ್ಮಿಕೊಂಡು ಮೈಸೂರಿಗೆ ಧವಳಕೀರ್ತಿಯನ್ನು ತಂದುಕೊಟ್ಟಿದೆ. ಮೈಸೂರು ಚಿತ್ರಸಿರಿ, ಬೋರ್ಡ್ ಗೇಮ್ಸ್, ಮೈಸೂರು ಪ್ಯಾಲೇಸ್ ಮುಂತಾದ ಅಪೂರ್ವ ಪ್ರಕಾಶನಗಳಿಂದ ರಸಿಕರನ್ನು ಆಕರ್ಷಿಸಿದೆ. ಮೈಸೂರು ರೇಖಾಚಿತ್ರ ಸಿರಿ, ಮೈಸೂರು ಮಾಸ್ಟರ್ಸ್, ಹಸ್ತಿಮಂಗಳ, ರಾಯಲ್ ಫೋಟೋಗ್ರಾಫ್ಸ್ ಮುಂತಾದವು ರಾಮ್‌ಸನ್ಸ್ ಕಲಾಪ್ರತಿಷ್ಠಾನದ ಭವಿಷ್ಯತ್ ಪ್ರಕಾಶನಗಳು.

ಈ ಸಂಸ್ಥೆಯು ಈಚೆಗೆ **ಕರ್ನಾಟಕ ಸುವರ್ಣ ಸಿಂಗಾರ** ಎಂಬ ಹೆಸರಿನಲ್ಲಿ ಒಂದು ಚಿತ್ರ ಸಂಪುಟ ಮಾಲೆಯನ್ನು ಬೆಳಕಿಗೆ ತಂದಿದೆ. ಇದರಲ್ಲಿ ಸುಖ್ಯಾತರಾದ ಎಂಟು ಜನ ಶ್ರೇಷ್ಠ ಕಲಾವಿದರು ರಚಿಸಿದ ಎಂಟು ಸುಂದರ ಚಿತ್ರಗಳಿವೆ.

ಚಿತ್ರಕಲಾ ಮಹರ್ಷಿಯೆಂದು ಕರೆಸಿಕೊಳ್ಳಲು ಅರ್ಹರಾದ ಹಿರಿಯ ಕಲಾವಿದ ಜಿ.ಎಲ್.ಎನ್. ಸಿಂಹ ವೇದ–ವೇದಾಂಗ–ಪುರಾಣಗಳ ಹೃದಯವನ್ನು ಅರಿತ ದ್ರಷ್ಟಾರರು. ಅವರೊಬ್ಬ ಕಲಾತಪಸ್ವಿ. ಅವರು **ಸಿರಿಕನ್ನಡ ತಾಯಿ** ಎಂಬ ಚಿತ್ರವನ್ನು ರಚಿಸಿಕೊಟ್ಟಿದ್ದಾರೆ. ಮಂಗಳ ಧ್ವಜವನ್ನು ಧರಿಸಿರುವ, ಸರ್ವಾಲಂಕಾರ ಭೂಷಿತೆಯಾದ ಈ ಕನ್ನಡ ತಾಯಿಯನ್ನು ನೋಡುವ ಯಾವ ಕನ್ನಡಿಗನಲ್ಲೂ ಪ್ರೀತಿ–ಗೌರವ–ಹೆಮ್ಮೆಗಳು ಉಕ್ಕದಿರವು. ಯಾವ ಸಂಸ್ಕೃತಿ ಪ್ರಿಯನ ಶಿರವೂ ವಿನಯದಿಂದ ಬಾಗದಿರದು. ಎಲ್ಲಾ ಚಿತ್ರಕಲಾರಸಿಕರೂ ಈ ಹಿರಿಯ ಕಲಾವಿದರ ಅಡಿದಾವರೆಗಳಿಗೆ ಮುಡಿಯನ್ನು ಸೋಕಿಸಬೇಕು.

ಐದು ದಶಕಗಳಿಂದ ಸ್ವಾಧ್ಯಯನದಿಂದಲೇ ಚಿತ್ರಕಲೆಯ ಅಂತರಂಗವನ್ನು ಹೊಕ್ಕು ಅಪೂರ್ವ ಸಿದ್ಧಿಯನ್ನು ಪಡೆದಿರುವ



ಬಿ.ಪಿ. ರಾಮಕೃಷ್ಣ ಅವರು ರಚಿಸಿರುವ ಚಿತ್ರ 'ಭುವನೇಶ್ವರೀ ವಿಮಾನ'. ಕನ್ನಡ ಭುವನೇಶ್ವರಿಯು ಸುವರ್ಣ ವಿಮಾನದಲ್ಲಿ ಸ್ವರ್ಗದಿಂದ ಭೂಮಿಗೆ ಇಳಿದು ಬರುವಂತಿರುವ ವಿಶಿಷ್ಟ ಕಲ್ಪನೆ ಈ ಚಿತ್ರದಲ್ಲಿದೆ. ಮೈಮರೆಸುವಂತಿರುವ ಈ ಚಿತ್ರದ ವರ್ಣವೈಭವ ಕಣ್ಣಿಗೆ ಹಬ್ಬ. ಇದು ಕೇವಲ ಚಿತ್ರವಲ್ಲ, ಚಿತ್ರಕಾವ್ಯ. ಒಂದು ಕಾವ್ಯ ಹೇಳಬಹುದಾದಷ್ಟು ಕಲ್ಪನೆಗಳನ್ನು ಈ ಚಿತ್ರವೇ ಹೇಳುತ್ತಿದೆ.

ಕೆ.ಎಸ್. ಶ್ರೀಹರಿ ಎಂಬ ಕಲಾವಿದರು ತಮ್ಮ ತಂದೆ ಕೆ.ವಿ. ಸೀತಾರಾಮನ್ ಅವರಿಂದ ಚಿತ್ರಕಲೆಯನ್ನು ಸಮಗ್ರವಾಗಿ ಕಲಿತವರು. ವಂಶಪರಂಪರೆಯಿಂದ ಚಿತ್ರಕಲೆ ಇವರಲ್ಲಿ ರಕ್ತಗತವಾಗಿದೆ. ಐವತ್ತೈದರ ಹರೆಯದ ಶ್ರೀಹರಿ ಅವರು ರಚಿಸಿದ ಚಿತ್ರ 'ಕರ್ನಾಟಕ ರತ್ನ ಸಿಂಹಾಸನೇಶ್ವರೀ! ಚಿತ್ರವನ್ನು ನೋಡಿದರೆ ಸಾಕು, ಲಲಿತಾಸಹಸ್ರನಾಮದ **ಶ್ರೀಮಾತಾ ಶ್ರೀ ಮಹಾರಾಜ್ಞೀ ಶ್ರೀಮತ್ಸಿಂಹಾಸನೇಶ್ವರೀ** ಎಂಬ ಶ್ಲೋಕವು ನೆನಪಿಗೆ ಬರುತ್ತದೆ. ರತ್ನ ಸಿಂಹಾಸನದಲ್ಲಿ ಕುಳಿತು ಶೋಭಿಸಿರುವ ತಾಯಿಗೆ ಯದುವಂಶಜರಾದ ಮೈಸೂ ರಿನ ಮಹಾರಾಜರೆಲ್ಲರೂ ನಮಸ್ಕರಿಸುವಂತೆ ಕಲಾವಿದ ಶ್ರೀಹರಿ ಕಲ್ಪನೆಯನ್ನು ಮಾಡಿದ್ದಾರೆ. ಆ ಮಹಾರಾಜರ ಮುಖಗಳಲ್ಲಿ ಭಕ್ತಿಭಾವ ತುಳುಕುತ್ತಿದೆ. ಎಲ್ಲರೂ ನೋಡಬೇಕಾದ ಚಿತ್ರ.

ಕ್ರಿಸ್ತಪೂರ್ವ ಕಾಲದಲ್ಲಿ ಬೌದ್ಧ ವಿಹಾರಗಳಿಂದ ತುಂಬಿದ್ದ ಕಾರಣದಿಂದ ಇಂದು ಬಿಹಾರವೆಂದು ಪ್ರಸಿದ್ಧವಾದ ರಾಜ್ಯದಲ್ಲಿ ಹುಟ್ಟಿ ಸತತಾಭ್ಯಾಸದಿಂದ ಶ್ರೇಷ್ಠ ಕಲಾವಿದರಾಗಿ ಬೌದ್ಧ ಕಲೆಯಲ್ಲಿ ಪರಿಣತರಾಗಿರುವ, ಈಗ ಬೆಂಗಳೂರಿನಲ್ಲಿ ನೆಲೆಸಿರುವ ಮನೀಷ್‌ವರ್ಮಾ ಅವರು ರಚಿಸಿರುವ ಚಿತ್ರ 'ಕನಕವರ್ಷಿತೆ ಕನ್ನಡಾಂಬಿಕೆ'. ಕನ್ನಡ ನಾಡಿನ ಹಲವರು ರಾಜರು ಚಿನ್ನದ ನಾಣ್ಯಗಳನ್ನು ಟಂಕಿಸಿದ್ದರು. ಪ್ರಸ್ತುತ ಚಿತ್ರದಲ್ಲಿ ಆ ರಾಜರು ಕನ್ನಡ ತಾಯಿಯ ಮೇಲೆ ಕನಕ ವರ್ಷವನ್ನು ಮಾಡುತ್ತಿರುವ ಕಲ್ಪನೆಯು ಪಡಿ ಮೂಡಿದೆ. ಶಂಕರಾಚಾರ್ಯರ ಕನಕಧಾರಾ ಸ್ತೋತ್ರವನ್ನು ಈ ಚಿತ್ರ ನೆನಪಿಗೆ ತರುತ್ತದೆ. ದೇಶದಲ್ಲೇ ಅಲ್ಲದೆ ವಿದೇಶಗಳಲ್ಲೂ ತಮ್ಮ ಚಿತ್ರಕಲೆಯಿಂದ ಪ್ರಸಿದ್ಧರಾಗಿರುವ ಮನೀಷ್ ವರ್ಮಾ ಅಭಿನಂದನಾರ್ಹರು.

ಕಲಾವಿದೆ ಎಂ. ಗಿರಿಜಾ ಅವರು ಬ್ಯಾಂಕ್ ವೃತ್ತಿಯಲ್ಲಿದ್ದರಂತೆ. ವೃತ್ತಿ ಯಾವುದಾದರೇನು, ಪ್ರವೃತ್ತಿ ಅವರನ್ನು ಚಿತ್ರಕಲಾವಿದೆಯಾಗಿ ಮಾಡಿತು. ವೈ. ಸುಬ್ರಹ್ಮಣ್ಯರಾಜು ಅವರಿಂದ ಚಿತ್ರಕಲಾಪ್ರಾಪ್ತಿಯನ್ನು ಮಾಡಿಕೊಂಡ ಗಿರಿಜಾ ಅವರಿಗೆ ಹೂಗಳಲ್ಲಿ, ಅದರಲ್ಲೂ ಕತ್ತಾಳೆ ಹೂಗಳಲ್ಲಿ ಒಲವು. ಅವರು ಈ ಚಿತ್ರ ಸಂಪುಟದಲ್ಲಿ ಭುವನೇಶ್ವರಿಯನ್ನು ಚಿತ್ರಿಸಿದ್ದಾರೆ. ಹಲವು ಶೈಲಿಗಳು ಮೇಳೈಸಿ ಇವರ ಚಿತ್ರಗಳಿಗೆ ಮೆರುಗನ್ನು ಕೊಡುತ್ತವೆ. ಹದಿನೆಂಟನೆಯ ಶತಮಾನದಲ್ಲಿ ವಿದ್ಯಾರಣ್ಯರೆಂಬ ಗುರುಗಳು ಹಂಪೆಯಲ್ಲಿ ಭುವನೇಶ್ವರಿಯನ್ನು ಪ್ರತಿಷ್ಠಾಪಿಸಿದರಂತೆ. ಗಿರಿಜಾ ಅವರ ಕಲಾಕೃತಿಯಲ್ಲಿ ಆ ಭುವನೇಶ್ವರಿಯನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ಈ ಕಲಾವಿದೆಗೆ ನಮ್ಮ ನಮನ.

ಕರ್ನಾಟಕ ಮಾತೆ ಭಾರತ ಜನನಿಯ ತನುಜಾತೆ. ರಾಷ್ಟ್ರಕವಿ ಕುವೆಂಪು ಅವರ ಪರಿಕಲ್ಪನೆಯನ್ನು ಚಿತ್ರದಲ್ಲಿ ಒಡಮೂಡಿಸಿರುವವರು ಕಾರ್ಕಳದ ಶಿವಪುರ ಸರ್ಕಾರಿ ಶಾಲೆಯಲ್ಲಿ ಕಲಾ ಶಿಕ್ಷಕರಾಗಿರುವ ಕಲಾವಿದ ಎಂ. ಕಮಲ್ ಅಹ್ಮದ್. ಇಲ್ಲಿ ಭಾರತ ಮಾತೆಯೂ ಕರ್ನಾಟಕ ಮಾತೆಯೂ ಒಟ್ಟಿಗೆ ಚಿತ್ರಿತರಾಗಿದ್ದಾರೆ. ಚಿತ್ರಕಲೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಯನ್ನು ಬಾಸೋಲಿ, ಕಾಂಗಡಾ ಮತ್ತು ವಿಜಯನಗರ ಶೈಲಿಗಳ ಅಭ್ಯಾಸ ಮಾಡಿದ್ದಾರೆ.

ಅಹ್ಮದ್ ಅವರ ಚಿತ್ರದಲ್ಲಿ ಕನ್ನಡದ ಆದಿಕವಿ ಪಂಪ, ರನ್ನ, ಕುಮಾರವ್ಯಾಸ, ಜನ್ನ, ಪೊನ್ನ, ಹರಿಹರ, ಕನಕದಾಸ, ಬಸವೇಶ್ವರ, ಅಲ್ಲಮಪ್ರಭು–ಎಂಬ ಕನ್ನಡ ಸಾಹಿತ್ಯ ಶಿರೋಮಣಿಗಳೂ ಚಿತ್ರಿತರಾಗಿದ್ದಾರೆ. ಭಾರತ ಮಾತೆಯ ಕೈಯ್ಯಲ್ಲಿ ರಾಷ್ಟ್ರಧ್ವಜವಿದೆ. ಕನ್ನಡ ತಾಯಿಯ ಕೈಯ್ಯಲ್ಲಿ ಅರಿಶಿನ ಕುಂಕುಮ ವರ್ಣಗಳ ಕನ್ನಡ ಧ್ವಜವಿದೆ. ಕಲಾವಿದ ಅಹ್ಮದ್ ಅವರಿಗೆ ವಂದನೆಗಳು ಸಲ್ಲುತ್ತವೆ.

ಬಳ್ಳಾರಿಯ ಸಂಡೂರಿನ ಕೆ.ವಿ. ಕಾಳೆ (ಕಾಶೀನಾಥ ವೆಂಕಟೇಶ ಕಾಳೆ) ಹಂಪೆಯ ಪರಿಸರದಲ್ಲಿ ಓಡಾಡಿದವರು. ಇವರಿಗೆ ಜಾನಪದ ಶೈಲಿಯಲ್ಲಿ ವಿಶೇಷಾಸಕ್ತಿ. ನೈಜ ಚಿತ್ರಣದಲ್ಲೂ ನಿಪುಣತೆ ಇವರದು. ಅನೇಕ ಏಕವ್ಯಕ್ತಿ ಕಲಾ ಪ್ರದರ್ಶನಗಳನ್ನು ಮಾಡಿರುವ ಇವರು ಮೂಡಿಸಿರುವ ಚಿತ್ರ **ರಸಋಷಿ ಸೇವಿತೆ ಕನ್ನಡಾಂಬೆ**. ಆಧುನಿಕ ಕನ್ನಡದ ರಸಋಷಿಗಳು ಡಿವಿಜಿ, ಕುವೆಂಪು, ದ.ರಾ. ಬೇಂದ್ರೆ, ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿನಾಯಕ ಕೃಷ್ಣ ಗೋಕಾಕ್, ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ ಮತ್ತು ಎಸ್.ಎಲ್. ಭೈರಪ್ಪ. ಈ ಚಿತ್ರದಲ್ಲಿ ಕನ್ನಡಾಂಬೆಯ ಸುತ್ತಲೂ ಈ ರಸಋಷಿಗಳ ಚಿತ್ರಗಳಿವೆ. ಈ ಚಿತ್ರದ ವೈಶಿಷ್ಟ್ಯ ಕನ್ನಡಾಂಬೆಯನ್ನು ಚಾಲುಕ್ಯ ಶಿಲ್ಪದ ಶೈಲಿಯಲ್ಲಿ ಚಿತ್ರಿಸಿರುವುದು. ಪ್ರತಿಯೊಬ್ಬರೂ ನೋಡಬೇಕಾದ ಚಿತ್ರ. ಕಾಳೆಯವರಿಗೆ ಕೈಜೋಡಿಸಿ ನಮಿಸೋಣ.


ತರುಣ ಕಲಾವಿದ ರವೀಶ್ ಆರ್. ಕಾಲೇಜು ಶಿಕ್ಷಣ ಮುಗಿದ ಮೇಲೆ ಹಿರಿಯ ಕಲಾವಿದ ಸಿ. ಕುಪ್ಪಾಚಾರ್ ಅವರಿಂದ ರೇಖಾಚಿತ್ರವನ್ನೂ, ಎಂ.ಎಸ್. ಆನಂದ್ ಅವರಿಂದ ಮೈಸೂರು ಚಿತ್ರ ಶೈಲಿಯನ್ನೂ ಕಲಿತವರು. ಇವರ ಚಿತ್ರದ ಶೀರ್ಷಿಕೆ 'ಹಚ್ಚೇವು ಕನ್ನಡದ ದೀಪ'. ಸಿಂಹಾಸನದ ಮೇಲೆ ಪ್ರಭಾವಳಿಯಲ್ಲಿ ಕುಳಿತಿರುವ ಕನ್ನಡಾಂಬೆಯ ಮುಂದೆ ಉರಿಯುತ್ತಿರುವ ಆರು ದೀಪಗಳಿವೆ. ಪ್ರಭಾವಳಿಯಲ್ಲಿ ಕನ್ನಡನಾಡನ್ನು ಆಳಿದ ನಾನಾ ರಾಜವಂಶಗಳ ಲಾಂಛನಗಳನ್ನು ಚಿತ್ರಿಸಲಾಗಿದೆ. ಮೇಲೆ ಬಲಗಡೆಯಲ್ಲಿ ಮೈಸೂರಿನ ಅಥವಾ ಕರ್ನಾಟಕದ ಲಾಂಛನವಾದ ಗಂಡಭೇರುಂಡವೂ ಎಡಗಡೆಯಲ್ಲಿ ಭಾರತದ ಲಾಂಛನವಾದ ಸಿಂಹತ್ರಯವೂ ಇವೆ. ಐತಿಹಾಸಿಕವಾಗಿ ಜ್ಞಾನಪ್ರದವಾದ ಈ ಸುಂದರ ಚಿತ್ರವನ್ನು ರಚಿಸಿದ ರವೀಶರಿಗೆ ನಮನಗಳು.

ಈ ಎಂಟು ಚಿತ್ರಗಳನ್ನು ಬರೆಯಿಸಿದ ರಾಮ್‌ಸನ್ಸ್ ಪ್ರತಿಷ್ಠಾನಕ್ಕೆ ಎಷ್ಟು ವಂದನೆಗಳನ್ನು ಸಲ್ಲಿಸಿದರೂ ಸಾಲದು.

ಕರ್ನಾಟಕ ಸುವರ್ಣ ಸಿಂಗಾರ
ತಂದಿದೆ ನಮಗೆ ಕಲೆಯ ಬಂಗಾರ.
ಮೈಸೂರು ರಾಮ್‌ಸನ್ಸ್ ಪ್ರತಿಷ್ಠಾನ
ರಸಿಕರಿಗೆ ನಿಜವಾದ ದೇವಸ್ಥಾನ.
ಇವರ ಬೊಂಬೆಯ ಮನೆಯೇ ಸಂತಸದ ನೆಲೆಯು
ಅದರಿಂದ ಬೆಳೆಯುತಿದೆ ಜನರಲ್ಲಿ ಕಲೆಯು.

ಮಕ್ಕಳ ಸುಸಂಸ್ಕೃತರನ್ನಾಗಿಸುವಲ್ಲಿ ಮಹಿಳೆಯರ ಪಾತ್ರ ಹಿರಿದು

ಪೊಲೀಸ್ ತರಬೇತಿ ಅಕಾಡೆಮಿ ಮುಖ್ಯಸ್ಥೆ ಗೀತಾ ಪ್ರಸನ್ನ ಅಭಿಮತ



ಸುಯೋಗ್ ವುಮೆನ್ಸ್ ಹೆಲ್ತ್ ಕ್ಲಬ್ ವತಿಯಿಂದ ಮಂಗಳವಾರ ಆಯೋಜಿಸಲಾಗಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಮಹಿಳಾ ಸಾಧಕರನ್ನು ಸನ್ಮಾನಿಸಲಾಯಿತು.

ಮೈಸೂರು,ಮಾ.19–ಇಂದಿನ ಮಕ್ಕಳು ಮತ್ತು ಯುವಪೀಳಿಗೆ ಅಡ್ಡದಾರಿ ಹಿಡಿಯುತ್ತಿದ್ದು, ಅವರನ್ನು ಸುಸಂಸ್ಕೃತರನ್ನಾಗಿ ಬೆಳೆಸುವ ಹೊಣೆ ತಾಯಿಯಂದಿರ ಮೇಲಿದೆ ಎಂದು ಪೊಲೀಸ್ ಟ್ರೈನಿಂಗ್ ಅಕಾಡೆಮಿ ಮುಖ್ಯಸ್ಥರಾದ ಶ್ರೀಮತಿ ಗೀತಾ ಪ್ರಸನ್ನ ಹೇಳಿದರು.

ಸುಯೋಗ್ ವುಮೆನ್ಸ್ ಹೆಲ್ತ್ ಕ್ಲಬ್ ವತಿಯಿಂದ ಮಂಗಳವಾರ ಆಯೋಜಿಸಲಾಗಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದು ಸ್ತ್ರೀ ತಾಯಿಯಾಗಿ, ಗೃಹಿಣಿಯಾಗಿ ಕೌಟುಂಬಿಕ ಜವಾಬ್ದಾರಿಗಳನ್ನು ನಿರ್ವಹಿಸುತ್ತಿರುವುದಲ್ಲದೇ ಇದರೊಂದಿಗೆ ವೃತ್ತಿ ಜೀವನದ ಸವಾಲುಗಳನ್ನೂ ಎದುರಿಸಬೇಕಾದ ಅನಿವಾರ್ಯತೆ ಇದ್ದು, ಈ ದಿಕ್ಕಿನಲ್ಲಿ ಮಹಿಳೆ ಸದೃಢವಾಗಿ ಬೆಳೆಯುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದು ಅಭಿಪ್ರಾಯಿಸಿದರು.

ಕೌಟುಂಬಿಕ ಜವಾಬ್ದಾರಿಯಿಂದಾಗಿ ಮಹಿಳೆ ತನ್ನ ಆರೋಗ್ಯದ ಕಡೆಗೆ ಹೆಚ್ಚು ಗಮನ ಹರಿಸಲು ವಿಫಲಳಾಗುತ್ತಿದ್ದು, ಈ ಸಂದರ್ಭದಲ್ಲಿ ಸುಯೋಗ್ ಆಸ್ಪತ್ರೆಯಲ್ಲಿ ಮಹಿಳೆಯರ ಆರೋಗ್ಯದ ಅರಿವಿಗಾಗಿಯೇ ಸುಯೋಗ್ ವುಮೆನ್ಸ್ ಹೆಲ್ತ್ ಕ್ಲಬ್ ಅನ್ನು ಸ್ಥಾಪಿಸಿ ಮಹಿಳೆಯರಲ್ಲಿ ಆರೋಗ್ಯದ ಅರಿವು ಮೂಡಿಸುತ್ತಿರುವುದು ಸ್ತುತ್ಯಾರ್ಹ ಎಂದರು.

ಲೇಖಕಿ ಡಾ.ಪ್ರೀತಿ ಶುಭಚಂದ್ರ, ಆಧುನಿಕ ಸಮಾಜದಲ್ಲಿ ಮಹಿಳೆಯರು ಹೆಚ್ಚು ವಿದ್ಯಾವಂತರಾಗುತ್ತಿದ್ದರೂ ಅವರ ಮೇಲೆ ನಡೆಯುತ್ತಿರುವ ಕೌಟುಂಬಿಕ ಮತ್ತು ಲೈಂಗಿಕ ದೌರ್ಜನ್ಯಗಳು ಸವಾಲಾಗಿ ಪರಿಣಮಿಸಿದ್ದು, ಅವುಗಳನ್ನು ಎದುರಿಸುವ ದೈಹಿಕ ಮತ್ತು ಮಾನಸಿಕ ಸ್ಥೈರ್ಯಗಳನ್ನು ಹೆಚ್ಚಿಸಿಕೊಳ್ಳಬೇಕೆಂದು ಕರೆಯಿತ್ತರು.

ಸ್ತ್ರೀಯರನ್ನು ಕಾಡುತ್ತಿರುವ ಮಂಡಿ ಮತ್ತಿತರ ಕೀಲುಗಳ ಕಾಯಿಲೆ ಬಗ್ಗೆ ಮಾತನಾಡಿದ ಸುಯೋಗ್ ಆಸ್ಪತ್ರೆಯ ಕೀಲು ಮೂಳೆ ತಜ್ಞ ಡಾ.ಮೋಹನ್, ಮಹಿಳೆಯರನ್ನು ಕಾಡುವ ಇಂತಹ ನೋವುಗಳಿಗೆ ಸ್ಥೂಲಕಾಯ, ಕ್ಯಾಲ್ಸಿಯಂ ಕೊರತೆ, ಹಾರ್ಮೋನುಗಳ ಅಸಮತೋಲನ ಕಾರಣವಾಗಿದ್ದು, ದೈನಂದಿನ ವ್ಯಾಯಾಮ, ಆಹಾರ ನಿಯಮಗಳನ್ನು ಪಾಲಿಸಿ, ಆ ಮುಖಾಂತರ ದೇಹದ ತೂಕವನ್ನು ನಿಯಂತ್ರಿಸುವುದರಿಂದ ಕೀಲು ನೋವುಗಳನ್ನು ಗುಣಪಡಿಸಿಕೊಳ್ಳಬಹುದಾಗಿದ್ದು, ಅನಿವಾರ್ಯವೆಂದಾಗ ಮಂಡಿ ಕೀಲಿನ ಮರುಜೋಡಣೆ ಅತ್ಯವಶ್ಯಕವೆಂದರು. ಈಗಾಗಲೇ ಸುಯೋಗ್ ಆಸ್ಪತ್ರೆಯಲ್ಲಿ 200ಕ್ಕೂ ಹೆಚ್ಚು ಮಂಡಿ ಕೀಲು ಮರು ಜೋಡಣೆ ಶಸ್ತ್ರಚಿಕಿತ್ಸೆಗಳು ಯಶಸ್ವಿಯಾಗಿ ಜರುಗಿದ್ದು, ಸಾಮಾನ್ಯರಿಗೆ ಕೈಗೆಟಕುವ ದರದಲ್ಲಿ ಚಿಕಿತ್ಸೆ ದೊರಕುತ್ತಿದೆ ಎಂದು ತಿಳಿಸಿದರು.

ಇದೇ ವೇಳೆ ವಿವಿಧ ಕ್ಷೇತ್ರಗಳ ಮಹಿಳಾ ಸಾಧಕರಾದ ಡಾ.ಅನಿತ(ವೈದ್ಯಕೀಯ), ಗೌರಮ್ಮ (ಸಾಮಾಜಿಕ ಕ್ಷೇತ್ರ), ಡಾ.ಪ್ರೀತಿ ಶುಭಚಂದ್ರ (ಸಾಹಿತ್ಯ) ಹಾಗೂ ರೂಪಾ (ಕೌಟುಂಬಿಕ) ಅವರನ್ನು ಸನ್ಮಾನಿಸಲಾಯಿತು. ಸುಯೋಗ್ ವುಮೆನ್ಸ್ ಹೆಲ್ತ್ ಕ್ಲಬ್‌ನ ಅಧ್ಯಕ್ಷೆ ಪನ್ನಗ ವಿಜಯಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಗಾಯತ್ರಿ ಸುಂದರೇಶ್ ವರದಿ ವಾಚಿಸಿದರು. ಸುಯೋಗ್ ಆಸ್ಪತ್ರೆ ಟ್ರಸ್ಟಿ ಸುಧಾ ಯೋಗಣ್ಣ, ಹೆಲ್ತ್ ಕ್ಲಬ್‌ನ ಗೌರವ ಅಧ್ಯಕ್ಷೆ ಡಾ.ಜಯಲಕ್ಷ್ಮೀ ಸೀತಾಪುರ, ಉಪಾಧ್ಯಕ್ಷೆ ಗಾಯತ್ರಿ ನಾರಾಯಣಗೌಡ, ಸಂಸ್ಕೃತ ವಿದುಷಿ ಡಾ.ಲೀಲಾ ಪ್ರಕಾಶ್ ಉಪಸ್ಥಿತರಿದ್ದರು. ಡಾ.ಎಸ್.ಪಿ. ಯೋಗಣ್ಣ ಸಹ ಹಾಜರಿದ್ದರು.

ಮತ್ಸ್ಯವಾಹಿನಿ ಯೋಜನೆಯಡಿ ಅರ್ಜಿ ಆಹ್ವಾನ

ಮೈಸೂರು, ಮಾ.19– ಸ್ಥಳೀಯವಾಗಿ ಮೀನು ಸೇವನೆಯನ್ನು ಪ್ರೋತ್ಸಾಹಿಸಲು ಹಾಗೂ ತಾಜಾ ಮೀನು ಮತ್ತು ಮೀನು ಉತ್ಪನ್ನಗಳ ಮಾರಾಟಕ್ಕಾಗಿ 'ಮತ್ಸ್ಯ ವಾಹಿನಿ ಯೋಜನೆ'ಯಡಿ ತ್ರಿಚಕ್ರ ವಾಹನಗಳನ್ನು ಪರವಾನಗಿ ಆಧಾರದಲ್ಲಿ ಪಡೆಯಲು ಆಸಕ್ತ ಮೀನು ಮಾರಾಟಗಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮೈಸೂರು ಜಿಲ್ಲೆಗೆ 4 ಭೌತಿಕ ಗುರಿಗಳಿದ್ದು, ಆಯ್ಕೆಯಾಗುವ ಅರ್ಜಿದಾರರು ಇಲಾಖೆಗೆ ಭದ್ರತಾ ಠೇವಣಿ ಮೊತ್ತ ಸಾಮಾನ್ಯ ವರ್ಗದವರು ರೂ. 1 ಲಕ್ಷ, ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಮಹಿಳೆಯರು ರೂ. 50,000 ಸಾವಿರ ಹಾಗೂ ಮಾಸಿಕ ರೂ. 3,000 ಬಾಡಿಗೆ ಮೊತ್ತವನ್ನು ಪಾವತಿಸಬೇಕಾಗಿರುತ್ತದೆ. ಮಾ.25 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಪಂಚಾಯತ್‌ನ ಮೀನುಗಾರಿಕೆ ಉಪನಿರ್ದೇಶಕರ ಕಚೇರಿ ಹಾಗೂ ತಾಲೂಕು ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಗಳನ್ನು ಸಂಪರ್ಕಿಸಬಹುದು ಎಂದು ಮೀನುಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಯದುವೀರ್‌ಗೆ ನನ್ನ ಅಭಿವೃದ್ಧಿ ಕಾರ್ಯಗಳೇ ಶ್ರೀರಕ್ಷೆ; ಯಾರ ನಾಮಬಲವೂ ಬೇಡ

ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅಭಿಪ್ರಾಯ

- ಮಹಾರಾಜರಂತೆ ಶಾಶ್ವತ ಕೆಲಸ ಕಾರ್ಯಗಳ ಮಾಡಿರುವೆ
- ಚಾಮುಂಡೇಶ್ವರಿ ಅವಮಾನಿಸುವಾಗ ಯಾರೂ ದನಿ ಎತ್ತಲಿಲ್ಲ
- ಸಿದ್ದರಾಮಯ್ಯ ಜೊತೆ ಹೊಂದಾಣಿಕೆ ಮಾಡಿಕೊಳ್ಳಲಿಲ್ಲ
- ಟಿಕೆಟ್ ಕೈ ತಪ್ಪಿತ್ತೆಂದು ಪಾರ್ಕ್‌ನಲ್ಲಿ ತಮಟೆ ಬಾರಿಸಲ್ಲ



ಮೈಸೂರಿನ ಹೊಯ್ಸಳ ಕರ್ನಾಟಕ ಭವನದಲ್ಲಿ ಮಂಗಳವಾರ ನಡೆದ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಸಂಸದ ಪ್ರತಾಪ್ ಸಿಂಹ ಮಾತನಾಡಿದರು.

ಮೈಸೂರು, ಮಾ.19(ಬಿಎಲ್‌ಯು)– ಮಹಾರಾಜರೇ ನೀವು ಕೈ ಮುಗಿದು ಕೊಂಡು ಹೋಗಿ ಸಾಕು, ನಿಮ್ಮ ಎಂಪಿ ಹತ್ತು ವರ್ಷದಲ್ಲಿ ಬಹಳ ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಅದಕ್ಕೆ ಮತ ಹಾಕ್ತೀವಿ ಅಂತ ಜನರೇ ಹೇಳುತ್ತಾರೆ. ಇದರಿಂದ ನಿಮಗೆ ಯಾರ ನಾಮಬಲವೂ ಬೇಡ.

ಹೀಗೆಂದು ಮೈಸೂರು ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಅಭಯ ನೀಡಿದವರು ಹಾಲಿ ಸಂಸದ ಪ್ರತಾಪ್ ಸಿಂಹ.

ಮೈಸೂರಿನ ಹೊಯ್ಸಳ ಕರ್ನಾಟಕ ಭವನದಲ್ಲಿ ಇಂದು ನಡೆದ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಅಬ್ಬರದ ಭಾಷಣ ಮಾಡಿದ ಪ್ರತಾಪ್ ಸಿಂಹ, ಹತ್ತು ವರ್ಷಗಳಲ್ಲಿ ಕ್ಷೇತ್ರದ ಮೂಲೆ ಸುತ್ತಿ ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಜನರಿಗೆ ಯಾರು ಬೇಕು, ಯಾರು ಬೇಡ ಎಂಬ ಅರಿವಿದೆ. ಇದರಿಂದ ಯದುವೀರ್ ನಿರಾಯಾಸವಾಗಿ ಗೆಲುವು ಸಾಧಿಸುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಸೇರಿದಂತೆ 1952ರಿಂದ ಇಲ್ಲಿ ತನಕ ಈ ಕ್ಷೇತ್ರ ಪ್ರತಿನಿಧಿಸುತ್ತಿದ್ದ ಸಂಸದರ ಕೆಲಸ ನೋಡಿ, ನಾನು ಕಳೆದ ಹತ್ತು ವರ್ಷದ ಅವಧಿಯಲ್ಲಿ ನೀಡಿರುವ ಕೊಡುಗೆ ಗಮನಿಸಿದರೆ ಈ ಪ್ರತಾಪ್ ಸಿಂಹ ಮಾಡಿರುವ ಕೆಲಸಗಳೇನು ಎಂದು ಗೊತ್ತಾಗುತ್ತೆ ಎಂದು ಸಲಹೆ ನೀಡಿದರು.

ಪಾಸ್ ಪೋರ್ಟ್ ಸೇವಾ ಕೇಂದ್ರ, ರೈಲು, ರಿಂಗ್ ರಸ್ತೆ, ಹೆದ್ದಾರಿ ನಿರ್ಮಾಣ ಸೇರಿದಂತೆ ಬಹಳಷ್ಟು ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಕಸದ ವಿಚಾರದಲ್ಲಿ ಎಲ್ಲರೂ ರಾಜಕೀಯ ಮಾಡುತ್ತಿದ್ದರು. ಆದರೆ ನಾನು ಅದನ್ನು ಬಗೆಹರಿಸಿದ್ದೇನೆ. ಈ ಮೂಲಕ ಮಹಾರಾಜರು ಏನೇನು ಕೆಲಸ ಮಾಡಿದ್ದಾರೋ ಅದೇ ರೀತಿ ಶಾಶ್ವತವಾಗಿ ಉಳಿಯುವ ಕೆಲಸ ಮಾಡಿದ್ದೇನೆ ಎಂದು ಪ್ರತಾಪ್ ಸಿಂಹ ಹೇಳಿದರು.

ಚಾಮುಂಡೇಶ್ವರಿ ಸನ್ನಿಧಿಗೆ ಹೋಗಿ ವರ ಕೊಡು ಎಂದು ಎಲ್ಲರೂ ಬೇಡಿಕೊಳ್ಳುತ್ತಾರೆ. ಆದರೆ ಮಹಿಷ ದಸರಾ ಆಚರಣೆ ವೇಳೆ ಚಾಮುಂಡೇಶ್ವರಿಗೆ ಅವಮಾನ ಮಾಡುವಾಗ ಯಾರೂ ದನಿ ಎತ್ತಲಿಲ್ಲ. ನಾನು ದನಿ ಎತ್ತಿದೆ. ಇದರಿಂದ ಪ್ರತಾಪ್ ಸಿಂಹ ಜಗಳಗಂಟ ಎಂದು ಕರೆಯುತ್ತಾರೆ. ಧರ್ಮದ ವಿಚಾರದಲ್ಲಿ ನಾನು ಯಾವತ್ತೂ ರಾಜಿ ಮಾಡಿಕೊಂಡಿಲ್ಲ. ನಾಳೆ ಬೆಳಿಗ್ಗೆ ನಿಮಗೆ ಧಮ್ಕಿ ಹಾಕಿದರೂ ನಿಮ್ಮ ಜೊತೆಗೆ ನಾನು ನಿಲ್ಲುವೆ ಎಂದು ಅಭಯ ನೀಡಿದರು.

ಗ್ಯಾಸ್ ಪೈಪ್‌ಲೈನ್ ವಿಚಾರದಲ್ಲಿ ನಮ್ಮ ಶಾಸಕರ ವಿರುದ್ಧವೇ ಗಲಾಟೆ ಮಾಡಿದೆ. ಕ್ಷೇತ್ರದ ಜನರಿಗೆ ಒಳ್ಳೆಯದಾಗಲಿ ಎಂಬ ಕಾರಣದಿಂದ ಹೀಗೆ ಮಾಡಿದೆ. ಆದರೆ ಇದನ್ನು ಕೆಲವರು ಅರ್ಥ ಮಾಡಿಕೊಳ್ಳಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹತ್ತು ವರ್ಷ ನನಗೆ ಅಧಿಕಾರ ಕೊಟ್ಟಿದ್ದೀರಾ, ಈಗ ಬದಲಾವಣೆ ಬಯಸಿದ್ದೀರಾ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಟಿಕೆಟ್ ಕೈ ತಪ್ಪಿತ್ತೆಂದು ಬೇರೆಯವರ ರೀತಿ ಪಾರ್ಕ್‌ನಲ್ಲಿ ಕುಳಿತು ತಮಟೆ ಬಾರಿಸಲ್ಲ ಎಂದು ಪ್ರತಾಪ್ ಸಿಂಹ ತಿಳಿಸಿದರು.

ಸಿದ್ದರಾಮಯ್ಯ ಜೊತೆಗೆ ನನಗೆ ವೈಯಕ್ತಿಕವಾಗಿ ಯಾವುದೇ ದ್ವೇಷ ಇಲ್ಲ. ಅವರ ಜೊತೆ ಹೊಂದಾಣಿಕೆ ಮಾಡಿಕೊಂಡು ಮುಡಾದಲ್ಲಿ ಹಣ ಮಾಡಬಹುದಿತ್ತು. ಆದರೆ ನಾನು ಹಾಗೆ ಮಾಡದೆ ಕಾರ್ಯಕರ್ತರಿಗಾಗಿ ದುಡಿದಿದ್ದೇನೆ. ಆದರೆ ವಾಸ್ತವತೆ ತಿಳಿಯದೆ ಕೆಲವರು ಹಿಂದೆ ಮುಂದೆ ಬಹಳಷ್ಟು ಮಾತನಾಡಿಕೊಳ್ಳುತ್ತಾರೆ. ಆದರೆ ಏನೂ ಮಾಡಲು ಆಗುವುದಿಲ್ಲ ಎಂದು ಹೇಳಿದರು.

ಮಹಾರಾಜರ ಊರಲ್ಲಿ ಹೊಗಳುಭಟ್ಟರು, ಚಾಡಿಕೋರರು ಜಾಸ್ತಿ

ಇದು ಮಹಾರಾಜರ ಊರು, ಹೊಗಳುಭಟ್ಟರು, ಚಾಡಿಕೋರರು ಇರುತ್ತಾರೆ ಎಂದು ಸಂಸದ ಪ್ರತಾಪ್ ಸಿಂಹ, ಯದುವೀರ್ ಒಡೆಯರ್‌ಗೆ ಪರೋಕ್ಷ ಎಚ್ಚರಿಕೆ ನೀಡಿದರು.

ಇಲ್ಲಿ ದ್ವೇಷ, ಅಸೂಯೆ ಜಾಸ್ತಿ ಏನೂ ಮಾಡಲು ಆಗುವುದಿಲ್ಲ. ಮಹಾರಾಜರ ಊರುಗಳೆಲ್ಲಾ ಹಾಗೆ ಇರುತ್ತವೆ. ಇವತ್ತು ಮಹಾರಾಜರು ಹೊಸಬರಾಗಿ ರಾಜಕಾರಣಕ್ಕೆ ಬಂದಿದ್ದಾರೆ. ಅವರನ್ನು ಕೈ ಹಿಡಿದು ಬೆಳೆಸಿ, ಗೆಲ್ಲಿಸಿ ಎಂದು ಕರೆ ನೀಡಿದರು. ನಾನು ಮೈಸೂರಿಗೆ ಹಣ, ಆಸ್ತಿ ಮಾಡಲು ಬರಲಿಲ್ಲ. ಒಳ್ಳೆಯ ಕೆಲಸ ಮಾಡಲು ಹಾಗೂ ಹಿಂದುತ್ವ ಉಳಿಸಿ, ಬೆಳೆಸಲು ಬಂದಿದ್ದೆ. ಇದನ್ನು ಪ್ರಾಮಾಣಿಕವಾಗಿ ಮಾಡಿದ್ದೇನೆ ಇದರಿಂದ ಮುಂದಿನ ದಿನಗಳಲ್ಲಿ ನನಗೆ ಒಳ್ಳೆಯ ಅವಕಾಶಗಳು ಸಿಗಬಹುದು ಎಂದು ಸಂಸದ ಪ್ರತಾಪ್ ಸಿಂಹ ಆಶಾಭಾವನೆ ವ್ಯಕ್ತಪಡಿಸಿದರು.

ಕೃಷ್ಣರಾಜ ಕ್ಷೇತ್ರದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಯದುವೀರ್ ಭಾಗಿ

ಗೆದ್ದ ನಂತರ ಅರಮನೆಯಲ್ಲಿರುತ್ತೇನೆ ಎಂಬ ತಪ್ಪು ಭಾವನೆ ಯಾರಿಗೂ ಬೇಡ

ಮೈಸೂರು, ಮಾ.19(ಬಿಎಲ್‌ಯು)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮೈಸೂರಿನ ಕೃಷ್ಣರಾಜ ಕ್ಷೇತ್ರದ ವಾರ್ಡ್‌ವಾರು ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಿದ್ದರು. ಈ ಮೂಲಕ ಚುನಾವಣೆಯ ಮೊದಲ ಹಂತವಾಗಿ ಯದುವೀರ್ ಬಿಜೆಪಿ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿದ್ದಾರೆ.

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯ ಹೊಯ್ಸಳ ಕರ್ನಾಟಕ ಭವನ, ಜೆಎಲ್‌ಬಿ ರಸ್ತೆಯ ಆರಾಧ್ಯ ಭವನ, ಕುವೆಂಪುನಗರದ ಸಾಮ್ರಾಟ್ ಕಲ್ಯಾಣ ಮಂಟಪ, ಮಧುವನ ಬಡಾವಣೆಯ ಜೈನ್ ಭವನ ಹಾಗೂ ಇಟ್ಟಿಗೆಗೂಡಿನ ಕರಿಮಾರಮ್ಮನ ದೇವಸ್ಥಾನದ ಸಮುದಾಯ ಭವನದಲ್ಲಿ ಬಿಜೆಪಿ ಕಾರ್ಯಕರ್ತರ ಸಭೆ ನಡೆಸಿದರು. ಆಯಾಯ ವ್ಯಾಪ್ತಿ ಸುತ್ತಮುತ್ತಲಿನ 5 ವಾರ್ಡ್‌ನ ಬಿಜೆಪಿ ಕಾರ್ಯಕರ್ತರು ಸಭೆಯಲ್ಲಿ ಭಾಗವಹಿಸಿದ್ದರು.



ಕಾರ್ಯಕರ್ತರ ಸಭೆಯಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಮಾತನಾಡಿದರು.

ಈ ವೇಳೆ ಮಾತನಾಡಿದ ಯದುವೀರ್, ಗೆದ್ದ ನಂತರ ಅರಮನೆ ಒಳಗೆ ಇರುತ್ತೇನೆ. ಯಾರ ಕೈಗೂ ಸಿಗುವುದಿಲ್ಲ ಎಂಬ ತಪ್ಪು ಭಾವನೆ ಯಾರಿಗೂ ಬೇಡ. ನಾನು ಗೆಲುವು ಸಾಧಿಸಿದರೆ ಜನರ ಮಧ್ಯೆ ಇರುತ್ತೇನೆ. ಅರಮನೆ ಬಿಟ್ಟು ಹೊರಗೆ ಕಚೇರಿ ತೆರೆದು, ಜನರನ್ನು ಸದಾ ಭೇಟಿ ಮಾಡುತ್ತೇನೆ. ಸಾಮಾನ್ಯ ಸಂಸದನಂತೆ ನಾನು ಕೂಡ ನಿಮ್ಮ ಜೊತೆ ಬೆರೆಯುತ್ತೇನೆ ಎಂದು ಭರವಸೆ ನೀಡಿದರು.

ಸಂಸದ ಪ್ರತಾಪ್ ಸಿಂಹ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಮೇಯರ್ ಶಿವಕುಮಾರ್, ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೋಪಾಲರಾಜೇ ಅರಸ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಯದುವೀರ್ ಯಾವ ರಾಜ ಎಂಬ ಸಿದ್ದರಾಮಯ್ಯ ಪ್ರಶ್ನೆ ತಪ್ಪಲ್ಲ!

ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ ಬಲವಾಗಿ ಸಮರ್ಥಿಸಿಕೊಂಡ ಸಂಸದ ಪ್ರತಾಪ್ ಸಿಂಹ

ಮೈಸೂರು, ಮಾ.19(ಬಿಎಲ್‌ಯು) – ಯದುವೀರ್ ಅವರನ್ನು ಯಾವ ರಾಜ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಳಿರುವುದರಲ್ಲಿ ಹುಳುಕು ಹುಡುಕುವುದು ತಪ್ಪು ಎಂದು ಸಂಸದ ಪ್ರತಾಪ್ ಸಿಂಹ ಅಭಿಪ್ರಾಯಪಟ್ಟಿದ್ದಾರೆ.

ಬಿಜೆಪಿ ಕಾರ್ಯಕರ್ತರ ಸಭೆ ನಂತರ ಮಾತನಾಡಿದ ಅವರು, ಸ್ವಾತಂತ್ರ್ಯ ಬಂದ ನಂತರ ಸಂವಿಧಾನ ಜಾರಿಯಾದ ದಿನದಿಂದ ಮಹಾರಾಜ ಎಂಬುದು ಇಲ್ಲ ಎಂದರು. ಆದ ಕಾರಣ ಯಾವ ರಾಜ ಎಂದು ಸಿದ್ದರಾಮಯ್ಯ ನೀಡಿರುವ ಹೇಳಿಕೆ ತಪ್ಪಲ್ಲ ಎಂದು ಪ್ರತಾಪ್ ಸಿಂಹ ತಿಳಿಸಿದರು.

ಈ ಮೂಲಕ ಇದೇ ಮೊದಲ ಬಾರಿಗೆ ಪ್ರತಾಪ್ ಸಿಂಹ ಸಿದ್ದರಾಮಯ್ಯ ಅವರ ಹೇಳಿಕೆಯನ್ನು ಬಲವಾಗಿ ಸಮರ್ಥಿಸಿಕೊಂಡಿದ್ದು, ಕುತೂಹಲಕ್ಕೆ ಕಾರಣವಾಗಿದೆ. ಈಗ ಯದುವೀರ್ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ. ನಾನು ಕೂಡ ಹೇಳಿಕೆ ನೀಡುವಾಗ ಯದುವೀರ್ ಪ್ರಜಾಪ್ರತಿನಿಧಿ ಆಗಿರಬೇಕು ಎಂದು ಹೇಳಿದ್ದೆ. ಇದರಿಂದ ಸಿದ್ದರಾಮಯ್ಯ ನೀಡಿರುವ ಹೇಳಿಕೆ ತಪ್ಪು ಅನ್ನಿಸುತ್ತಿಲ್ಲ.

ದೇಶದಲ್ಲಿ ಈಗ ರಾಜಾಡಳಿತವಿಲ್ಲ. ನವರಾತ್ರಿ ಸಂದರ್ಭದಲ್ಲಿ ಮಾತ್ರ ಖಾಸಗಿ ದರ್ಬಾರ್ ನಡೆಸಲಾಗುತ್ತದೆ. ಅಂದು ಮಾತ್ರ ಯದುವೀರ್ ಧಾರ್ಮಿಕ ಹಾಗೂ ಸಾಂಪ್ರದಾಯಿಕ ವಿಧಿ ವಿಧಾನಗಳಿಗೆ ಸೀಮಿತರಾಗಿರುತ್ತಾರೆ ಎಂದು ಹೇಳಿದರು.

ಮೈಸೂರಿನ ಜನರು ಯದುವೀರ್ ಅವರನ್ನು ಮಹಾರಾಜ ಎಂದು ಕರೆಯುತ್ತಾರಾ ಅಥವಾ ಬಿಜೆಪಿ ಅಭ್ಯರ್ಥಿ ಎಂದು ಕರೆಯುತ್ತಾರಾ ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, ಮಹಾರಾಜರು ಅರಮನೆಗೆ ಸೀಮಿತವಾಗಿರದೆ ಜನಪ್ರತಿನಿಧಿಯಾಗಲು ಬಂದಿದ್ದಾರೆ. ಇದರಿಂದ ಸಿದ್ದರಾಮಯ್ಯ ಬಿಜೆಪಿ ಅಭ್ಯರ್ಥಿ ಎಂದು ಕರೆದಿರುವುದರಲ್ಲಿ ತಪ್ಪಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಸಿದ್ದರಾಮಯ್ಯ ಅವರನ್ನು ಸೈದ್ಧಾಂತಿಕವಾಗಿ ನಾನು ವಿರೋಧಿಸುತ್ತೇನೆ. ನನಗೂ ಅವರಿಗೂ ಬಹಳಷ್ಟು ವಿರೋಧಗಳಿವೆ. ಆದರೆ ಈ ವಿಚಾರದಲ್ಲಿ ಸಿದ್ದರಾಮಯ್ಯ ನೀಡಿರುವ ಹೇಳಿಕೆಯಲ್ಲಿ ನನ್ನ ಸಹಮತವಿದೆ ಎಂದು ಪ್ರತಾಪ್ ಸಿಂಹ ಸ್ಪಷ್ಟಪಡಿಸಿದರು.

ಮಸ್ಟರಿಂಗ್ ಕೇಂದ್ರ, ಮತಗಟ್ಟೆ ಪರಿಶೀಲಿಸಿದ ತಹಸೀಲ್ದಾರ್ ನೇತೃತ್ವದ ತಂಡ

- ಮಹಾರಾಣಿ ಕಲಾ ಕಾಲೇಜಿನಲ್ಲಿ ಮಸ್ಟರಿಂಗ್ ಕೇಂದ್ರ ಸ್ಥಾಪನೆ
- ಮತಗಟ್ಟೆಗಳಲ್ಲಿ ಮತದಾನಕ್ಕೆ ಪೂರಕ ವಾತಾವರಣ ಪರಿಶೀಲನೆ



ಮಸ್ಟರಿಂಗ್ ಕೇಂದ್ರವಾದ ಮೈಸೂರಿನ ಮಹಾರಾಣಿ ಸರ್ಕಾರಿ ಮಹಿಳಾ ಕಲಾ ಕಾಲೇಜಿಗೆ ತಹಸೀಲ್ದಾರ್ ಕೆ.ಎಂ.ಮಹೇಶ್ ಕುಮಾರ್ ನೇತೃತ್ವದ ತಂಡ ಭೇಟಿ ನೀಡಿ, ಪರಿಶೀಲಿಸಿತು.

ಮೈಸೂರು,ಮಾ.19(ಎಂಟಿವೈ)– ಲೋಕಸಭಾ ಚುನಾವಣೆಯನ್ನು ಯಾವುದೇ ಗೊಂದಲವಿಲ್ಲದೆ ಸುಸೂತ್ರವಾಗಿ ನಡೆಸುವ ನಿಟ್ಟಿನಲ್ಲಿ ಜಿಲ್ಲಾಡಳಿತ ಶ್ರಮಿಸುತ್ತಿದ್ದು, ಮಂಗಳವಾರ ಮೈಸೂರು ತಹಸೀಲ್ದಾರ್ ಕೆ.ಎಂ.ಮಹೇಶ್‌ಕುಮಾರ್ ನೇತೃತ್ವದ ಚುನಾವಣಾಧಿಕಾರಿಗಳ ತಂಡ ಮಸ್ಟರಿಂಗ್ ಕೇಂದ್ರ ಹಾಗೂ ವಿವಿಧ ಮತಗಟ್ಟೆಗಳಿಗೆ ಭೇಟಿ ನೀಡಿ, ಪರಿಶೀಲಿಸಿತು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆ ಏ.26ರಂದು ನಡೆಯಲಿದ್ದು, ಅದಕ್ಕಾಗಿ ಜಿಲ್ಲಾ ಚುನಾವಣಾ ಆಯೋಗ ಸಿದ್ಧತೆ ಮಾಡಿಕೊಳ್ಳುತ್ತಿದೆ. ಕ್ಷೇತ್ರ ವ್ಯಾಪ್ತಿಯಲ್ಲಿ ಚುನಾವಣಾ ಕರ್ತವ್ಯವನ್ನು ವಿವಿಧ ಹಂತದ ಅಧಿಕಾರಿಗಳಿಗೆ ಹಂಚಿಕೆ ಮಾಡಲಾಗಿದ್ದು, ಆಯಾ ಅಧಿಕಾರಿಗಳು ತಮ್ಮ ನೇತೃತ್ವದ ಅಧಿಕಾರಿಗಳೊಂದಿಗೆ ಚುನಾವಣಾ ಸಿದ್ಧತಾ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ತಹಸೀಲ್ದಾರ್ ಕೆ.ಎಂ.ಮಹೇಶ್‌ಕುಮಾರ್ ನೇತೃತ್ವದ ತಂಡ ಮಸ್ಟರಿಂಗ್ ಹಾಗೂ ಮತಗಟ್ಟೆಗಳಿಗೆ ಭೇಟಿ ನೀಡಿ ಪರಿಶೀಲಿಸಿದರಲ್ಲದೆ, ಭದ್ರತೆ ಬಗ್ಗೆ ಅವಲೋಕಿಸಿತು.

ಮಸ್ಟರಿಂಗ್ ಕೇಂದ್ರ: ಮೈಸೂರು ಜಿಲ್ಲಾ ವ್ಯಾಪ್ತಿಯ ಮತಗಟ್ಟೆಗಳಿಗೆ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಣಿ ಸರ್ಕಾರಿ ಮಹಿಳಾ ಕಲಾ ಕಾಲೇಜಿನಲ್ಲಿ ಮಸ್ಟರಿಂಗ್ ಕೇಂದ್ರ ಸ್ಥಾಪಿಸಲು ಚುನಾವಣಾ ಆಯೋಗ ನಿರ್ಧರಿಸಿದ್ದು, ಅದಕ್ಕಾಗಿ ಇಂದು ಅಧಿಕಾರಿಗಳ ತಂಡ ಕಾಲೇಜಿಗೆ ಭೇಟಿ ನೀಡಿ, ಮತ ಯಂತ್ರಗಳನ್ನು ಸುರಕ್ಷಿತವಾಗಿಡಬಹುದಾದ ಕೊಠಡಿಗಳನ್ನು ಪರಿಶೀಲಿಸಿತು.

ವೇರ್‌ಹೌಸ್‌ನಿಂದ ಇನ್ನೆರಡು ದಿನದಲ್ಲಿ ಮತಯಂತ್ರಗಳನ್ನು ಮಸ್ಟರಿಂಗ್ ಕೇಂದ್ರಕ್ಕೆ ತರಲಾಗುತ್ತದೆ. ಬಳಿಕ ಅವುಗಳನ್ನು ಸುರಕ್ಷಿತವಾದ ಕೊಠಡಿಯಲ್ಲಿರಿಸಿ, ಸೀಲ್ ಮಾಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಗುರುತಿಸಲ್ಪಟ್ಟ ಕೊಠಡಿಗಳಿಗೆ ಭದ್ರತಾ ವ್ಯವಸ್ಥೆ ಕುರಿತು ಪರಿಶೀಲನೆ ಮಾಡಲಾಯಿತು.

ಮಳೆ ನೀರು ಕೊಠಡಿಗೆ ನುಗ್ಗುವ, ಚಾವಣಿ ಸೋರುವ, ವಿದ್ಯುತ್ ವೈರಿಂಗ್, ಹೊರಗಿನ ಜನರಿಂದ ಅಂತರ ಇರುವಿಕೆ ಸೇರಿದಂತೆ ವಿವಿಧ ಆಯಾಮಗಳಲ್ಲಿ ಕೊಠಡಿಗಳನ್ನು ಪರಿಶೀಲಿಸಲಾಯಿತು.

ಮತಗಟ್ಟೆಗಳ ಪರಿಶೀಲನೆ: ಮಸ್ಟರಿಂಗ್ ಕೇಂದ್ರ ಪರಿಶೀಲಿಸಿದ ಬಳಿಕ ಅಧಿಕಾರಿಗಳ ತಂಡ ಬೋಗಾದಿ, ಜನತಾನಗರ ಸೇರಿದಂತೆ ವಿವಿಧೆಡೆ ಇರುವ ಮತಗಟ್ಟೆಗಳಿಗೆ ತೆರಳಿ ಪರಿಶೀಲನೆ ನಡೆಸಿತು. ಈ ವೇಳೆ ಮತದಾನಕ್ಕೆ ಬರುವ ಜನರಿಗೆ ಮೂಲಸೌಲಭ್ಯ ಇರುವಿಕೆ, ಮತದಾನ ಮಾಡಲು ಮತಗಟ್ಟೆಗಳಲ್ಲಿ ಇರಬೇಕಾದ ಸೌಲಭ್ಯ, ವಿದ್ಯುತ್ ಸಂಪರ್ಕ, ಆಯಾ ಮತಗಟ್ಟೆ ವ್ಯಾಪ್ತಿಯಲ್ಲಿರುವ ಮತದಾರರ ಸಂಖ್ಯೆ ಸೇರಿದಂತೆ ಇನ್ನಿತರ ಮಾಹಿತಿಯನ್ನು ಕಲೆ ಹಾಕಿದರು. ಅಲ್ಲದೆ, ಮತದಾರರ ಪಟ್ಟಿಯಲ್ಲಿ ಹೆಸರು, ವಿಳಾಸ ತಿದ್ದುಪಡಿ, ಪರಿಷ್ಕರಣೆಗೆ ಸಲ್ಲಿಕೆಯಾಗುವ ಅರ್ಜಿ ಕುರಿತು ಮಾಹಿತಿ ಪಡೆದರು.



ಮೈಸೂರಿನ ಜನತಾನಗರದ ಶನೇಶ್ವರ ವಿದ್ಯಾ ಸಂಸ್ಥೆಯ ಮತಗಟ್ಟೆಗೆ ತಹಸೀಲ್ದಾರ್ ಕೆ.ಎಂ.ಮಹೇಶ್ ಕುಮಾರ್ ಭೇಟಿ ನೀಡಿ, ಪರಿಶೀಲಿಸಿದರು.

ಸ್ವೀಪ್ ಕಾರ್ಯಕ್ರಮದಡಿ ವೈದ್ಯಾಧಿಕಾರಿಗಳಿಗೆ ಮತದಾನ ಜಾಗೃತಿ

ಮೈಸೂರು, ಮಾ.19–ಜಿಲ್ಲಾಡಳಿತ ಹಾಗೂ ಜಿಲ್ಲಾ ಸ್ವೀಪ್ ಸಮಿತಿಯಿಂದ ಲೋಕಸಭಾ ಚುನಾವಣೆ 2024ರ ಪ್ರಯುಕ್ತ ಸ್ವೀಪ್ ಕಾರ್ಯಕ್ರಮದಡಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲೆಯ ಎಲ್ಲಾ ವೈದ್ಯಾಧಿಕಾರಿಗಳಿಗೆ ಮತದಾನ ಜಾಗೃತಿ ಮೂಡಿಸಲಾಯಿತು.



ಮತದಾನ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಮಾತನಾಡಿದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ.ಗಾಯಿತ್ರಿ ಮಾತನಾಡಿ, ಪ್ರಸ್ತುತ ಚುನಾವಣಾ ಪ್ರಕ್ರಿಯೆಗಳನ್ನು ಆನ್‌ಲೈನ್ ಆ್ಯಪ್(app) ಮೂಲಕವೇ ತಿಳಿಯಬಹುದಾಗಿದೆ. ಪ್ರತಿಯೊಬ್ಬರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇದೆಯೇ ಎಂಬುದನ್ನು ಪರಿಶೀಲಿಸಿ ತಿಳಿದುಕೊಳ್ಳಬಹುದಾಗಿದೆ. ಎಲ್ಲರು ಏಪ್ರಿಲ್ 26ರ ಮತದಾನ ದಿನದಂದು ತಪ್ಪದೇ ಮತದಾನದಲ್ಲಿ ಭಾಗವಹಿಸುವ ಜೊತೆಗೆ, ನಿಮ್ಮ ಕುಟುಂಬದ ಸದಸ್ಯರು ಪಾಲ್ಗೊಳ್ಳುವಂತೆ ಅರಿವು ಮೂಡಿಸಿ ಎಂದು ತಿಳಿಸಿದರು.

ಆರೋಗ್ಯ ಇಲಾಖೆ ವತಿಯಿಂದ ನಡೆಯುವ ಆರೋಗ್ಯ ಶಿಬಿರಗಳಲ್ಲೂ ಚುನಾವಣಾ ಜಾಗೃತಿ ಅರಿವು ಮೂಡಿಸಲು ಹಾಗೂ ತಾಲೂಕು ಆರೋಗ್ಯಾಧಿಕಾರಿಗಳು ಮತ್ತು ಆಶಾ ಕಾರ್ಯಕರ್ತೆಯರಿಗೂ ಮತದಾನದ ಅರಿವು ಮೂಡಿಸಿ, ಆ ಮೂಲಕ ಸಾರ್ವಜನಿಕರಿಗೂ ಜಾಗೃತಿ ತಲುಪುವಂತಾಗಲಿ ಎಂದು ಸಲಹೆ ನೀಡಿದರು.

ಸಹಾಯಕ ಸ್ವೀಪ್ ನೋಡಲ್ ಅಧಿಕಾರಿ ಶಾಂತ ಮಾತನಾಡಿ, ಸಂಪೂರ್ಣ ಚುನಾವಣಾ ಪ್ರಕ್ರಿಯೆ ಮೊಬೈಲ್‌ನಲ್ಲಿಯೇ ನೋಡಬಹುದಾಗಿದೆ. ವೋಟರ್ ಹೆಲ್ಪ್‌ಲೈನ್ ಆ್ಯಪ್(Votere helpline app)ನಲ್ಲಿ ಮತದಾರರ ನೊಂದಣಿ, ಮತದಾನ ಗುರುತಿನ ಚೀಟಿ ತಿದ್ದುಪಡಿ ಇದ್ದರೆ, ಇವಿಎಂ, ವಿವಿ ಪ್ಯಾಟ್‌ಗಳ ಬಗ್ಗೆ ಹಾಗೂ ಚುನಾವಣಾ ಅಭ್ಯರ್ಥಿಗಳ ಬಗ್ಗೆ ಅರಿಯಬಹುದಾಗಿದೆ. ಸಿವಿಜಿ ಆ್ಯಪ್‌ನಲ್ಲಿ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಾಗುತ್ತಿದ್ದರೆ ಅಂತಹ ಸಂದರ್ಭದಲ್ಲಿ ಫೋಟೋ ಕ್ಲಿಕ್ಕಿಸಿ ಕಳುಹಿಸಬಹುದು. ಇದರಲ್ಲಿ ದೂರು ಸಲ್ಲಿಸುವವರ ಯಾವುದೇ ವಿವರ ತಿಳಿಯುವುದಿಲ್ಲ. ಇದರಿಂದಾಗಿ ನೈತಿಕ ಮತದಾನ ಮಾಡಲು ಪ್ರೇರೇಪಿಸಬಹುದಾಗಿದೆ ಎಂದರು.

> **“ಪ್ರತಿಯೊಬ್ಬ ವೈದ್ಯರು ತಾವು ನೀಡುವ ಹೊರ ರೋಗಿಗಳ ವಿಭಾಗ ಚೀಟಿಯಲ್ಲಿ ಕಡ್ಡಾಯವಾಗಿ ಪ್ರಸ್ತುತ ಲೋಕಸಭಾ ಚುನಾವಣೆಯ ಘೋಷವಾಕ್ಯ ‘ಚುನಾವಣಾ ಪರ್ವ, ದೇಶದ ಗರ್ವ’ ಇದನ್ನು ಮುದ್ರಿಸಿ ಬಳಕೆ ಮಾಡಲು ಸೂಚಿಸಿದರು. ಹಾಗೂ ಜಿಲ್ಲೆಯ ಎಲ್ಲಾ ಮೆಡಿಕಲ್ ಸ್ಟೋರ್‌ಗಳಲ್ಲಿ ಚುನಾವಣಾ ಜಾಗೃತಿ ಮೂಡಿಸುವ ಸಂದೇಶಗಳನ್ನು ಬಳಕೆ ಮಾಡಿ ಜನರಲ್ಲಿ ಅರಿವು ಮೂಡಿಸುವಂತೆ ಕ್ರಮ ಕೈಗೊಳ್ಳಿ**
> **–ಕೆ.ಎಂ.ಗಾಯತ್ರಿ, ಜಿಪಂ ಸಿಇಓ**

18 ವರ್ಷ ಮೇಲ್ಪಟ್ಟವರು ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳುವಂತೆ ತಮ್ಮ ಸುತ್ತಮುತ್ತಲಿನವರಿಗೆ ಮಾಹಿತಿ ನೀಡಿ ಎಂದರು. ಇದೇ ವೇಳೆ ಎಲ್ಲಾ ವೈದ್ಯಾಧಿಕಾರಿಗಳಿಗೆ ಮತದಾನದ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ಡಿ.ಎಲ್.ಓ ಡಾ.ಬಿ.ಬೃಂದಾ, ಜಿಲ್ಲೆಯ ಎಲ್ಲಾ ವೈದ್ಯಾಧಿಕಾರಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು ಸೇರಿದಂತೆ ಇತರೆ ಸಿಬ್ಬಂದಿಗಳು ಸಹ ಹಾಜರಿದ್ದರು.

ಮೈಸೂರು-ಕೊಡಗು ಲೋಕಸಭಾ ಚುನಾವಣೆ-2024

ಅಕ್ರಮ ತಡೆಗೆ ಮೈಸೂರು ಜಿಲ್ಲಾಡಳಿತದಿಂದ ವ್ಯಾಪಕ ಕ್ರಮ; ಪತ್ರಿಕೆಗಳು, ವಾಹಿನಿಗಳ ವರದಿ, ಜಾಹೀರಾತು ಮೇಲೆ ನಿಗಾ





ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮಂಗಳವಾರ ‘ಮಾಧ್ಯಮ ಪ್ರಮಾಣೀಕರಣ, ಮೇಲ್ವಿಚಾರಣಾ ಕೋಶ’ದ ಅಧಿಕಾರಿಗಳ ತಂಡ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿ, ಜಾಹೀರಾತು ಗಮನಿಸುತ್ತಿರುವುದು. ಬಲಚಿತ್ರದಲ್ಲಿ ಚುನಾವಣಾ ಸೆಕ್ಷನ್ ಇರುವ ಕೊಠಡಿಗಳಿಗೆ ಹೊಸದಾಗಿ ಬಣ್ಣ ಬಳಿಯುತ್ತಿರುವುದನ್ನು ಕಾಣಬಹುದು.

ಮೈಸೂರು, ಮಾ.19(ಎಂಟಿವೈ)– ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿ ಹಿನ್ನೆಲೆಯಲ್ಲಿ ಚುನಾವಣಾ ಅಕ್ರಮ ತಡೆಗಟ್ಟುವ ನಿಟ್ಟಿನಲ್ಲಿ ರಚಿಸಲಾಗಿರುವ ವಿವಿಧ ತಂಡಗಳು ದಿನದ 24 ಗಂಟೆಯೂ ಅಭ್ಯರ್ಥಿಗಳೂ ಸೇರಿದಂತೆ ರಾಜಕೀಯ ಪಕ್ಷಗಳ ಸಭೆ, ಸಮಾರಂಭಗಳ ಮೇಲೆ ಹದ್ದಿನಕಣ್ಣಿಟ್ಟಿವೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಹೊಸ ಜಿಲ್ಲಾಧಿಕಾರಿ ಕಚೇರಿಯಲ್ಲಿ ವಿವಿಧ ತಂಡಗಳು ನೀತಿ ಸಂಹಿತೆ ಉಲ್ಲಂಘಿಸುವವರ ಮೇಲೆ ನಿಗಾ ಇಟ್ಟಿವೆ. ಈಗಾಗಲೇ ಜಿಲ್ಲಾ ಚುನಾವಣಾಧಿಕಾರಿಗಳು, ಚುನಾವಣಾ ಆಯೋಗದ ಸೂಚನೆ ಮೇರೆಗೆ ಚುನಾವಣಾ ಅಕ್ರಮ ತಡೆಗಾಗಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧೆಡೆ ಚೆಕ್‌ಪೋಸ್ಟ್ ಸ್ಥಾಪಿಸಿ ತಪಾಸಣಾ ಕಾರ್ಯ ಚುರುಕುಗೊಳಿಸಿರುವ ಬೆನ್ನಲ್ಲೇ ವಿವಿಧ ಆಯಾಮಗಳಲ್ಲಿ ರಾಜಕೀಯ ಪಕ್ಷಗಳ ಮುಖಂಡರ ಸಭೆ, ಸಮಾರಂಭ, ಅಭ್ಯರ್ಥಿಗಳ ಪ್ರಚಾರ ಸಭೆಗಳ ಪರಿಶೀಲಿಸಲು ಅಧಿಕಾರಿಗಳ ತಂಡ ಸಜ್ಜಾಗಿವೆ.

ಪತ್ರಿಕೆ, ವಾಹಿನಿಗಳ ಸುದ್ದಿ, ಜಾಹೀರಾತು ಮೇಲೂ ಕಣ್ಣು: ಚುನಾವಣೆಯಲ್ಲಿ ಹಣದ ಹೊಳೆ ಹಾಗೂ ದುಂದುವೆಚ್ಚಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಚುನಾವಣಾ ಆಯೋಗ ದಶಕಗಳ ಹಿಂದೆಯೇ ಚುನಾವಣಾ ವೆಚ್ಚ ನಿರ್ದಿಷ್ಟಗೊಳಿಸಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಚುನಾವಣೆಯಲ್ಲೂ ರಾಜಕೀಯ ಪಕ್ಷ ಹಾಗೂ ಅಭ್ಯರ್ಥಿಗಳು ಮಾಡುವ ವೆಚ್ಚದ ಮೇಲೆ ಚುನಾವಣಾ ಆಯೋಗ ಕಣ್ಣಿಟ್ಟಿದೆ. ಈ ಬಾರಿಯೂ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಖರ್ಚು–ವೆಚ್ಚ ಪರಿಶೀಲಿಸಲು ತಂಡವೊಂದನ್ನು ರಚಿಸಲಾಗಿದೆ. ಅದರಲ್ಲೂ ಪತ್ರಿಕೆಗಳಲ್ಲಿ ಪ್ರಕಟವಾಗುವ ಹಾಗೂ ವಾಹಿನಿಗಳಲ್ಲಿ ಬಿತ್ತರವಾಗುವ ಸುದ್ದಿ, ಜಾಹೀರಾತು ಪರಿಶೀಲನೆ ಹಾಗೂ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣದ ಸುದ್ದಿ ಗಮನಿಸಲು ‘ಮಾಧ್ಯಮ ಪ್ರಮಾಣೀಕರಣ ಮತ್ತು ಮೇಲ್ವಿಚಾರಣಾ ಕೋಶ’ ರಚಿಸಲಾಗಿದೆ.

ವಾರ್ತಾ ಇಲಾಖೆ ಉಪನಿರ್ದೇಶಕ ಅಶೋಕ್ ಕುಮಾರ್ ನೇತೃತ್ವದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧಿಕಾರಿ ಸುಧಾಮಣಿ, ಮೋಹನ್ ಕುಮಾರ್, ಗೀತಾಂಜಲಿ ಸೇರಿದಂತೆ ಇನ್ನಿತರರ ತಂಡ ಮಾಧ್ಯಮ ಪ್ರಮಾಣೀಕರಣ ಮತ್ತು ಮೇಲ್ವಿಚಾರಣಾ ಕೋಶದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಪತ್ರಿಕೆಗಳ ಮೇಲೆ ಕಣ್ಣಿಟ್ಟಿದೆ. ಅಲ್ಲದೆ, ವಿವಿಧ ವಾಹಿನಿಗಳಲ್ಲಿ ಪ್ರಸಾರವಾಗುವ ಸುದ್ದಿ, ಜಾಹೀರಾತು ಗಮನಿಸಲು ಟಿವಿ ವ್ಯವಸ್ಥೆ ಮಾಡಲಾಗಿದೆ. ಈ ತಂಡ ದಿನದ 24 ಗಂಟೆಯೂ ಕಾರ್ಯನಿರ್ವಹಿಸುತ್ತಿದೆ.

ವಿಡಿಯೋ ವ್ಯೂವಿಂಗ್ ತಂಡ: ಲೋಕಸಭಾ ಕ್ಷೇತ್ರ ವ್ಯಾಪ್ತಿಯ ತಾಲೂಕು ಕೇಂದ್ರಗಳಲ್ಲಿ ವಿಡಿಯೋ ವ್ಯೂವಿಂಗ್ ತಂಡದ ಕೇಂದ್ರ ಸ್ಥಾಪಿಸಲಾಗಿದ್ದು, ವಿವಿಧೆಡೆ ನಡೆಯುವ ರಾಜಕೀಯ ಸಭೆ, ಸಮಾರಂಭದ ವಿಡಿಯೋ ಚಿತ್ರೀಕರಣ ಮಾಡುವ ಸೆಕ್ಟರ್ ಅಧಿಕಾರಿಗಳು ವಿಡಿಯೋ ವ್ಯೂವಿಂಗ್ ತಂಡಕ್ಕೆ ವಿಡಿಯೋ ನೀಡಲಿದ್ದಾರೆ. ಆ ಬಳಿಕ ತಂಡದ ಸದಸ್ಯರು ವಿಡಿಯೋವನ್ನು ವೀಕ್ಷಿಸಿ, ನೀತಿ ಸಂಹಿತೆ ಉಲ್ಲಂಘನೆಯಾಗಿದ್ದರೆ ಪತ್ತೆ ಮಾಡುತ್ತಾರೆ. ಅಲ್ಲದೆ, ಆ ಸಮಾರಂಭಕ್ಕೆ ಆಗಿರುವ ಖರ್ಚನ್ನು ಅಂದಾಜಿಸಿ ವರದಿ ಸಲ್ಲಿಸಲಿದ್ದಾರೆ.

ಚುನಾವಣಾ ಸೆಕ್ಷನ್‌ಗೆ ಹೊಸ ಬಣ್ಣ: ಜಿಲ್ಲಾಧಿಕಾರಿಗಳ ಕಚೇರಿಯ ಮೊದಲನೇ ಮಹಡಿಯಲ್ಲಿ ವಿವಿಧ ತಂಡಗಳಿರುವ ಕೊಠಡಿಗಳು ಹಾಗೂ ಚುನಾವಣಾ ಸೆಕ್ಷನ್ ಇರುವ ಸ್ಥಳಕ್ಕೆ ಹೊಸದಾಗಿ ಬಣ್ಣ ಬಳಿಯಲಾಗುತ್ತಿದೆ. ಜಿಲ್ಲಾಧಿಕಾರಿಗಳ ಕಚೇರಿಗೆ ಬರುವ ಸಾರ್ವಜನಿಕರು ಗೋಡೆಗಳ ಮೇಲೆ ನಾನಾ ಬರಹ ಬರೆದಿರುವುದು, ಗೋಡೆ ಮೇಲೆ ಕಾಲಿಟ್ಟು ಗಲೀಜು ಮಾಡಿದ್ದ ಹಿನ್ನೆಲೆಯಲ್ಲಿ ಹೊಸದಾಗಿ ಬಣ್ಣ ಬಳಿಸಲಾಗುತ್ತಿದೆ.

ಸಿಸಿ ಕ್ಯಾಮರಾಗೆ ವೈರಿಂಗ್: ಚುನಾವಣಾ ಕಾರ್ಯ ಪಾರದರ್ಶಕವಾಗಿ ನಡೆಯುವ ಉದ್ದೇಶದಿಂದ ವಿವಿಧ ತಂಡಗಳು ಕಾರ್ಯ ನಿರ್ವಹಿಸುತ್ತಿರುವ ಕೊಠಡಿಗಳಿಗೆ ತಾತ್ಕಾಲಿಕವಾಗಿ ಸಿಸಿ ಕ್ಯಾಮರಾ ಅಳವಡಿಸುವ ಕಾರ್ಯ ಭರದಿಂದ ನಡೆಯುತ್ತಿದೆ. ಕೆಲವು ಕೊಠಡಿಗಳಿಗೆ ನೆಟ್‌ವರ್ಕ್ ಸಂಪರ್ಕ ಕಲ್ಪಿಸಲಾಗುತ್ತಿದೆ. ಅಲ್ಲದೆ, ಟಿವಿ, ಲ್ಯಾಪ್‌ಟಾಪ್ ಬಳಕೆಯಾಗಿ ವಿದ್ಯುತ್ ಸಂಪರ್ಕ ನೀಡುವ ವ್ಯವಸ್ಥೆಯನ್ನು ತ್ವರಿತವಾಗಿ ನಡೆಸಲಾಗುತ್ತಿದೆ.

ಮೈಸೂರು ಮಿತ್ರ ಬುಧವಾರ 20 ಮಾರ್ಚ್ 2024

ಮಂಡ್ಯದಿಂದ ಹೆಚ್.ಡಿ.ಕುಮಾರಸ್ವಾಮಿ ಸ್ಪರ್ಧಿಸಿದರೂ ಕಾಂಗ್ರೆಸ್‌ನಿಂದ ನಾನೇ ಅಭ್ಯರ್ಥಿ: ಸ್ಟಾರ್ ಚಂದ್ರು



ಮಂಡ್ಯದ ಬ್ರಾಹ್ಮಣರ ಮಹಾಸಭಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಮಾತನಾಡಿದರು.

ಮಂಡ್ಯ, ಮಾ.19– ಮಂಡ್ಯದಿಂದ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಸ್ಪರ್ಧಿಸಿದರೂ ನಾನೇ ಕಾಂಗ್ರೆಸ್ ಅಭ್ಯರ್ಥಿ ಎಂದು ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಹೇಳಿದರು.

ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಮಂಗಳವಾರ ನಗರದ ಬ್ರಾಹ್ಮಣ ಮಹಾಸಭಾದಲ್ಲಿ ನಡೆದ ಬ್ರಾಹ್ಮಣ ಸಮುದಾಯದ ಸಭೆಯಲ್ಲಿ ಭಾಗವಹಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಜಿ ಶಾಸಕ ಸಿ.ಎಸ್.ಪುಟ್ಟರಾಜು ಅಥವಾ ಮಾಜಿ ಸಿಎಂ ಕುಮಾರಸ್ವಾಮಿ ಅವರಿಬ್ಬರಲ್ಲಿ ಯಾರೇ ಮೈತ್ರಿ ಅಭ್ಯರ್ಥಿಯಾದರೂ ಕಾಂಗ್ರೆಸ್ ಪಕ್ಷದಿಂದ ನಾನೇ ಅಭ್ಯರ್ಥಿ. ಈಗಾಗಲೇ ಪಕ್ಷ ನನ್ನನ್ನು ಅಭ್ಯರ್ಥಿಯಾಗಿ ಘೋಷಿಸಿದೆ. ಹೀಗಾಗಿ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದರು.

ಈಗಾಗಲೇ ತಾವು ಕ್ಷೇತ್ರದಲ್ಲಿ ಪ್ರಚಾರ ನಡೆಸುತ್ತಿದ್ದು, ಮತದಾರರು ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಹೀಗಾಗಿ ನನ್ನ ಗೆಲುವಿಗೆ ಪೂರಕ ವಾತಾವರಣ ನಿರ್ಮಾಣವಾಗಿದೆ. ಲೋಕಸಭೆ ಚುನಾವಣೆಯಲ್ಲಿ ಬ್ರಾಹ್ಮಣ ಸಮುದಾಯ ನನ್ನನ್ನು ಬೆಂಬಲಿಸಬೇಕು. ನಾನು ಮಂಡ್ಯದಲ್ಲೇ ಸದಾ ಇದ್ದು ಅವರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಪ್ರಾಮಾಣಿಕವಾಗಿ ಕೆಲಸ ಮಾಡುವೆ ಎಂದು ತಿಳಿಸಿದರು.

ಶಾಸಕ ಗಣಿಗ ಪಿ.ರವಿಕುಮಾರ್‌ಗೌಡ ಮಾತನಾಡಿ, ಕಳೆದ ವಿಧಾನಸಭೆ ಚುನಾವಣೆಯಲ್ಲಿ ಬ್ರಾಹ್ಮಣ ಮಹಾಸಭಾದಲ್ಲೇ ಚುನಾವಣೆ ಪ್ರಚಾರ ಆರಂಭಿಸಿದ್ದೆ. ಅವರ ಆಶೀರ್ವಾದದಿಂದ ಚುನಾವಣೆಯಲ್ಲಿ ಗೆದ್ದೆ. ಅದೇ ರೀತಿ ಸ್ಟಾರ್ ಚಂದ್ರು ಅವರು ಕೂಡ ಇಲ್ಲಿಯೇ ಪ್ರಚಾರ ಆರಂಭಿಸಿದ್ದಾರೆ. ಅವರಿಗೂ ಬ್ರಾಹ್ಮಣರ ಆಶೀರ್ವಾದ ದೊರಕಿದ್ದು, ಗೆದ್ದೇ ಗೆಲ್ಲುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಬ್ರಾಹ್ಮಣ ಸಮುದಾಯದ ಮುಖಂಡ ಬೆಳ್ಳೂರು ಶಿವರಾಂ ಮಾತನಾಡಿ, ಮಂಡ್ಯ ಸ್ವಾಭಿಮಾನದ ಜಿಲ್ಲೆಯಾಗಿದೆ. ಸಾಹುಕಾರ್ ಚನ್ನಯ್ಯ, ಕೆ.ವಿ.ಶಂಕರೇಗೌಡ, ಎಚ್.ಕೆ ವೀರಣ್ಣಗೌಡರಂತಹ ಮಹಾನ್ ನಾಯಕರನ್ನು ಕೊಡುಗೆ ನೀಡಿದೆ. ಬೇರೆ ಜಿಲ್ಲೆಯವರಿಗೆ ಅವಕಾಶ ಬೇಡವೆಂದು ಕಾಂಗ್ರೆಸ್ ಸ್ಥಳೀಯರನ್ನೇ ಅಭ್ಯರ್ಥಿಯಾಗಿಸಿದೆ. ಅವರಿಗೆ ಶುಭವಾಗಲಿ ಎಂದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹಾಗೂ ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಮಂಡ್ಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರುದ್ರಪ್ಪ ಮಾತನಾಡಿದರು. ಮಾಜಿ ಶಾಸಕ ಎಚ್.ಬಿ. ರಾಮು, ಕಾಂಗ್ರೆಸ್ ಜಿಲ್ಲಾ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್, ಕೆಪಿಸಿಸಿ ಸದಸ್ಯ ಸಿ.ಜೆ.ನಾಗರಾಜು, ಬ್ರಾಹ್ಮಣ ಸಮುದಾಯದ ಅಣ್ಣಯ್ಯ, ಸದಾಶಿವ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ನಿರ್ದೇಶಕ ಎನ್.ಕೃಷ್ಣೇಗೌಡ ಇತರರಿದ್ದರು.

ನೇಮಕ



ಮಂಡ್ಯ, ಮಾ.19– ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ನಾಮ ನಿರ್ದೇಶಕರಾಗಿ ಪತ್ರಕರ್ತ ಎನ್.ಕೃಷ್ಣೇಗೌಡ ಅವರನ್ನು ರಾಜ್ಯ ಸರ್ಕಾರ ನೇಮಕ ಮಾಡಿ ಆದೇಶ ಹೊರಡಿಸಿದೆ.





ವೈರಮುಡಿ ಬ್ರಹ್ಮೋತ್ಸವ ಹಿನ್ನೆಲೆಯಲ್ಲಿ ವರ್ಣರಂಜಿತ ದೀಪಾಲಂಕಾರದಿಂದ ಕಂಗೊಳಿಸುತ್ತಿರುವ ಮೇಲುಕೋಟೆ.

ವೈರಮುಡಿ ಉತ್ಸವಕ್ಕೆ ಮೇಲುಕೋಟೆ ಸಂಪೂರ್ಣ ಸಜ್ಜು

ಮೇಲುಕೋಟೆ, ಮಾ.19– ಮಾ.21ರಂದು ನಡೆಯಲಿರುವ ವಿಶ್ವವಿಖ್ಯಾತ ವೈರಮುಡಿ ಉತ್ಸವಕ್ಕೆ ಮೇಲುಕೋಟೆ ಸಂಪೂರ್ಣವಾಗಿ ಸಜ್ಜುಗೊಂಡಿದ್ದು, ಕಿರೀಟಧಾರಣ ಮಹೋತ್ಸವಕ್ಕೆ ಕ್ಷಣಗಣನೆ ಆರಂಭವಾಗಿದೆ.

ತಮಿಳುನಾಡು, ಆಂಧ್ರ, ತೆಲಂಗಾಣ, ಗುಜರಾತ್ ಮುಂತಾದ ಕಡೆಗಳಿಂದ ಭಕ್ತರು ತಂಡೋಪತಂಡವಾಗಿ ಮೇಲುಕೋಟೆಗೆ ಆಗಮಿಸುತ್ತಿದ್ದು, ಎಲ್ಲಾ ಛತ್ರಗಳು, ರಾಮಾನುಜಕೂಟಂಗಳು, ವಸತಿಗೃಹಗಳು ಭಕ್ತರಿಂದ ತುಂಬಿ ತುಳುಕುತ್ತಿವೆ.

ವೈವಿಧ್ಯಮಯ ದೀಪಾಲಂಕಾರದಿಂದ ರಾಜಬೀದಿ, ಕಲ್ಯಾಣಿ, ಯೋಗನರಸಿಂಹಸ್ವಾಮಿ ಬೆಟ್ಟ, ರಾಯಗೋಪುರ ಅಕ್ಕ–ತಂಗಿ ಕೊಳ ಉತ್ಸವ ಬೀದಿಗಳು ನಯನ ಮನೋಹರವಾಗಿ ಕಂಗೊಳಿಸುತ್ತಿದ್ದು, ದೇವಾಲಯದಲ್ಲಿ ವೇದಮಂತ್ರ ಪಾರಾಯಣ ಮಂಗಳವಾದ್ಯದ ನೀನಾದ ಕೇಳಿಬರುತ್ತಿದ್ದು, ಸಾಕ್ಷಾತ್ ಭೂ ವೈಕುಂಠದಂತೆ ಭಾಸವಾಗುತ್ತಿದೆ.

ಚೆಲುವನಾರಾಯಣಸ್ವಾಮಿಯ ವಿವಿಧ ಉತ್ಸವಗಳ ದಿವ್ಯಮಂಗಳರೂಪ ಭಕ್ತರನ್ನು ದೈವಿಲೋಕಕ್ಕೆ ಸೆಳೆದೊಯ್ಯುತ್ತಿದೆ. ಎರಡನೇ ತಿರುನಾಳ್ ಅಂಗವಾಗಿ ಚೆಲುವನಾರಾಯಣನಿಗೆ ಮುತ್ತುಮುಡಿ ಕಿರೀಟದ ಅಲಂಕಾರದಲ್ಲಿ ಉತ್ಸವ ನಡೆದರೆ, ರಾತ್ರಿ ಶೇಷವಾಹನೋತ್ಸವ ಅದ್ದೂರಿಯಾಗಿ ನೆರವೇರಿತು. ಬುಧವಾರ 3ನೇ ತಿರುನಾಳ್ ಅಂಗವಾಗಿ ಮಧ್ಯಾಹ್ನ 2 ಗಂಟೆಯಿಂದ ನಾಗವಲ್ಲಿ ಮಹೋತ್ಸವ ಆರಂಭವಾಗಲಿದೆ. ರಾತ್ರಿ ಚಿನ್ನದ ಪಲ್ಲಕ್ಕಿಯಲ್ಲಿ ವಿರಾಜಮಾನನಾದ ಸ್ವಾಮಿ ಹಾಗೂ ಕಲ್ಯಾಣ ನಾಯಕಿಯವರ ಭವ್ಯಮೆರವಣಿಗೆ ನಡೆಯಲಿದೆ. ಇದಾದ ನಂತರ ಚಂದ್ರಮಂಡಲ ವಾಹನೋತ್ಸವ ನಡೆಯಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಎನ್ ಚಲುವರಾಯಸ್ವಾಮಿ ಮಾರ್ಗದರ್ಶನದಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ವಿಶೇಷ ಕಾಳಜಿಯಿಂದಾಗಿ ಜಿಲ್ಲಾಧಿಕಾರಿ ಡಾ.ಕುಮಾರ್ ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್ ನಾಗರಾಜ್ ಜಿಲ್ಲಾಪೊಲೀಸ್ ವರಿಷ್ಠಾಧಿಕಾರಿ ಯತೀಶ್ ವೈರಮುಡಿ ಬ್ರಹ್ಮೋತ್ಸವಕ್ಕೆ ಸಿದ್ಧಮಾಡಿದ್ದಾರೆ.

ಬರ ಪರಿಹಾರ, ನಾಲೆಗಳಿಗೆ ನೀರು ಬಿಡುಗಡೆಗೆ ಒತ್ತಾಯಿಸಿ ರೈತ ಸಂಘ ಪ್ರತಿಭಟನೆ



ಬರ ಪರಿಹಾರ, ನಾಲೆಗಳಿಗೆ ನೀರು ಬಿಡುಗಡೆಗೆ ಒತ್ತಾಯಿಸಿ ಮಂಡ್ಯದಲ್ಲಿ ರೈತರು ಪ್ರತಿಭಟನೆ ನಡೆಸಿದರು.

ಮಂಡ್ಯ, ಮಾ.19– ಭೀಕರ ಬರಗಾಲದ ಹಿನ್ನೆಲೆಯಲ್ಲಿ ಸಂಕಷ್ಟದಲ್ಲಿರುವ ರೈತರಿಗೆ ಬರ ಪರಿಹಾರ ನೀಡಬೇಕು, ಒಣಗುತ್ತಿರುವ ಬೆಳೆ ರಕ್ಷಣೆಗೆ ನಾಲೆಗಳಿಗೆ ನೀರು ಹರಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡರು ಪ್ರತಿಭಟನೆ ನಡೆಸಿದರು.

ನಗರದ ಸರ್‌ಎಂವಿ ಪ್ರತಿಮೆಯಿಂದ ಮೆರವಣಿಗೆ ಹೊರಟ ರೈತ ಸಂಘದ ಕಾರ್ಯಕರ್ತರು, ಪ್ರಧಾನಿ ನರೇಂದ್ರ ಮೋದಿ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಧರಣಿ ನಡೆಸಿ, ಮನವಿ ಸಲ್ಲಿಸಿದರು. ಮುಂಗಾರು ಮಳೆ ಕೈಕೊಟ್ಟ ಹಿನ್ನೆಲೆಯಲ್ಲಿ ಮಳೆ ಅಭಾವ, ತಮಿಳುನಾಡಿಗೆ ನಿರಂತರ ನೀರು ಹರಿಸಿದ ಪರಿಣಾಮ ಹಾಗೂ ನಾಲೆಗಳ ಅಸಮರ್ಪಕ ನಿರ್ವಹಣೆ ಬೆಳೆಗಳಿಗೆ ಸಂಕಷ್ಟ ತಂದೊಡ್ಡಿದ್ದರೆ ಬೇಸಿಗೆಯಲ್ಲಿ ಬೆಳೆದು ನಿಂತಿರುವ ಬೆಳೆ ರಕ್ಷಣೆ ಕಷ್ಟಕರವಾಗಿದೆ, ಭೀಕರ ಬರಗಾಲದ ಹಿನ್ನೆಲೆಯಲ್ಲಿ ಕಬ್ಬು, ತೆಂಗು, ತೋಟಗಾರಿಕೆ ಅರಣ್ಯ ಕೃಷಿ ನೆಲಕಚ್ಚಿವೆ. ಜನ–ಜಾನುವಾರುಗಳಿಗೆ ನೀರಿನ ಅಭಾವ ಎದುರಾಗಿದ್ದರೂ ಆಳುವ ಕೇಂದ್ರ ಮತ್ತು ರಾಜ್ಯ ಸರ್ಕಾರ ರೈತರ ಬಗ್ಗೆ ನಿರ್ಲಕ್ಷ್ಯ ವಹಿಸಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬರ ಪರಿಸ್ಥಿತಿಯಿಂದ ತತ್ತರಿಸಿರುವ ರೈತರಿಗೆ ನೆರವಾಗಲು ಪ್ರತಿ ಎಕರೆಗೆ 25,000 ರೂ. ಪರಿಹಾರ ನೀಡಬೇಕು. ಆದಷ್ಟು ಶೀಘ್ರವಾಗಿ ಬರ ಪರಿಹಾರದ ಹಣ ಬಿಡುಗಡೆ ಮಾಡಬೇಕು. ಬ್ಯಾಂಕ್, ಸಹಕಾರ ಸಂಘಗಳಲ್ಲಿ ರೈತರು ಪಡೆದಿರುವ ಕೃಷಿ ಸಾಲ, ಚಿನ್ನದ ಅಡಮಾನ ಸಾಲ, ಸ್ತ್ರೀ ಶಕ್ತಿ ಸಂಘಗಳ ಸಂಪೂರ್ಣ ಸಾಲಮನ್ನಾ ಮಾಡಬೇಕು. ಬೆಂಗಳೂರಿಗೆ ಕುಡಿಯುವ ನೀರಿನ ನೆಪದಲ್ಲಿ ಕಾವೇರಿ ನದಿ ಮೂಲಕ ತಮಿಳುನಾಡಿಗೆ ನೀರು ಬಿಡುವುದನ್ನು ನಿಲ್ಲಿಸಿ, ತಕ್ಷಣದಿಂದ ಜಿಲ್ಲೆಯ ನಾಲೆಗಳಿಗೆ ನೀರು ಹರಿಸಬೇಕು. ತೆಂಗು, ಅಡಿಕೆ, ಕಬ್ಬು, ತೋಟಗಾರಿಕೆ ಬೆಳೆಗಳನ್ನು ಉಳಿಸಬೇಕು ಎಂದು ಒತ್ತಾಯಿಸಿದರು.

ರೈತರ ಪ್ರಮುಖ ವಾಣಿಜ್ಯ ಬೆಳೆ ಕಬ್ಬನ್ನು ವಿಮೆ ವ್ಯಾಪ್ತಿಗೆ ತರಬೇಕು ಕಬ್ಬು ಬೆಳೆ ನಷ್ಟಕ್ಕೆ ಪ್ರತಿ ಎಕರೆಗೆ 40,000 ರೂ. ಪರಿಹಾರ ನೀಡಬೇಕು. ಖಾಸಗಿ ಕಾರ್ಖಾನೆಗಳ ಇಳುವರಿ ಆಧಾರಿತ ಬೆಲೆ ನೀತಿ ಕೈಬಿಟ್ಟು ಸಮತೋಲನ ಬೆಲೆ ಕೊಡಬೇಕು. ರೇಷ್ಮೆ ಬೆಳೆಗೆ ಪ್ರತಿ ಕೆಜಿಗೆ 600 ರಿಂದ 700 ರೂ ದರ ನೀಡಬೇಕು, ಬೇಸಿಗೆ ಕಾಲದಲ್ಲಿ ಕೆರೆ, ಕಟ್ಟೆ, ನಾಲೆಯ ಹೂಳು ತೆಗಿಸಿ ನೀರು ಸಂಗ್ರಹಣೆಗೆ ಅನುಕೂಲ ಮಾಡಿಕೊಡಬೇಕು. ಹಾಲು ಉತ್ಪಾದಕರಿಗೆ ಸರ್ಕಾರದಿಂದ ಬರುವ ಪ್ರೋತ್ಸಾಹ ಧನವನ್ನು ಶೀಘ್ರದಲ್ಲೇ ಬಿಡುಗಡೆ ಮಾಡಬೇಕು, ಶ್ರೀರಂಗಪಟ್ಟಣ ತಾಲೂಕಿನಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ ತಡೆಗಟ್ಟಬೇಕು ಎಂದು ಒತ್ತಾಯಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಇಂಡುವಾಳು ಚಂದ್ರಶೇಖರ್, ಮುಖಂಡರಾದ ನಾಗರಾಜ್, ಸೀತಾ ರಾಮು, ನಂಜುಂಡಯ್ಯ, ಮಹೇಂದ್ರ, ಸುರೇಶ್, ಶಿವಲಿಂಗಯ್ಯ, ಕಾಂತರಾಜು, ಪುಟ್ಟಸ್ವಾಮಿ, ಲಿಂಗರಾಜು, ಕೆಜಿ.ಪ್ರಭುಲಿಂಗು, ನಾಗೇಂದ್ರ ಸ್ವಾಮಿ, ಸೊ.ಪಿ. ಪ್ರಕಾಶ್, ಬೋರಲಿಂಗೇಗೌಡ ಭಾಗವಹಿಸಿದ್ದರು.

ಅಹಂ ದೂರವಾದರೆ ವಿಶ್ವಮಾನವರಾಗಿ ಶಾಂತಿಯಿಂದ ಬದುಕಬಹುದು

ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಅಭಿಮತ



'ಕನಕ ಸ್ಮರಣೆ ಹಾಗೂ ಸುಗಮ ಸಂಗೀತ ತರಬೇತಿ ಶಿಬಿರ' ಸಮಾರೋಪ ನಡೆಯಿತು.

ಕಿಕ್ಕೇರಿ, ಮಾ19– ಜಗತ್ತಿನಲ್ಲಿ ನಾನು ಎಂಬ ಅಹಂ ದೂರವಾದರೆ ವಿಶ್ವ ಮಾನವರಾಗಿ ಶಾಂತಿಯಿಂದ ಬದುಕಬಹುದು ಎಂದು ಕೀರ್ತನೆ ಮೂಲಕ ಸಾರಿದವರು ಕನಕದಾಸರು ಎಂದು ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ಅಧ್ಯಕ್ಷ ಗಾಯಕ ಡಾ. ಕಿಕ್ಕೇರಿ ಕೃಷ್ಣಮೂರ್ತಿ ಹೇಳಿದರು.

ಪಟ್ಟಣದಲ್ಲಿ ಸ್ಪಂದನಾ ಫೌಂಡೇಷನ್, ಬೆಂಗಳೂರಿನ ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ಏರ್ಪಡಿಸಿದ್ದ ಕನಕ ಸ್ಮರಣೆ ಹಾಗೂ ಸುಗಮ ಸಂಗೀತ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ವಿಶಾಲ ಜಗತ್ತಿನಲ್ಲಿ ಸಮಾನತೆ, ದೈವತ್ವ ಎಲ್ಲವನ್ನು ಕಾಣಬಹುದು ಎಂದವರು ಕನಕರು. ಸುಗಮ ಸಂಗೀತ ಪ್ರಾಕಾರದಲ್ಲಿ ಭಾವಗೀತೆ, ತತ್ವಪದ, ವಚನ, ದಾಸರ ಪದ ಎಲ್ಲವೂ ಇದೆ. ಕನಕರ ಕೀರ್ತನೆ, ಮುಂಡಿಗೆ (ಒಗಟಿನ ರೂಪದ ಗೀತ ಗುಚ್ಛ) ಬೀಜಾಂಕುರ ಸಮಷ್ಟಿಯಲ್ಲಿ ಸಮೃದ್ಧವಾಗಿ ಬೆಳೆಯಲು ಭವಿಷ್ಯದ ಮಕ್ಕಳ ಮನಸ್ಸಿನಲ್ಲಿ ಬಿತ್ತುವ ಕೆಲಸವಾಗಬೇಕಿದೆ. ಮೋಹನ ತರಂಗಿಣಿ, ರಾಮಧಾನ್ಯ ಹರಿಭಕ್ತಸಾರದಂತಹ ಉತ್ಕೃಷ್ಟ ಕಾವ್ಯ ರಚಿಸಿ ಸರ್ವ ಶ್ರೇಷ್ಠರಾದರು. ಸಾಮರಸ್ಯದ ಬದುಕಿಗೆ ಜನಸಾಮಾನ್ಯರಿಗೆ ಸುಲಭವಾಗಿ ತಲುಪುವಂತೆ ಸಾವಿರಾರು ಕೀರ್ತನೆಗಳನ್ನು ರಚಿಸಿ ಸಮಾನತೆಯ ಬೀಜವನ್ನು ನಾಡಿಗೆ ಬಿತ್ತಿದವರು ಕನಕದಾಸರು ಎಂದರು. ಕನಕದಾಸರು 'ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ', 'ಕುಲಕುಲ ಕುಲವೆಂದು ಹೊಡೆದಾಡದಿರಿ', 'ನೀಮಾಯೆಯೊಳಗೊ ನಿನ್ನೊಳು ಮಾಯೆಯೊ' ಎಂಬ ಕೀರ್ತನೆಗಳನ್ನು ಹಾಡಿ ಭವಿಷ್ಯದ ಮಕ್ಕಳಲ್ಲಿ ಸಮಾನತೆಯ ಸಾರವನ್ನು ತಿಳಿಯುವಂತೆ ಮಾಡಿದರು ಎಂದು ಹೇಳಿದರು. ಗಾಯಕಿ ಸೀಮಾ ರಾಯ್ಕರ್ 'ಕನಕರ ಗುರು ಬಂದಾ', 'ಪುಟಿ ಪುಟಿದು ಬಂದಾ ಬಂಗಾರ ಕನಕ' ಎಂಬ ಗೀತೆಯೊಂದಿಗೆ ಕನಕರನ್ನು ಸ್ಮರಿಸಿದರು. ಕನಕರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಕನಕರ ಸ್ಮರಿಸಲಾಯಿತು.



ಮೈಸೂರಿನ ಹಿರಿಯ ವಕೀಲ ಎಸ್. ಲೋಕೇಶ್ ಅವರು ವೃತ್ತಿಯಲ್ಲಿ 25 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ರಜತ ಮಹೋತ್ಸವದ ಅಂಗವಾಗಿ ಅವರನ್ನು ಎಸ್. ಲೋಕೇಶ್ ಅಭಿಮಾನಿ ಬಳಗದಿಂದ ಅಭಿನಂದಿಸಲಾಯಿತು. ಈ ವೇಳೆ ಎಸ್.ಲೋಕೇಶ್ ಅವರ ಶಿಷ್ಯ ವೃಂದ ಹಾಗೂ ಮೈಸೂರು ನಗರ ಹಾಗೂ ಜಿಲ್ಲೆಯ ವಿವಿಧ ತಾಲೂಕಿನ ಹಿರಿಯ, ಕಿರಿಯ ವಕೀಲರು ಉಪಸ್ಥಿತರಿದ್ದರು.

ಬೈಕ್‌ಗೆ ಕಾರು ಡಿಕ್ಕಿ: ಶಿಕ್ಷಕ ಸಾವು



ನಾಗಮಂಗಲ, ಮಾ.19– ತಾಲೂಕಿನ ಚಾಮರಾಜನಗರ– ಜೇವರ್ಗಿ ರಸ್ತೆಯ ಬ್ರಹ್ಮದೇವರಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಜೋಡಿ ನೇರಳಕೆರೆ ಗೇಟ್ ಬಳಿ ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಇಜ್ಜಲಘಟ್ಟ ಶಾಲೆಯ ಮುಖ್ಯ ಶಿಕ್ಷಕ ಸಾವನ್ನಪ್ಪಿದ್ದಾರೆ.

ತಾಲೂಕಿನ ಹೆಚ್. ಭುವನಹಳ್ಳಿ ಗ್ರಾಮದ ಬಿ.ಎನ್ ರಾಮಕೃಷ್ಣೇಗೌಡ (59) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಇಂದು ಸಂಜೆ ತಾವು ಕೆಲಸ ಮಾಡುತ್ತಿದ್ದ ಇಜ್ಜಲಘಟ್ಟ ಗ್ರಾಮದ ಶಾಲೆಯಿಂದ ತಮ್ಮ ಗ್ರಾಮಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ವೇಗವಾಗಿ ಬಂದ ಕಾರು ಇವರ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ರಾಮಕೃಷ್ಣೇಗೌಡ ಸುಮಾರು 300 ಮೀಟರ್‌ನಷ್ಟು ದೂರಕ್ಕೆ ಬಿದ್ದು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಮೃತರು ಪತ್ನಿ, ಮಗಳು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಇವರ ಸಾವಿಗೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಜೆ.ವೈ. ಮಂಜುನಾಥ್, ತಾಲೂಕು ಶಿಕ್ಷಕರ ಸಂಘದ ಅಧ್ಯಕ್ಷ ರುದ್ರೇಶ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಜೆ. ಕುಮಾರ್, ವಿಶ್ವ, ಮಂಜು ಸೇರಿದಂತೆ ಹಲವಾರು ಶಿಕ್ಷಕರು ಸಂತಾಪ ವ್ಯಕ್ತಪಡಿಸಿದ್ದಾರೆ.

ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಂಗೆ ನುಡಿನಮನ



ಇತ್ತೀಚಿಗೆ ನಿಧನರಾದ ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಂ ಅವರಿಗೆ ಜಿಲ್ಲಾ ಕಸಾಪ ಮತ್ತು ಪುಣ್ಯಕೋಟಿ ಸೇವಾ ಟ್ರಸ್ಟ್‌ನ ಪದಾಧಿಕಾರಿಗಳು ನುಡಿನಮನ ಸಲ್ಲಿಸಿದರು.

ಮೈಸೂರು, ಮಾ.19(ಎಸ್‌ಪಿಎನ್)– ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ ಜಿಲ್ಲಾ ಕಸಾಪ ಭವನದ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಇತ್ತೀಚೆಗೆ ನಿಧನರಾದ ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಂ ಅವರಿಗೆ ಜಿಲ್ಲಾ ಕಸಾಪ ಮತ್ತು ಪುಣ್ಯಕೋಟಿ ಸೇವಾ ಟ್ರಸ್ಟ್‌ನ ಪದಾಧಿಕಾರಿಗಳು ನುಡಿನಮನ ಸಲ್ಲಿಸಿದರು.

ಸುಯೋಗ್ ಆಸ್ಪತ್ರೆಯ ಸಂಸ್ಥಾಪಕ ಡಾ.ಎಸ್.ಪಿ.ಯೋಗಣ್ಣ ನುಡಿನಮನ ಸಲ್ಲಿಸುತ್ತಾ, ಕೆ.ಶಿವರಾಂ ಅವರು ಸರ್ಕಾರದ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುವಾಗ ಬಡವರು, ಶೋಷಿತರು, ದಲಿತರ ನೋವಿಗೆ ಸ್ಪಂದಿಸಿದ್ದರು. ಅವರು ಸಮಾಜ ಕಲ್ಯಾಣ ಇಲಾಖೆ ಹಾಗೂ ಮೈಸೂರು ನಗರಪಾಲಿಕೆ ಆಯುಕ್ತರ ಹುದ್ದೆಯಲ್ಲಿದ್ದಾಗ ಇಲ್ಲಿನ ಸುಧಾರಣೆಗೆ ಅನೇಕ ಕ್ರಮಗಳನ್ನು ಕೈಗೊಂಡಿದ್ದ ಬಗ್ಗೆ ವಿವರಿಸಿದರು.

ಐಎಎಸ್ ಹುದ್ದೆಯಲ್ಲಿದ್ದುಕೊಂಡೆ ಕೆಲ ಸಿನಿಮಾದಲ್ಲಿ ಅಭಿನಯಿಸಿದ್ದರು. ಆ ಸಂದರ್ಭದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ನೋಟೀಸ್ ಜಾರಿ ಮಾಡಿದ್ದರು. ಆಗ ಅವರ ಮನೆಗೆ ನಾನು ಭೇಟಿ ನೀಡಿ, ಸರ್ಕಾರಿ ಸೇವೆಯಲ್ಲಿರುವಾಗ ಬೇರೆ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವುದು ತರವಲ್ಲ ಎಂದು ಸಲಹೆ ನೀಡಿದ್ದೆ. ಆ ಸಲಹೆಯನ್ನು ಕೆ.ಶಿವರಾಂ ಪರಿಗಣಿಸಿ, ಸಿನಿಮಾ ಕ್ಷೇತ್ರದಿಂದ ಕೆಲವು ದಿನಗಳ ಮಟ್ಟಿಗೆ ದೂರ ಸರಿದಿದ್ದ ಪ್ರಸಂಗವನ್ನು ವಿವರಿಸಿದರು.

ನಂತರ ಐಎಎಸ್ ಹುದ್ದೆಗೆ ರಾಜೀನಾಮೆ ನೀಡಿ, ರಾಜಕೀಯದಲ್ಲಿ ಗುರುತಿಸಿಕೊಳ್ಳಲು ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಸೇರಿದಂತೆ ಮೂರು ಪಕ್ಷಗಳಲ್ಲೂ ಗುರುತಿಸಿಕೊಂಡರೂ ರಾಜಕಾರಣಿಗಳು ಕೆ.ಶಿವರಾಂ ಅವರ ಸೇವೆಯನ್ನು ಗುರುತಿಸಲಿಲ್ಲ. ಅಲ್ಲದೆ ಕೆ.ಶಿವರಾಂ ತಮ್ಮ ಜೀವಿತಾವಧಿಯಲ್ಲಿ ಛಲವಾದಿ ಮಹಾಸಭಾ ಸಂಘಟನೆ ಕಟ್ಟಿ, ಸಮುದಾಯದ ಏಳಿಗೆಗೆ ಸಾಕಷ್ಟು ಶ್ರಮಿಸಿದ್ದರು.

ನಂತರ ಮೂರು ರಾಜಕೀಯ ಪಕ್ಷಗಳ ಬಾಗಿಲು ಬಡಿದರೂ ಇವರಿಗೆ ಅವಕಾಶ ದೊರಕದಿರುವುದು ಬೇಸರದ ಸಂಗತಿ. ಆದರೆ, ಒಂದು ಬಾರಿ ಜೆಡಿಎಸ್‌ನಿಂದ ಉತ್ತರ ಕರ್ನಾಟಕ ಭಾಗದಲ್ಲಿ ಚುನಾವಣೆಗೆ ನಿಂತು ಸೋಲು ಕಂಡಿದ್ದರು ಎಂದರು.

ವೇದಿಕೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ವಿಶ್ವಮಾನವ ಮೈಸೂರು ವಿವಿ ನೌಕರರ ವೇದಿಕೆ ಅಧ್ಯಕ್ಷ ಆರ್. ವಾಸುದೇವ್, ಪುಣ್ಯಕೋಟಿ ಸೇವಾ ಟ್ರಸ್ಟ್ ಅಧ್ಯಕ್ಷ ಹನುಮಂತೇಶ್, ಮುಖಂಡರಾದ ಎಸ್.ಡಿ.ಶಿವಣ್ಣ, ಹಿನಕಲ್ ಮಲ್ಲೇಶ್ ಸೇರಿದಂತೆ ಇತರರಿದ್ದರು.

ರಾಮನಗರದಲ್ಲಿ 10 ಸಾವಿರ ಸೀರೆ ಜಪ್ತಿ

ರಾಮನಗರ, ಮಾ.19–ಲೋಕಸಭಾ ಚುನಾವಣೆ ವೇಳೆ ಮತದಾರರಿಗೆ ಹಂಚಲು ಗೋದಾಮಿನಲ್ಲಿ ಸಂಗ್ರಹಿಸಿದ್ದ ಹತ್ತು ಸಾವಿರ ಸೀರೆಗಳನ್ನು ರಾಮನಗರದಲ್ಲಿ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ರಾಮನಗರದ 1ನೇ ವಾರ್ಡ್ ವ್ಯಾಪ್ತಿಯ ದೇವೇಸೇಗೌಡನ ದೊಡ್ಡಿಯಲ್ಲಿರುವ ವಿಆರ್‌ಎಲ್ ಗೋದಾಮಿನಲ್ಲಿ ಸೀರೆಗಳನ್ನು ಸಂಗ್ರಹಿಸಲಾಗಿದೆ ಎಂಬ ಖಚಿತ ಮಾಹಿತಿ ಮೇರೆಗೆ ಇಂದು ರಾತ್ರಿ ಡಿವೈಎಸ್‌ಪಿ ದಿನಕರ್ ಶೆಟ್ಟಿ ನೇತೃತ್ವದ ಪೊಲೀಸರು ದಾಳಿ ನಡೆಸಿ ಸೀರೆಗಳನ್ನು ವಶಪಡಿಸಿ ಕೊಂಡು ಗೋದಾಮನ್ನು ಸೀಜ್ ಮಾಡಿದ್ದಾರೆ.

ಈ ಕಾರ್ಯಾಚರಣೆ ವೇಳೆ ಗೋದಾಮಿನ ಮುಂಭಾಗ ಜೆಡಿಎಸ್ ಕಾರ್ಯಕರ್ತರು ಜಮಾಯಿಸಿದ್ದರು. ರಾಮನಗರದಲ್ಲಿ ಮತದಾರರಿಗೆ ಸೀರೆ ಮತ್ತು ಕುಕ್ಕರ್‌ಗಳನ್ನು ಹಂಚಲಾಗುತ್ತಿದೆ ಎಂದು ಇಂದು ಬೆಳಗ್ಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆರೋಪಿಸಿದ್ದರು. ಇದರ ಬೆನ್ನಲ್ಲೇ 10 ಸಾವಿರ ಸೀರೆಗಳನ್ನು ವಶಪಡಿಸಿಕೊಳ್ಳಲಾಗಿದೆ.



ಮೈಸೂರಿನ ದೇವರಾಜ ಮೊಹಲ್ಲಾದಲ್ಲಿ ಪುನೀತ್ ರಾಜಕುಮಾರ್ ಅವರ 49ನೇ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ವೇಳೆ ಸಾರ್ವಜನಿಕರಿಗೆ ಚಿಕನ್ ಬಿರಿಯಾನಿ ವಿತರಿಸಲಾಯಿತು. ಶಾಸಕ ಕೆ. ಹರೀಶ್‌ಗೌಡರವರ ಸಹೋದರ ಗಿರೀಶ್‌ಗೌಡ, ಮಾದೇಗೌಡ, ರವಿ, ಗೋವಿಂದ್, ನವೀನ್, ಮಂಜುನಾಥ್, ಶಿವಕುಮಾರ್‌ಗೌಡ ಇನ್ನಿತರರಿದ್ದರು.

ಪೊಲೀಸ್ ಸಿಬ್ಬಂದಿ ಕಡ್ಡಾಯವಾಗಿ ಹೆಲ್ಮೆಟ್ ಧರಿಸಲು ಆದೇಶ



ಮೈಸೂರು, ಮಾ.19(ಎಸ್‌ಪಿಎನ್)– ರಾಜ್ಯದ ಪೊಲೀಸ್ ಇಲಾಖೆಯ ಎಲ್ಲಾ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ತಮ್ಮ ತಮ್ಮ ದ್ವಿಚಕ್ರ ವಾಹನಗಳಲ್ಲಿ ಸಂಚರಿಸುವಾಗ ಹೆಲ್ಮೆಟ್ ಧರಿಸುವುದನ್ನು ಕಡ್ಡಾಯಗೊಳಿಸಿ ಬೆಂಗಳೂರಿನ ಮಹಾನಿರ್ದೇಶಕ ಮತ್ತು ಆರಕ್ಷಕ ಮಹಾ ನಿರೀಕ್ಷಕರ ಪರವಾಗಿ ಎಡಿಜಿಪಿ (ಟಿ&ಆರ್‌ಎಸ್) ಅಲೋಕ್ ಕುಮಾರ್ ಮಂಗಳವಾರ ಸುತ್ತೋಲೆ ಹೊರಡಿಸಿದ್ದಾರೆ.

ಇತ್ತೀಚೆಗೆ ರಸ್ತೆ ಅಪಘಾತಗಳಲ್ಲಿ ಕೆಲ ಪೊಲೀಸ್ ಸಿಬ್ಬಂದಿ ಗಂಭೀರವಾಗಿ ಗಾಯಗೊಳ್ಳುವುದು ಮತ್ತು ಕೆಲವರು ಮೃತಪಟ್ಟಿರುವ ಘಟನೆಗಳು ಸಂಭವಿಸುತ್ತಿರುವುದು ವರದಿಯಾಗಿವೆ. ಆದ್ದರಿಂದ ಇನ್ನು ಮುಂದೆ ಇಂತಹ ಘಟನೆಗಳನ್ನು ತಪ್ಪಿಸಲು, ರಾಜ್ಯಾದ್ಯಂತ ಎಲ್ಲಾ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ತಮ್ಮ ತಮ್ಮ ದ್ವಿಚಕ್ರ ವಾಹನಗಳಲ್ಲಿ ಸಂಚರಿಸುವಾಗ ಮೋಟಾರು ವಾಹನ ಕಾಯ್ದೆಯ ಕಲಂ 129(ಎ) ಮತ್ತು (ಬಿ)ರಲ್ಲಿ ನಮೂದಿಸಿರುವಂತೆ ಕಡ್ಡಾಯವಾಗಿ ಸುರಕ್ಷಿತ ಹೆಲ್ಮೆಟ್ ಧರಿಸುವಂತೆ ಸೂಚಿಸಿದ್ದಾರೆ.



ಮೈಸೂರಿನ ಸುತ್ತೂರು ಮಠದ ಪೀಠಾಧ್ಯಕ್ಷರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಅವರನ್ನು ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಭೇಟಿ ಮಾಡಿ, ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಶಾಸಕರಾದ ರವಿಕುಮಾರ್ ಗಣಿಗ, ದಿನೇಶ್ ಗೂಳಿಗೌಡ ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಉಪಸ್ಥಿತರಿದ್ದರು.

ಅಕ್ರಮ ಸಂಬಂಧ ಶಂಕೆ: ವಿಜಯಪುರದ ನಿಡಗುಂದಿ ಗ್ರಾಮದಲ್ಲಿ ಜೋಡಿ ಕೊಲೆ

ವಿಜಯಪುರ, ಮಾ.19– ವಿಜಯಪುರ ಜಿಲ್ಲೆಯ ನಿಡಗುಂದಿ ತಾಲೂಕಿನ ಗಣಿ ಗ್ರಾಮದಲ್ಲಿ ಒಬ್ಬ ಪುರುಷ ಮತ್ತು ಒಬ್ಬ ಮಹಿಳೆಯನ್ನು ಕೊಲೆ ಮಾಡಲಾಗಿದೆ. ಅವರಿಬ್ಬರೂ ಬೇರೆ ಬೇರೆಯವರಾಗಿದ್ದು, ಜತೆಯಾಗಿದ್ದಾಗ ಕೊಲೆ ಮಾಡಲಾಗಿದೆ ಎನ್ನಲಾಗಿದೆ.

ಹಾಗಾಗಿ ಇದು ಅಕ್ರಮ ಸಂಬಂಧದ ಸಂಶಯದ ಹಿನ್ನೆಲೆಯಲ್ಲಿ ನಡೆದಿರುವ ಜೋಡಿ ಕೊಲೆ ಆಗಿರಬಹುದು ಎಂದು ಸಂಶಯಿಸಲಾಗಿದೆ. ಸೋಮವಾರ ರಾತ್ರಿ ನಿಡಗುಂದಿ ತಾಲೂಕಿನ ಮಾರಡಗಿ ತಾಂಡಾದ ಸಮೀಪ ನಡೆದಿದೆ. ಮೃತರು ಗಣಿ ಗ್ರಾಮದ ಸೋಮನಿಂಗಪ್ಪ ಕಲ್ಲಪ್ಪ ಕುಂಬಾರ (35) ಹಾಗೂ ಪಾರ್ವತಿ ತಳವಾರ (38) ಎಂದು ಗುರುತಿಸಲಾಗಿದೆ. ಗಣಿ ಗ್ರಾಮಕ್ಕೆ ಬರುವ ಮೊದಲೇ ಇಬ್ಬರನ್ನು ಭೀಕರವಾಗಿ ಕೊಚ್ಚಿ ಕೊಲೆ ಮಾಡಲಾಗಿದೆ. ಕೊಲೆ ಯಾರು ಮಾಡಿದರು? ಕೊಲೆಗೆ ನಿಖರ ಕಾರಣ ಏನು ಎಂಬುದು ತಿಳಿದುಬಂದಿಲ್ಲ

ಲಾರಿಯಿಂದ ಬೈಕ್ ಮೇಲೆ ಬಂಡೆ ಬಿದ್ದು ದಂತ ವೈದ್ಯಕೀಯ ವಿದ್ಯಾರ್ಥಿ ಸಾವು

ತಿರುವನಂತಪುರಂ, ಮಾ.19– ಲಾರಿಯಿಂದ ಬಂಡೆ ಬಿದ್ದು ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದ ಖಾಸಗಿ ದಂತ ವೈದ್ಯಕೀಯ ಕಾಲೇಜಿನ ಅಂತಿಮ ವರ್ಷದ ಬಿಡಿಎಸ್ ವಿದ್ಯಾರ್ಥಿಯೊಬ್ಬ ಮೃತಪಟ್ಟಿರುವ ಘಟನೆ ಮಂಗಳವಾರ ನಡೆದಿದೆ.

ಅಂತು ಬಿ.ಅಜಿಕುಮಾರ್ ಮೃತಪಟ್ಟ ದುರ್ದೈವಿ. ಇವರು ಕಾಲೇಜಿಗೆ ತೆರಳುತ್ತಿದ್ದಾಗ ನಗರದ ಹೊರವಲಯದಲ್ಲಿರುವ ಅವರ ಮನೆಯ ಬಳಿ ಲಾರಿಯಿಂದ ದೊಡ್ಡ ಬಂಡೆಯೊಂದು ಅವರ ದ್ವಿಚಕ್ರ ವಾಹನದ ಮೇಲೆ ಬಿದ್ದಿದೆ. ಅಜಿಕುಮಾರ್ ಹೆಲ್ಮೆಟ್ ಧರಿಸಿದ್ದರೂ ಬಂಡೆಯಿಂದ ಅವರನ್ನು ರಕ್ಷಿಸಲು ಸಾಧ್ಯವಾಗಲಿಲ್ಲ. ತಕ್ಷಣ ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಅಲ್ಲಿ ಅವರು ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದರು. ಘಟನೆಯಿಂದ ಆಕ್ರೋಶಗೊಂಡ ಸ್ಥಳೀಯರು ಬೀದಿಗಿಳಿದು ಪ್ರತಿಭಟನೆ ನಡೆಸಿದರು.

ಗಾಜಾದ ಅಲ್–ಶಿಫಾ ಆಸ್ಪತ್ರೆಯಲ್ಲಿ 20 ಭಯೋತ್ಪಾದಕರ ಹತ್ಯೆ: ಇಸ್ರೇಲ್

ಗಾಜಾ: ಗಾಜಾ ನಗರದ ಅಲ್–ಶಿಫಾ ಆಸ್ಪತ್ರೆಯ ಮೇಲೆ ದಾಳಿ ನಡೆಸಿದ್ದು 20ಕ್ಕೂ ಹೆಚ್ಚು ಪ್ಯಾಲೆಸ್ತೀನ್ ಭಯೋತ್ಪಾದಕರ ಹತ್ಯೆ ಮಾಡಿದ್ದು 12ಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆ ಎಂದು ಇಸ್ರೇಲ್‌ನ ಸೇನೆ ತಿಳಿಸಿದೆ. ಇದುವರೆಗೆ ಇಪ್ಪತ್ತು ಭಯೋತ್ಪಾದಕರನ್ನು ಅಲ್–ಶಿಫಾ ಆಸ್ಪತ್ರೆಯಲ್ಲಿ ವಿವಿಧ ಕಾರ್ಯಾಚರಣೆ ವೇಳೆ ಹತ್ಯೆ ಮಾಡಲಾಗಿದ್ದು ಡಜನ್ ಗಟ್ಟಲೆ ಶಂಕಿತರನ್ನು ವಶಕ್ಕೆ ಪಡೆಯಲಾಗಿದ್ದು ಪ್ರಸ್ತುತ ವಿಚಾರಣೆ ನಡೆಸುತ್ತಿದ್ದೇವೆ ಎಂದು ಸೇನೆಯು ಹೇಳಿಕೆಯಲ್ಲಿ ತಿಳಿಸಿದೆ. ಇಸ್ರೇಲ್ ಈ ಹಿಂದೆ ಹಮಾಸ್ ಆಂತರಿಕ ಭದ್ರತಾ ಅಧಿಕಾರಿ ಎಂದು ಗುರುತಿಸಲಾದ ಫೈಕ್ ಅಲ್–ಮಭೌಹ್‌ನನ್ನು ಹತ್ಯೆ ಮಾಡಿದ್ದಾಗಿ ವರದಿ ಮಾಡಿದೆ. ಗಾಜಾ ಪೊಲೀಸ್ ಮೂಲವೊಂದು ಆತನ ಸಾವನ್ನು ದೃಢಪಡಿಸಿದೆ. ಮಾಭೌಹ್ ಪಡೆಯಲ್ಲಿ ಬ್ರಿಗೇಡಿಯರ್ ಜನರಲ್ ಆಗಿದ್ದನು.

ಚೀಯಂಡಿ ಗಣಪತಿ ನಿಧನ



ನಾಪೋಕ್ಲು, ಮಾ.19–ಬಲ್ಲಮಾವಟ್ಟಿ ಗ್ರಾಮದ ನಿವಾಸಿ ಚೀಯಂಡಿ ಗಣಪತಿ (75) ಭಾನುವಾರ ನಿಧನರಾದರು.

ಮೃತರು ಪತ್ನಿ, ನಾಲ್ವರು ಪುತ್ರಿಯರು ಹಾಗೂ ಒಬ್ಬ ಪುತ್ರನನ್ನು ಅಗಲಿದ್ದಾರೆ. ಸೋಮವಾರ ಸ್ವಗ್ರಾಮ ಬಲ್ಲಮಾವಟ್ಟಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ಮೈಸೂರು ಮಿತ್ರ

ಬುಧವಾರ 20 ಮಾರ್ಚ್ 2024

ಸಂಸದನಾದರೆ ರಾಜಕೀಯ ವನವಾಸದಿಂದ ಮುಕ್ತಿ...!

ಚಾ.ನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಾಲರಾಜ್ ವಿಶ್ವಾಸ



ಮೈಸೂರು, ಮಾ.19(ಬಿಎಲ್‌ಯು)– ಸಂಸದನಾಗಿ ಆಯ್ಕೆಯಾಗುವ ಮೂಲಕ 28 ವರ್ಷಗಳ ರಾಜಕೀಯ ವನವಾಸದಿಂದ ಮುಕ್ತಿ ಪಡೆಯುತ್ತೇನೆ ಎಂದು ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಾಲರಾಜ್ ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದ ನಂತರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಕೆಲವು ಚುನಾವಣೆಯಲ್ಲಿ ಸ್ಪರ್ಧೆ ಮಾಡಿ ಸೋಲು ಕಂಡು ರಾಜಕೀಯವಾಗಿ ಬಹಳ ಕಷ್ಟ ಅನುಭವಿಸಿದ್ದೇನೆ ಎಂದರು.

ಕಳೆದ 31 ವರ್ಷಗಳ ರಾಜಕಾರಣದಲ್ಲಿ ಮೂರು ವರ್ಷ ಮಾತ್ರ ಶಾಸಕನಾಗಿದ್ದೆ. ಉಳಿದಂತೆ ಕೆಲವು ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದರೂ ಸೋಲು ಅನುಭವಿಸಿದ್ದೆ. ಹಾಗಾಗಿ 28 ವರ್ಷಗಳಿಂದ ರಾಜಕೀಯ ವನವಾಸದಲ್ಲಿದ್ದೇನೆ. ಆದರೆ ಈಗ ಬಿಜೆಪಿ ನನಗೆ ಟಿಕೆಟ್ ನೀಡಿದೆ. ಈ ಬಾರಿ ಸಂಸದನಾಗಿ ಆಯ್ಕೆ ಆಗುವ ಮೂಲಕ ವನವಾಸದಿಂದ ಮುಕ್ತಿ ಪಡೆಯುತ್ತೇನೆ ಎಂದರು.

ಅನಿವಾರ್ಯ ರಾಜಕೀಯ ಪರಿಸ್ಥಿತಿಯಲ್ಲಿ ಮೂರು ಪಕ್ಷಕ್ಕೆ ಹೋಗಿ ಬಂದಿದ್ದೇನೆ. ಆದರೆ ಎಲ್ಲೂ ವಿವಾದಕ್ಕೆ ಸಿಲುಕಿಲ್ಲ. ಇದರಿಂದ ಎಲ್ಲಾ ಪಕ್ಷದ ನಾಯಕರ ಜೊತೆ ನನಗೆ ಸಂಪರ್ಕವಿದ್ದು, ಅವರೆಲ್ಲಾ ನನ್ನ ಬೆಂಬಲಿಸುವರೆಂಬ ವಿಶ್ವಾಸವಿದೆ ಎಂದು ತಿಳಿಸಿದರು.

ದಿವಂಗತ ಮಾಜಿ ಸಂಸದ ಧ್ರುವ ನಾರಾಯಣ್ ನನ್ನ ಸ್ನೇಹಿತರಾಗಿದ್ದವರು. ನಾನು ಹಾಗೂ ಅವರು ರಾಜಕೀಯವಾಗಿ ಜೊತೆಯಾಗಿದ್ದೆವು. ಈಗ ಅವರ ಬಹಳಷ್ಟು ಬೆಂಬಲಿಗರು ನನ್ನನ್ನೇ ಬೆಂಬಲಿಸುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಜಕೀಯ ನಿವೃತ್ತಿ ಘೋಷಿಸಿರುವ ಹಾಲಿ ಸಂಸದ ಶ್ರೀನಿವಾಸಪ್ರಸಾದ್ ಪ್ರಚಾರಕ್ಕೆ ಬರುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಬಿಜೆಪಿಯನ್ನು ಬೆಂಬಲಿಸುವುದಾಗಿ ತಿಳಿಸಿದ್ದಾರೆ. ಪ್ರಸಾದ್ ಅವರನ್ನು ಪ್ರಚಾರಕ್ಕೆ ಕರೆ ತರುವ ನಿಟ್ಟಿನಲ್ಲಿ ಬಿಜೆಪಿ ವರಿಷ್ಠರು ಮಾತುಕತೆ ನಡೆಸುತ್ತಿದ್ದಾರೆ ಎಂದರು.

ಎಂ.ತೇಜಸ್ವಿನಿಗೆ ಪಿಎಚ್.ಡಿ



ಮೈಸೂರು: ಡಾ.ರಮಿತ್ ರಾಮು ಅವರ ಮಾರ್ಗದರ್ಶನದಲ್ಲಿ ಎಂ.ತೇಜಸ್ವಿನಿ ಸಂಶೋಧಿಸಿ ಸಾದರಪಡಿಸಿದ ಇಂಟಿಗ್ರೇಟೆಡ್ ಬಯೋಕಂಪ್ಯೂಟೇಶನಲ್ ಅಪ್ರೋಚ್ ಟು ಎಕ್ಸ್‌ಪ್ಲೋಇಟ್ ಆಂಟಿಯಡಾಬಿಟಿಕ್ ಪೊಟೆನ್ಷಿಯಲ್ ಆಫ್ ಫೈಟೊಕಾಂಪೌಂಡ್ಸ್ ಫ್ರಂ ಹೋಲ್ ಗ್ರೀನ್ ಜಾಕ್ ಫ್ರೂಟ್ ಮಹಾಪ್ರಬಂಧವನ್ನು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಯಾರು ರಾಜ ಎಂಬ ಸಿಎಂ ಸಿದ್ದರಾಮಯ್ಯ ಹೇಳಿಕೆಗೆ ಯದುವೀರ್ ಜಾಣ್ಮೆಯ ಪ್ರತಿಕ್ರಿಯೆ



ಮೈಸೂರಿನ ಚಾಮುಂಡಿಬೆಟ್ಟದ ಬಳಿಯ ಸುತ್ತೂರು ಶಾಖಾ ಮಠದಲ್ಲಿ ಮಂಗಳವಾರ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಭೇಟಿ ಮಾಡಿ, ಆಶೀರ್ವಾದ ಪಡೆದರು.

ಮೈಸೂರು, ಮಾ.19(ಬಿಎಲ್‌ಯು)– ಯಾರು ರಾಜ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ಮೈಸೂರು ರಾಜ ವಂಶಸ್ಥರೂ ಆದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಜಾಣ್ಮೆಯ ಪ್ರತಿಕ್ರಿಯೆ ನೀಡಿದ್ದಾರೆ.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠಕ್ಕೆ ಇಂದು ಭೇಟಿ ನೀಡಿದ ವೇಳೆ ಪತ್ರಕರ್ತರೊಡನೆ ಮಾತನಾಡಿದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನಾತ್ಮಕವಾಗಿ ಯಾವುದೇ ರಾಜ, ರಾಣಿ ಪದವಿಗೆ ವಿಶೇಷ ಮಹತ್ವವಿಲ್ಲ ಎಂದು ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ ಎಂದರು.

ಇದು ಪ್ರಜಾಪ್ರಭುತ್ವ ವ್ಯವಸ್ಥೆ. ಇಲ್ಲಿ ನಾನು ಸೇರಿದಂತೆ ಎಲ್ಲರೂ ಸಮಾನರು. ಇಲ್ಲಿ ರಾಜ, ರಾಣಿ ಪದವಿಗೆ ವಿಶೇಷ ಮಹತ್ವವಿಲ್ಲ. ನಾನು ಸೇರಿದಂತೆ ಎಲ್ಲರೂ ಪ್ರಜೆಗಳೇ ಆಗಿದ್ದೇವೆ. ಇಷ್ಟು ಮಾತ್ರ ಹೇಳಬಲ್ಲೆ ಎಂದರು.

ಈ ಮೂಲಕ ಯಾರು ರಾಜ ಎಂಬ ಸಿದ್ದರಾಮಯ್ಯ ಅವರ ಲೇವಡಿಯ ಮಾತುಗಳಿಗೆ ಯದುವೀರ್ ಜಾಣ್ಮೆಯ ಉತ್ತರ ನೀಡಿದ್ದಾರೆ. ಸುತ್ತೂರು ಸ್ವಾಮೀಜಿ ಭೇಟಿ ಮಾಡಿ ಆಶೀರ್ವಾದ ಪಡೆದಿದ್ದೇನೆ. ಬೇರೆ ಯಾವ ವಿಚಾರಗಳ ಬಗ್ಗೆ ಸ್ವಾಮೀಜಿ ಜೊತೆ ಚರ್ಚೆಯಾಗಿಲ್ಲ ಎಂದು ಸ್ಪಷ್ಟಪಡಿಸಿದರು.

ನಾಮಪತ್ರ ಸಲ್ಲಿಸುವ ದಿನಾಂಕ ಇನ್ನು ನಿಗದಿಯಾಗಿಲ್ಲ. ಇನ್ನು ಎರಡು ಮೂರು ದಿನದಲ್ಲಿ ಈ ಬಗ್ಗೆ ತೀರ್ಮಾನ ಮಾಡಲಾಗುವುದು. ಪ್ರಧಾನಿ ನರೇಂದ್ರ ಮೋದಿ ಪ್ರಚಾರಕ್ಕೆ ಬರುವ ಕುರಿತಂತೆ ಈ ತನಕ ನನಗೆ ಯಾವುದೇ ಮಾಹಿತಿ ಇಲ್ಲ ಎಂದರು.

ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎನ್.ಮಹೇಶ್, ಚಾಮರಾಜನಗರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಬಾಲರಾಜು, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವ ಸ್ವಾಮಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸುತ್ತೂರು ಶ್ರೀಗಳ ಆಶೀರ್ವಾದ ಪಡೆದ ಯದುವೀರ್

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಇಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಭೇಟಿ ಮಾಡಿ, ಆಶೀರ್ವಾದ ಪಡೆದರು. ಮೈಸೂರಿನ ಚಾಮುಂಡಿಬೆಟ್ಟ ಪಾದದ ಸುತ್ತೂರು ಶಾಖಾ ಮಠಕ್ಕೆ ಆಗಮಿಸಿದ ಯದುವೀರ್ ಅವರಿಗೆ ಮಠದ ಕಿರಿಯ ಶ್ರೀಗಳು ಮಂಗಳವಾದ್ಯದೊಂದಿಗೆ ಸ್ವಾಗತ ಕೋರಿದರು.

ತರುವಾಯ ಯದುವೀರ್, ಸ್ವಾಮೀಜಿ ಭೇಟಿ ಮಾಡಿ ಆಶೀರ್ವಾದ ಪಡೆದರು. ನಂತರ ಯದುವೀರ್ ಮಠದಲ್ಲೇ ಉಪಾಹಾರ ಸ್ವೀಕರಿಸಿದರು. ತರುವಾಯ ಯದುವೀರ್ ಹಾಗೂ ಸ್ವಾಮೀಜಿ ಸುಮಾರು ಅರ್ಧ ಗಂಟೆಗಳ ರಹಸ್ಯ ಮಾತುಕತೆ ನಡೆಸಿದರು. ಈ ಮಾತುಕತೆ ವೇಳೆ ಯಾರಿಗೂ ಪ್ರವೇಶವಿರಲಿಲ್ಲ.

ವಿವಾದಕ್ಕೆ ಸಿಲುಕದೆ ವಿವೇಕಯುಕ್ತ ಉತ್ತರ!

ಈ ತನಕ ಅರಮನೆಯಲ್ಲಿ ಇದ್ದು ಕೆಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸೀಮಿತ ಜನರ ಜೊತೆ ಮಾತ್ರ ಸಂಪರ್ಕ ಹೊಂದಿದ್ದ ಯದುವೀರ್‌ಗೆ ರಾಜಕೀಯ ಪಾದಾರ್ಪಣೆಯಿಂದ ಬಹಳಷ್ಟು ಸವಾಲುಗಳು ಎದುರಾಗಿವೆ.

ಅರಮನೆಯಲ್ಲಿದ್ದ ಯದುವೀರ್ ಈಗ ಹೊರಗೆ ಬರುವರೇ, ಜನರ ಕಷ್ಟಗಳಿಗೆ ಸ್ಪಂದಿಸುವರೇ ಎಂಬ ಅನುಮಾನದ ಪ್ರಶ್ನೆಗಳು ಕೇಳಿ ಬಂದಿವೆ. ಸಂಸದರಾಗಿ ಗೆದ್ದು ಬಂದರೆ ವೈಟ್ ಕಾಲರ್ ಪೊಲಿಟಿಷಿಯನ್ ಆಗುತ್ತಾರೆ ಎಂದು ಕೆಲವರು ವಾದ ಮಾಡುತ್ತಿದ್ದಾರೆ. ಕಳೆದ ಒಂದು ವಾರದ ಸಂದರ್ಭದಲ್ಲಿ ಯದುವೀರ್ ಸಂಪರ್ಕಕ್ಕೆ ಸಿಕ್ಕಾಗ ಪತ್ರಕರ್ತರು ಜನರಲ್ಲಿ ಮನೆ ಮಾಡಿರುವ ಇಂತಹ ಬಹಳಷ್ಟು ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಆದರೆ ಯದುವೀರ್ ಮಾತ್ರ ಯಾವುದೇ ವಿವಾದಾತ್ಮಕ ಹೇಳಿಕೆಗಳನ್ನು ನೀಡದೆ ವಿವೇಕಯುಕ್ತರಾಗಿ ಜಾಣ್ಮೆಯ ಉತ್ತರ ನೀಡುತ್ತಿದ್ದಾರೆ.

ಕೆಲವೊಂದು ಪ್ರಶ್ನೆಗಳು ಪ್ರಚೋದಿಸುವಂತಿದ್ದರೂ ಯದುವೀರ್ ಮಾತ್ರ ತಾಳ್ಮೆ ಕಳೆದುಕೊಳ್ಳದೆ ಸಂಯಮದಿಂದಲೇ ಉತ್ತರ ನೀಡುತ್ತಿದ್ದಾರೆ.

ನಿಮ್ಮೊಂದಿಗೆ ನಾವಿದ್ದೇವೆ...

ಎನ್‌ಆರ್ ಮೊಹಲ್ಲಾದಲ್ಲಿ ಪೊಲೀಸರ ರೂಟ್ ಮಾರ್ಚ್



ಮೈಸೂರಿನ ಎನ್‌ಆರ್ ಮೊಹಲ್ಲಾದ ಪ್ರಮುಖ ರಸ್ತೆಗಳಲ್ಲಿ ಮಂಗಳವಾರ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಹಾಗೂ ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ನೇತೃತ್ವದಲ್ಲಿ ಪೊಲೀಸರು ಪಥಸಂಚಲನ ನಡೆಸಿದರು.

ಮೈಸೂರು, ಮಾ. 19(ಆರ್‌ಕೆ)– ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರಿನ ಎನ್‌ಆರ್ ಮೊಹಲ್ಲಾ ಪ್ರಮುಖ ರಸ್ತೆಗಳಲ್ಲಿ ಪಥಸಂಚಲನ ಮಾಡುವ ಮೂಲಕ ಇಂದು ಪೊಲೀಸರು ಮತದಾರರಿಗೆ ಅಭಯದ ಸಂದೇಶ ರವಾನಿಸಿದರು. ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ನೇತೃತ್ವದಲ್ಲಿ ಎಫ್‌ಟಿಎಸ್ ಸರ್ಕಲ್‌ನಿಂದ ಆರಂಭವಾದ ರೂಟ್ ಮಾರ್ಚ್, ಶಿವಾಜಿ ರಸ್ತೆ, ಮಾರುತಿ ಸರ್ಕಲ್, ಆದಿಜಾಂಬವ ರಸ್ತೆ ಸೇರಿದಂತೆ ಎನ್‌ಆರ್ ಮೊಹಲ್ಲಾ, ಕರುಣಾಪುರ, ಗಾಂಧಿನಗರದ ಪ್ರಮುಖ ರಸ್ತೆಗಳಲ್ಲಿ ಪಥಸಂಚಲನ ನಡೆಸಿದರು.

ನಾವು ನಿಮ್ಮೊಂದಿಗಿದ್ದೇವೆ. ಭಯ ಪಡದೆ, ಯಾವ ಒತ್ತಡಕ್ಕೂ ಮಣಿಯದೇ ನಿರ್ಭೀತಿಯಿಂದ ಬಂದು ಮತ ಚಲಾಯಿಸಿ ಎಂಬ ಸಂದೇಶ ನೀಡುವ ಮೂಲಕ ಪೊಲೀಸರು ಮತದಾರರಿಗೆ ಅಭಯ ನೀಡಿದರು. ಮಾರ್ಗದುದ್ದಕ್ಕೂ ಧ್ವನಿವರ್ಧಕದ ಮೂಲಕ ಅರಿವು ಮೂಡಿಸಲಾಯಿತು. ಎನ್‌ಆರ್ ಉಪವಿಭಾಗದ ಠಾಣೆಗಳ ಸಿವಿಲ್ ಪೊಲೀಸ್, ಸಂಚಾರ ಪೊಲೀಸ್, ಪ್ಯಾರಾಮಿಲಿಟರಿ ಪಡೆ, ಕಮಾಂಡೋ ಪಡೆ ಸಿಬ್ಬಂದಿ ರೂಟ್ ಮಾರ್ಚ್‌ನಲ್ಲಿ ಪಾಲ್ಗೊಂಡಿದ್ದರು. ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್. ಜಾಹ್ನವಿ, ಎನ್‌ಆರ್ ಎಸಿಪಿ ಸುಧಾಕರ್ ಹಾಗೂ ಸಂಚಾರ ಎಸಿಪಿ ಪರಶುರಾಮಪ್ಪ ಸಹ ಈ ಸಂದರ್ಭ ಭಾಗವಹಿಸಿದ್ದರು.



ಮೈಸೂರು ತಾಲೂಕಿನ ಜಯಪುರ ಹೋಬಳಿಯ ಹಾರೋಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನಲಿ–ಕಲಿ ಮಕ್ಕಳಿಗೆ 45 ಸಾವಿರ ಮೌಲ್ಯದ 6 ಚಟುವಟಿಕೆಯ ವೃತ್ತಾಕಾರದ ಟೇಬಲ್‌ಗಳು, 36 ಕುರ್ಚಿಗಳನ್ನು ಕೊಡುಗೆಯಾಗಿ ನೀಡಿದ ಸಮಾಜ ಸೇವಕ, ಉದ್ಯಮಿ ಎಸ್.ಶ್ರೀಕಾಂತ್ ಅವರನ್ನು ಶಾಲಾಭಿವೃದ್ಧಿ ಸಮಿತಿ ವತಿಯಿಂದ ಅಭಿನಂದಿಸಲಾಯಿತು. ಮುಖ್ಯಶಿಕ್ಷಕ ಗಿರೀಶ್, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಎಂ.ಮಹದೇವಸ್ವಾಮಿ, ಸದಸ್ಯರಾದ ಸುಂದರೇಶ್, ಗಿರೀಶ್, ಮುಖಂಡರಾದ ಮಹದೇವಸ್ವಾಮಿ, ಸಿದ್ದರಾಜು, ರಾಜಮುಡಿ, ಮಲ್ಲೇಶ್, ಸಹಶಿಕ್ಷಕರಾದ ಕವಿತಾ, ಜ್ಯೋತಿ, ಬಲ್ಕಿಸ್, ಶ್ರೀಲತಾ, ಪುಷ್ಪಲತಾ ಉಪಸ್ಥಿತರಿದ್ದರು.



ಮೈಸೂರಿನ ಮೇದರ ಬಡಾವಣೆಯಲ್ಲಿ ನಡೆದ ಚಾಮುಂಡಮ್ಮನವರ ಮೆರವಣಿಗೆ ಸಂಕ್ರಾಂತಿ ಕೊಳದಿಂದ ಪ್ರಾರಂಭವಾಗಿ ವಿವಿಧ ರಸ್ತೆಯಲ್ಲಿ ಸಾಗಿ ಮೇದರಕೇರಿ ತಲುಪಿತು. ಮೆರವಣಿಗೆಯಲ್ಲಿ ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮುಖಂಡರಾದ ಆಶ್ರಯ ಮೂರ್ತಿ, ಚಂದ್ರುಸ್ವಾಮಿ, ಕಂಚಿ, ಗೋವಿಂದ, ದೇವರಾಜು, ರಾಕೇಶ್, ರೂಪೇಶ್, ಫಾರೂಖ್ ಇತರರು ಉಪಸ್ಥಿತರಿದ್ದರು.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ನೂತನ ಪದಾಧಿಕಾರಿಗಳ ಪರಿಚಯ ಮತ್ತು ಸಂಘಟನಾತ್ಮಕ ಸಭೆ ಬಿಜೆಪಿ ಕಚೇರಿಯಲ್ಲಿ ನಡೆಯಿತು. ಕ್ಷೇತ್ರದ ಅಧ್ಯಕ್ಷ ಪೈ.ಟಿ.ರವಿ, ಕ್ಷೇತ್ರದ ಪ್ರಭಾರಿ ಎನ್.ಆರ್.ರಮೇಶ್, ನಿಕಟಪೂರ್ವ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ಮಾಜಿ ಅಧ್ಯಕ್ಷ ಎನ್.ಅರುಣ್‌ಕುಮಾರ್‌ಗೌಡ, ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಹಿರಿಯರಾದ ಎಸ್.ಅರ್.ಗೋಪಾಲ್ ರಾವ್, ರಾಜ್‌ಕುಮಾರ್, ಉಪಾಧ್ಯಕ್ಷರಾದ ವೇದರಾಜು, ಕಾರ್ಯದರ್ಶಿಗಳಾದ ನಾರಾಯಣ, ಮೋನಿಕಾ, ಪ್ರಧಾನ ಕಾರ್ಯದರ್ಶಿ ಹೇಮಂತ್‌ಕುಮಾರ್, ಶಿವಕುಮಾರ್, ಜಿಲ್ಲಾ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಈರಪ್ಪ, ಉಪಾಧ್ಯಕ್ಷರಾದ ಹಿನಕಲ್ ಗಣೇಶ್, ಮರಿಸ್ವಾಮಿನಾಯಕ, ಪ್ರಮೀಳಾನಾಯಕ್, ಮಹಿಳಾ ಮೋರ್ಚಾ ಅಧ್ಯಕ್ಷರಾದ ಸವಿತಾ, ಯುವ ಮೋರ್ಚಾ ಅಧ್ಯಕ್ಷ ಮೋಹನ್, ವಿಸ್ತಾರಕ ರವಿ ಇನ್ನೂ ಮುಂತಾದ ಮುಖಂಡರು ಹಾಗೂ ನೂತನ ಪದಾಧಿಕಾರಿಗಳು ಭಾಗವಹಿಸಿದ್ದರು.

ಜ್ಞಾನವಾಪಿ ಮಸೀದಿ ನೆಲಮಾಳಿಗೆ ಪ್ರಕರಣ: ಏ.11ಕ್ಕೆ ವಿಚಾರಣೆ

ವಾರಣಾಸಿ, ಮಾ.19– ವಿವಾದಿತ ಜ್ಞಾನವಾಪಿ ಮಸೀದಿಯ ನೆಲಮಾಳಿಗೆ ಪ್ರಕರಣದ ವಿಚಾರಣೆಯನ್ನು ಏಪ್ರಿಲ್ 11ರಂದು ನಡೆಸುವುದಾಗಿ ವಾರಣಾಸಿ ಕೋರ್ಟ್ ಮಂಗಳವಾರ ಹೇಳಿದೆ.

ವಾರಣಾಸಿ ಜಿಲ್ಲಾ ನ್ಯಾಯಾಲಯವು ಇತ್ತೀಚೆಗೆ ಹಿಂದೂ ಪ್ರಾರ್ಥನೆಗೆ ಅನುಮತಿ ನೀಡಿದ ಜ್ಞಾನವಾಪಿ ಮಸೀದಿಯ ದಕ್ಷಿಣ ನೆಲಮಾಳಿಗೆಯ ಮೇಲೆ ಮುಸ್ಲಿಂ ಭಕ್ತರು ನಡೆಯುವುದನ್ನು ತಡೆಯುವಂತೆ ಕೋರಿ ಸಲ್ಲಿಸಲಾದ ಅರ್ಜಿಯ ವಿಚಾರಣೆಯನ್ನು ಏ.11ರಂದು ನಿಗದಿಪಡಿಸಿದೆ.

ಹಿಂದೂ ಪರ ವಕೀಲ ಮದನ್ ಮೋಹನ್ ಯಾದವ್ ಈ ಬಗ್ಗೆ ಮಾಹಿತಿ ನೀಡಿದ್ದು, ಮುಸ್ಲಿಂ ಕಡೆಯವರು ರಂಜಾನ್ ತಿಂಗಳಾಗಿರುವುದರಿಂದ ಉಪವಾಸ ಮಾಡುತ್ತಿದ್ದೇವೆ ಎಂದು ಮಂಗಳವಾರ ಜಿಲ್ಲಾ ಉಸ್ತುವಾರಿ ನ್ಯಾಯಾಧೀಶ ಅನಿಲ್‌ಕುಮಾರ್ ಅವರ ನ್ಯಾಯಾಲಯಕ್ಕೆ ತಿಳಿಸಿದರು. ಹೀಗಾಗಿ ಅವರ ಪರ ವಾದ ಮಂಡಿಸಲು ಕಾಲಾವಕಾಶ ನೀಡಬೇಕು ಎಂದರು. ಈ ಕುರಿತು ನ್ಯಾಯಾಲಯವು ಏ.11ರಂದು ವಿಚಾರಣೆಯ ದಿನಾಂಕವನ್ನು ನಿಗದಿಪಡಿಸಿದೆ ಎಂದು ಹೇಳಿದರು. ಸೆಲ್ಲರ್‌ನ ಮೇಲ್ಛಾವಣಿ ತುಂಬಾ ಹಳೆಯದು ಮತ್ತು ದುರ್ಬಲವಾಗಿದೆ ಎಂದು ಹಿಂದೂ ಕಡೆಯವರು ಸಲ್ಲಿಸಿರುವ ಮನವಿಯಲ್ಲಿ ತಿಳಿಸಲಾಗಿದೆ. 'ವ್ಯಾಸ್ ತೆಹ್ಖಾನಾ' ಎಂದೂ ಕರೆಯಲ್ಪಡುವ ಈ ನೆಲ ಮಾಳಿಗೆಯ ಕಂಬಗಳಿಗೆ ದುರಸ್ತಿ ಅಗತ್ಯವಿದೆ ಎಂದು ಹೇಳಿದೆ.

ಜಿಲ್ಲಾ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಮಸೀದಿ ಸಮಿತಿಯ ಮನವಿಯನ್ನು ವಜಾಗೊಳಿಸುವಾಗ, ಜ್ಞಾನವಾಪಿ ಮಸೀದಿಯ 'ವ್ಯಾಸ್ ತೆಹ್ಖಾನಾ'ದಲ್ಲಿ ಹಿಂದೂ ಪ್ರಾರ್ಥನೆಗಳು ಮುಂದುವರಿಯುತ್ತವೆ ಎಂದು ಅಲಹಾಬಾದ್ ಹೈಕೋರ್ಟ್ ಹೇಳಿದ, ಕೆಲವು ದಿನಗಳ ನಂತರ ಹೊಸ ಅರ್ಜಿಯನ್ನು ಸಲ್ಲಿಸಲಾಗಿದೆ.

ಇತ್ತೀಚೆಗೆ ವೃತ್ತಿ ರಂಗಭೂಮಿ ನಾಟಕಗಳು ತೆರೆಮರೆಗೆ ಸರಿಯುತ್ತಿವೆ

ಹಿರಿಯ ರಂಗಕರ್ಮಿ ಕೆ.ಜೆ.ನಾರಾಯಣ ವಿಷಾದ



ವಿವಿಧ ನಾಟಕಕಾರರು ರಚಿಸಿರುವ ಮರುಮುದ್ರಣದ ಆರು ನಾಟಕ ಪುಸ್ತಕಗಳನ್ನು ಜಾನಪದ ತಜ್ಞ ಡಾ.ಕ್ಯಾತನಹಳ್ಳಿ ರಾಮಣ್ಣ ಹಾಗೂ ಹಿರಿಯ ರಂಗಕರ್ಮಿ ಕೆ.ಜೆ.ನಾರಾಯಣ ಸೇರಿದಂತೆ ಇತರರ ನೇತೃತ್ವದಲ್ಲಿ ಬಿಡುಗಡೆಗೊಳಿಸಲಾಯಿತು.

ಮೈಸೂರು, ಮಾ.19(ಎಸ್‌ಪಿಎನ್)– ಇತ್ತೀಚಿನ ದಿನಗಳಲ್ಲಿ ವೃತ್ತಿ ರಂಗಭೂಮಿ ನಾಟಕಗಳು ತೆರೆಮರೆಗೆ ಸರಿಯುತ್ತಿವೆ ಎಂದು ಹಿರಿಯ ರಂಗಕರ್ಮಿ ಕೆ.ಜೆ.ನಾರಾಯಣ ವಿಷಾದ ವ್ಯಕ್ತಪಡಿಸಿದರು.

ಮೈಸೂರು ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ರಂಗರತ್ನಾಕರ ಸಂಸ್ಥೆ ವತಿಯಿಂದ ವಿವಿಧ ನಾಟಕಕಾರರು ರಚಿಸಿರುವ ಮರುಮುದ್ರಣದ ಆರು ನಾಟಕ ಪುಸ್ತಕಗಳ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ನಾಟಕಕಾರ ಬೆಳ್ಳಾವೆ ನರಹರಿಶಾಸ್ತ್ರಿ ರಚಿತ 'ಶ್ರೀ ಕೃಷ್ಣಲೀಲಾ', 'ಶ್ರೀ ಕೃಷ್ಣಪಾರಿಜಾತ', 'ಶ್ರೀ ಕೃಷ್ಣ ವಿಜಯ' ಮರು ಮುದ್ರಣ ಪುಸ್ತಕಗಳು ಅಮೂಲ್ಯವಾದುದು. ಪ್ರಸ್ತುತ ಈ ಪುಸ್ತಕಗಳ ಪ್ರಕಟಣೆಗಳೇ ಇಲ್ಲವಾಗಿದೆ. ಇದನ್ನು ಮರುಸಂಗ್ರಹ ಮಾಡಿರುವ ಹಿರಿಯ ರಂಗಕರ್ಮಿ ಎಚ್.ಎನ್. ಗೋವಿಂದಗೌಡರ ಪ್ರಯತ್ನ ನಿಜಕ್ಕೂ ಶ್ಲಾಘನೀಯ ಎಂದರು. ಲೇಖಕ ಬೆಳ್ಳಾವೆ ನರಹರಿಶಾಸ್ತ್ರಿ ಅವರು, ಮೊದಲು ಕಂಪನಿ ನಾಟಕಗಳಿಗೆ ನಾಟಕ ರಚಿಸುತ್ತಿದ್ದರು. ಅವರು ರಚಿಸುತ್ತಿದ್ದ ನಾಟಕಗಳು ಪೌರಾಣಿಕ ಹಿನ್ನೆಲೆಯಾಗಿದ್ದು, ಇಂತಹ ಪುಸ್ತಕಗಳು ಎಲ್ಲಿಯೂ ಸಿಗುವುದಿಲ್ಲ. ಈ ಪುಸ್ತಕಗಳ ಸಂರಕ್ಷಣೆ ಆಗಬೇಕು ಎಂದು ಒತ್ತಾಯಿಸಿದರು. ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಪ್ರದೇಶದಲ್ಲೂ ವೃತ್ತಿ ರಂಗಭೂಮಿ ನಾಟಕಗಳ ಪ್ರದರ್ಶನ ಕಡಿಮೆಯಾಗುತ್ತಿವೆ. ನಮ್ಮ ಹಿರಿಯರು ತಮ್ಮ ಗ್ರಾಮದಲ್ಲಿ ಪೌರಾಣಿಕ ನಾಟಕಗಳನ್ನು ಪ್ರದರ್ಶನಗೊಳ್ಳುವಾಗ ಅಕ್ಕ–ಪಕ್ಕದ ಊರಿನ ನೆಂಟರಿಷ್ಟರನ್ನು ಕರೆಸಿ ಹಬ್ಬದ ರೀತಿಯಲ್ಲಿ ನಾಟಕಗಳನ್ನು ಪ್ರದರ್ಶನ ಮಾಡುತ್ತಿದ್ದ ಕಾಲವಿತ್ತು. ಈಗ ಬದಲಾದ ಕಾಲಮಾನಕ್ಕೆ ವೃತ್ತಿ ರಂಗಭೂಮಿ ನಾಟಕಗಳ ಪ್ರದರ್ಶನವೇ ಇಲ್ಲವಾಗುತ್ತಿರುವುದು ಬೇಸರ ಸಂಗತಿ ಎಂದರು.

ಬೆಳ್ಳಾವೆ ನರಹರಿಶಾಸ್ತ್ರಿಗಳು ಸುಮಾರು 25ಕ್ಕೂ ಹೆಚ್ಚು ನಾಟಕಗಳನ್ನು ರಚಿಸಿ, ಪ್ರದರ್ಶಿಸಿದ್ದಾರೆ. ಆ ಎಲ್ಲಾ ಪುಸ್ತಕಗಳು 10 ಕ್ಕೂ ಮುದ್ರಣ ಕಂಡಿವೆ. ಇಂತಹ ಅಪರೂಪ ಪುಸ್ತಕಗಳನ್ನು ರಕ್ಷಿಸುವುದೇ ಸವಾಲಿನ ವಿಷಯವಾಗಿದೆ ಎಂದರು.

ಜಾನಪದ ತಜ್ಞ ಡಾ.ಕ್ಯಾತನಹಳ್ಳಿ ರಾಮಣ್ಣ ಮಾತನಾಡಿ, ಲೇಖಕ ರಾಜಾನಂದ ರಚಿತ 'ಮಲೆಯಾಮಾದೇಶ್ವರ ಮಹಾತ್ಮೆ' ಮತ್ತು ಇತರೆ ನಾಲ್ಕು ನಾಟಕಗಳ ಹಾಗೂ ಹಿರಿಯ ಲೇಖಕ ಎಂ.ಎಸ್.ವೆಂಕಟರಾಮ್ ಕುಪ್ಪ ರಚಿತ 'ಭಗೀರಥ ಚರಿತ್ರೆ', ಅಮೂಲ್ಯ ಪುಸ್ತಕಗಳಾಗಿವೆ. 'ಭಗೀರಥ ಚರಿತ್ರೆ' ಪುಸ್ತಕ ರಚಿಸಿರುವ ಹಿರಿಯ ಲೇಖಕ ಎಂ.ಎಸ್. ವೆಂಕಟರಾಮ್ ಕುಪ್ಪ ಅವರಿಗೆ 96 ವರ್ಷ ಪೂರೈಸಿದ್ದಾರೆ. ಅವರು ಇಳಿವಯಸ್ಸಿನಲ್ಲೂ ಪೌರಾಣಿಕ ನಾಟಕಗಳ ಕುರಿತು ಆಸಕ್ತಿ ಹೊಂದಿರುವುದು ಸಂತೋಷದಾಯಕ. ಅಲ್ಲದೆ, ಪೋಷಕ ನಟರಾಗಿದ್ದ ರಾಜಾರಾಮ್ ರಚಿತ ಮಲೆಯಾ ಮಾದೇಶ್ವರ ಮಹಾತ್ಮೆ, ಇತರೆ ನಾಲ್ಕು ನಾಟಕಗಳನ್ನು ಓದುಗರನ್ನು ಸೆಳೆಯುತ್ತಿವೆ ಈ ಪುಸ್ತಕದ ಲೇಖಕರಿಗೆ ಜೀವಿತಾವಧಿಯಲ್ಲಿ ಸರ್ಕಾರದ ಮಟ್ಟದಲ್ಲಿ ಸೂಕ್ತಸ್ಥಾನ ನೀಡಬೇಕಿತ್ತು ಎಂದು ಅಭಿಪ್ರಾಯಪಟ್ಟರು.

ಈ ವೇಳೆ ಲೇಖಕ ರಾಜಾನಂದ ರಚಿತ 'ಮಲೆಯಾಮಾದೇಶ್ವರ ಮಹಾತ್ಮೆ' ಹಾಗೂ ಇತರೆ ನಾಲ್ಕು ನಾಟಕಗಳು, ಹಿರಿಯ ಲೇಖಕ ಎಂ.ಎಸ್.ವೆಂಕಟರಾಮ್ ಕುಪ್ಪ ರಚಿತ 'ಭಗೀರಥ ಚರಿತ್ರೆ', ನಾಟಕಕಾರ ಬೆಳ್ಳಾವೆ ನರಹರಿಶಾಸ್ತ್ರಿ ರಚಿತ 'ಶ್ರೀ ಕೃಷ್ಣಲೀಲಾ', 'ಶ್ರೀ ಕೃಷ್ಣಪಾರಿಜಾತ', 'ಶ್ರೀ ಕೃಷ್ಣ ವಿಜಯ' ಮರುಮುದ್ರಣ ಪುಸ್ತಕಗಳು ಭಾನುವಾರ ಬಿಡುಗಡೆಗೊಂಡವು.

ಈ ವೇಳೆ ರಾಮಕೃಷ್ಣನಗರದ ಕನ್ನಡ ವಿಕಾಸ, ಶೈಕ್ಷಣಿಕ, ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆಯ ಕಾರ್ಯದರ್ಶಿ ಪ್ರೊ.ಎಚ್.ಜಿ. ಕೃಷ್ಣಪ್ಪ, ಉಪಾಧ್ಯಕ್ಷ ಸ.ರ.ಸುದರ್ಶನ, ರಂಗಕರ್ಮಿಗಳಾದ ಬಿ.ಎಂ.ರಾಮಚಂದ್ರ, ಡಿ.ನಾಗೇಂದ್ರಕುಮಾರ್, ರಂಗರತ್ನಾಕರ ಸಂಸ್ಥೆ ಅಧ್ಯಕ್ಷ ಕಿರಗಸೂರು ರಾಜಪ್ಪ ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮದ ನಂತರ ಮೈಸೂರಿನ ರಂಗಾನಂದ ಕಲಾ ಸಂಘದ ಕಲಾವಿದರು ಅಭಿನಯಿಸಿರುವ, ಕೆ.ಹಿರಣ್ಣಯ್ಯ ರಚಿತ ಹಾಗೂ ಕಲಾವಿದ ರಂಗಸ್ವಾಮಿ ನಿರ್ದೇಶಿಸಿ ನಟಿಸಿರುವ 'ಎಚ್ಚಮನಾಯಕ' ನಾಟಕ ಪ್ರದರ್ಶನಗೊಂಡು ಪ್ರೇಕ್ಷಕರ ಮೆಚ್ಚುಗೆಗಳಿಸಿತು.

ನೀತಿ ಸಂಹಿತೆ ಜಾರಿಯಾದ 24 ಗಂಟೆಯಲ್ಲಿ 16.89 ಕೋಟಿ ಮೌಲ್ಯದ ನಗದು, ಮದ್ಯ, ಆಭರಣ ವಶಕ್ಕೆ



ಬೆಂಗಳೂರು, ಮಾ. 19(ಕೆಎಂಶಿ)– ಮುಕ್ತ ಹಾಗೂ ಶಾಂತಿಯುತ ಚುನಾವಣೆಗೆ ಕಾರ್ಯತಂತ್ರ ರೂಪಿಸುತ್ತಿರುವ ಚುನಾವಣೆ ಆಯೋಗ ನೀತಿ ಸಂಹಿತೆ ಜಾರಿಯಾದ 24 ಗಂಟೆಯಲ್ಲಿ ರಾಜ್ಯದಲ್ಲಿ 16.89 ಕೋಟಿ ರೂ. ಮೌಲ್ಯದ ನಗದು, ಮದ್ಯ ಮತ್ತು ಆಭರಣಗಳನ್ನು ವಶಕ್ಕೆ ಪಡೆದಿದೆ.

ಕಟ್ಟುನಿಟ್ಟಾಗಿ ನೀತಿ ಸಂಹಿತೆ ಪಾಲನೆಗೆ ಹಲವಾರು ಹೊಸ ಕ್ರಮಗಳನ್ನು ರೂಪಿಸಿರುವ ಆಯೋಗ, ಕಳೆದ ಲೋಕಸಭಾ ಚುನಾವಣೆಯಲ್ಲಿ ಕಡಿಮೆ ಮತದಾನವಾದ ಮತಗಟ್ಟೆಗಳ ಮೇಲೆ ವಿಶೇಷ ನಿಗಾ ವಹಿಸಿದೆ. ಚುನಾವಣೆ ಘೋಷಣೆಯಾದ ದಿನದಿಂದ ಇಲ್ಲಿಯವರೆಗೆ ನೀತಿ ಸಂಹಿತೆ ಉಲ್ಲಂಘನೆಯಡಿ ನಗದು ರೂಪದಲ್ಲಿ 1 ಕೋಟಿ 45.76 ಲಕ್ಷ ರೂ, ಜೊತೆಗೆ 15.37 ಕೋಟಿ ರೂ. ಮೌಲ್ಯದ ಮದ್ಯ, ಇತರೆ ಸಾಮಗ್ರಿಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಆಯೋಗ ತಿಳಿಸಿದೆ.


ಚುನಾವಣೆ ದಿನಾಂಕ ಘೋಷಣೆಯಾದ ಬಳಿಕ ಮಾದರಿ ನೀತಿ ಸಂಹಿತೆ ಜಾರಿಯಾಗಿದೆ. ಪೊಲೀಸರು ಮತ್ತು ಚುನಾವಣಾಧಿಕಾರಿಗಳು ಚೆಕ್‌ಪೋಸ್ಟ್‌ಗಳಲ್ಲಿ ಹದ್ದಿನಕಣ್ಣಿಟ್ಟಿದ್ದಾರೆ. ವಾಹನಗಳ ಪರಿಶೀಲನೆ ನಡೆಸುತ್ತಿದ್ದಾರೆ. ದಾಖಲೆ ಇಲ್ಲದೇ ಭಾರಿ ಮೊತ್ತದ ಹಣ ಸಾಗಿಸುತ್ತಿದ್ದರೆ ವಶಕ್ಕೆ ಪಡೆದು ಕ್ರಮ ಕೈಗೊಳ್ಳುತ್ತಿದ್ದಾರೆ.

ಹೈದರಾಬಾದ್‌ನಿಂದ ಹುಬ್ಬಳ್ಳಿಗೆ ಕಾರೊಂದರಲ್ಲಿ ಸಾಗಿಸುತ್ತಿದ್ದ 2 ಕೋಟಿ, 93 ಲಕ್ಷದ 50 ಸಾವಿರ ನಗದನ್ನು ವಿಜಯಪುರ ಸಿಇಎನ್ ಕ್ರೈಂ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಕಾರಿನಲ್ಲಿ ಹಣ ಸಾಗಿಸುತ್ತಿರುವ ಬಗ್ಗೆ ಖಚಿತ ಮಾಹಿತಿ ಹಿನ್ನೆಲೆಯಲ್ಲಿ ಸಿಇಎನ್ ಪೊಲೀಸ್ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಸುನೀಲ್ ಕುಮಾರ್ ನಂದೇಶ್ವರ ಮತ್ತು ಸಿಬ್ಬಂದಿ ಸಿಂಧಗಿ ಬೈಪಾಸ್‌ನಲ್ಲಿ ಮಹಾರಾಷ್ಟ್ರ ನೋಂದಣಿ ಇರುವ ಎಂ.ಎಚ್.01 ಸಿಡಿ 7537 ಸಂಖ್ಯೆಯ ಟೊಯೋಟಾ ಕಾರನ್ನು ಅಡ್ಡಗಟ್ಟಿ ತಪಾಸಣೆ ನಡೆಸಿದರು. ಅದರಲ್ಲಿ ನಗದು ಪತ್ತೆಯಾಗಿದೆ. ಈ ಹಣವನ್ನು ಕಾರಿನಲ್ಲಿ ಸಾಂಗ್ಲಿಯ ಬಾಲಾಜಿ ನಿಖಂ ಮತ್ತು ಸಚಿನ್ ಮೋಹಿತೆ ಎಂಬುವವರು ಸಾಗಿಸುತ್ತಿದ್ದರು. ಮೊತ್ತದ ಬಗ್ಗೆ ಸೂಕ್ತ ದಾಖಲೆಯನ್ನು ಒದಗಿಸದ ಹಿನ್ನೆಲೆಯಲ್ಲಿ ಹಣ ವಶಕ್ಕೆ ಪಡೆದು, ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ವಿಜಯಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ತಿಳಿಸಿದ್ದಾರೆ.

ಕಳೆದ ರಾತ್ರಿ ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಕೊಂಗಬೋರನದೊಡ್ಡಿ ಬಳಿಯಲ್ಲಿ ಕಾರಿನಲ್ಲಿ ಅಕ್ರಮವಾಗಿ ಚೀಲದಲ್ಲಿ ಸಾಗಿಸುತ್ತಿದ್ದ ಒಂದು ಕೋಟಿ ರೂ. ಪತ್ತೆಯಾಗಿದ್ದು, ಚುನಾವಣಾ ಸಿಬ್ಬಂದಿ ಹಾಗೂ ಪೊಲೀಸರು ಹಣವನ್ನು ಜಪ್ತಿ ಮಾಡಿದ್ದಾರೆ. ಬೆಂಗಳೂರಿನಿಂದ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ಕಡೆಗೆ ಹೋಗುತ್ತಿದ್ದ ಕಾರನ್ನು ಚುನಾವಣಾ ಚೆಕ್ ಪೋಸ್ಟ್ ಅಧಿಕಾರಿಗಳು, ಪೊಲೀಸರು ಕೊಂಗಬೋರನದೊಡ್ಡಿ ಬಳಿ ತಡೆದು ಪರಿಶೀಲಿಸಿದಾಗ ಅದರಲ್ಲಿ 99 ಲಕ್ಷದ 20 ಸಾವಿರ ಹಣ ಪತ್ತೆಯಾಗಿದೆ. ಯಾವುದೇ ದಾಖಲೆ ಇಲ್ಲದೇ ಹಣ ಸಾಗಿಸುತ್ತಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಹಣ ಹಾಗೂ ಕಾರು ವಶಕ್ಕೆ ಪಡೆಯಲಾಗಿದೆ ಈ ಬಗ್ಗೆ ಗಿರೀಶ್ ಅವರನ್ನು ಚುನಾವಣಾಧಿಕಾರಿಗಳು ವಿಚಾರಣೆ ನಡೆಸಿದ್ದು ಸೂಕ್ತ ಉತ್ತರ, ದಾಖಲೆ ನೀಡದ ಕಾರಣ ಹಣ ಸೀಜ್ ಮಾಡಿದ್ದಾರೆ.

ನಕ್ಸಲರ ಪತ್ತೆಗೆ ಬಿರುಸಿನ ಕೂಂಬಿಂಗ್

ಗಾಳಿಬೀಡು, ಕೂಜಿಮಲೆ, ಮಾಕುಟ್ಟ, ಕಕ್ಕಬ್ಬೆ ಭಾಗದಲ್ಲಿ ಕಾರ್ಯಾಚರಣೆ



ಕೂಜಿಮಲೆ ರಬ್ಬರ್ ಎಸ್ಟೇಟ್‌ನ ಲೈನ್‌ಮನೆ ಬಳಿ ಪೊಲೀಸರು ಹಾಗೂ ನಕ್ಸಲ್ ನಿಗ್ರಹ ದಳದ ಸಿಬ್ಬಂದಿ ಕೂಂಬಿಂಗ್ ನಡೆಸುತ್ತಿರುವುದು.

ಮಡಿಕೇರಿ, ಮಾ.19– ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ಕೂಜಿಮಲೆ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತಿರುವ ರಬ್ಬರ್ ಎಸ್ಟೇಟ್ ಅಂಗಡಿಗೆ ಬಂದು ಹೋಗಿರುವ ನಕ್ಸಲ್ ತೀವ್ರವಾದಿಗಳಿಗಾಗಿ ಬಿರುಸಿನ ಕೂಂಬಿಂಗ್ ನಡೆಸಲಾಗುತ್ತಿದೆ.

ಕಾರ್ಕಳ, ಕೊಡಗು ಜಿಲ್ಲೆಯ ಆರ್ಜಿ ಹಾಗೂ ಭಾಗಮಂಡಲ ನಕ್ಸಲ್ ನಿಗ್ರಹ ದಳದ ಕಮಾಂಡೋಗಳು ಜಿಲ್ಲೆಯ ಗಡಿ ಭಾಗಗಳಲ್ಲಿ ತೀವ್ರ ಶೋಧ ಕಾರ್ಯ ನಡೆಸುತ್ತಿದ್ದಾರೆ. ಗಾಳಿಬೀಡು, ವಣಚಲು, ಕಡಮಕಲ್ಲು, ಕೂಜಿಮಲೆ, ಕೇರಳ ಗಡಿ ಭಾಗಗಳಾದ ಕುಟ್ಟ, ಮಾಕುಟ್ಟ, ಪೆರುಂಬಾಡಿ, ಕಕ್ಕಬ್ಬೆ, ತಡಿಯಂಡಮೋಳ್ ಬೆಟ್ಟ ಶ್ರೇಣಿ, ನೆರೆ ಜಿಲ್ಲೆಗಳಾದ ದಕ್ಷಿಣ ಕನ್ನಡದ ಸುಬ್ರಹ್ಮಣ್ಯ, ಕಾರ್ಕಳ, ಉಡುಪಿ ಭಾಗದಲ್ಲೂ ಏಕಕಾಲದಲ್ಲಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಈ ಭಾಗಗಳಲ್ಲಿ ನಕ್ಸಲ್ ನಿಗ್ರಹ ದಳದ ಕಮಾಂಡೋಗಳ ಒಟ್ಟು 10 ತಂಡಗಳು ಕಾರ್ಯಾಚರಣೆ ನಡೆಸುತ್ತಿವೆ.

ದಿನಸಿಗಾಗಿ ಚೌಕಾಸಿ: ಮಾ.17ರ ಸಂಜೆ 6 ಗಂಟೆಯಲ್ಲಿ ಕೂಜಿಮಲೆ ಎಸ್ಟೇಟ್ ಅಂಗಡಿಗೆ ಬಂದಿದ್ದ ನಾಲ್ವರು ನಕ್ಸಲರು 25 ಕೆಜಿ ಅಕ್ಕಿ, 3 ಕೆಜಿ ಸಕ್ಕರೆ, 3 ಕೆಜಿ ಗೋಧಿ ಹಿಟ್ಟು, 3 ಕೆಜಿ ಬಟಾಣಿ ಕಾಳು, 8 ಪ್ಯಾಕ್ ಬಿಸ್ಕೆಟ್, 50 ರೂ.ಗಳ ತಂಬಾಕು ಪುಡಿಯ ಪ್ಯಾಕೆಟ್ ಖರೀದಿಸಿದ್ದರು. ಇದರ ಒಟ್ಟು ಮೊತ್ತ 3192 ರೂ.ಗಳಾಗಿತ್ತು. ಈ ವೇಳೆ ನಕ್ಸಲರು ಹಣವನ್ನು ಕಡಿಮೆ ಮಾಡುವಂತೆ ಚೌಕಾಸಿಯನ್ನೂ ಮಾಡಿದ್ದಾರೆ. ಇದಕ್ಕೆ ಅಂಗಡಿ ಮಾಲೀಕ ಒಪ್ಪದಿದ್ದಾಗ ಅಷ್ಟು ಮೊತ್ತವನ್ನು ಪಾವತಿಸಿ ಕಾಡಿನೊಳಗೆ ಮರೆಯಾಗಿದ್ದಾರೆ ಎಂದು ಅಂಗಡಿ ಮಾಲೀಕ ಪೊಲೀಸರಿಗೆ ಮಾಹಿತಿ ನೀಡಿರುವುದಾಗಿ ತಿಳಿದು ಬಂದಿದೆ.

ಈ ಎಸ್ಟೇಟ್‌ನಲ್ಲಿ ಎಲ್ಲಾ ಕಾರ್ಮಿಕರು ಅಸ್ಸಾಂ ಮತ್ತು ಜಾರ್ಖಂಡ್ ಮೂಲದ ವಲಸಿಗರಾಗಿದ್ದು, ಇವರಿಗಾಗಿಯೇ ಕೂಜಿಮಲೆ ರಬ್ಬರ್ ಎಸ್ಟೇಟ್‌ನ ಲೈನ್ ಮನೆಯೊಂದರ ಕೊನೆಯ ಕೊಠಡಿಯಲ್ಲಿ ಅಂಗಡಿ ತೆರೆಯಲಾಗಿದೆ.

ಶಂಕಿತ ಗುರುತು ಪತ್ತೆ: ಕೂಜಿಮಲೆ ಎಸ್ಟೇಟ್‌ನ ಅಂಗಡಿಗೆ ಬಂದು ದಿನಸಿ ಖರೀದಿ ಮಾಡಿದ್ದ ಶಂಕಿತ ವ್ಯಕ್ತಿಗಳ ಗುರುತು ಪತ್ತೆ ಹಚ್ಚಲಾಗಿದೆ ಎನ್ನಲಾಗಿದ್ದು, ಗುಪ್ತಚರ ಇಲಾಖೆ ಬಳಿ ಇದ್ದ ನಕ್ಸಲ್‌ಗಳ ಫೋಟೋಗಳನ್ನು ಅಂಗಡಿ ಮಾಲೀಕರಿಗೆ ತೋರಿಸಿದಾಗ ಆತ ಅಂಗಡಿಗೆ ಬಂದಿದ್ದ ನಾಲ್ವರನ್ನು ಗುರುತಿಸಿದ್ದಾರೆ. ಈ ಪೈಕಿ ನಕ್ಸಲ್ ಮುಖಂಡ ಉಡುಪಿಯ ವಿಕ್ರಂಗೌಡ, ಚಿಕ್ಕಮಗಳೂರಿನ ಮುಂಡಗಾರು ಗ್ರಾಮದ ಲತಾ, ಕೇರಳದ ಜಿಷಾ ಮತ್ತು ತಮಿಳುನಾಡಿನ ಸಂತೋಷ್ ಎಂಬುದಾಗಿ ತಿಳಿದು ಬಂದಿದೆ. ಈ ನಾಲ್ವರು ನಕ್ಸಲರು ಬಂದೂಕು ಹೊಂದಿದ್ದು, ಈ ಪೈಕಿ ಮಹಿಳೆ ಮಾತ್ರ ಕ್ಯಾಮೋಫ್ಲಾರ್ಜ್ (ಸೇನಾ ಮಾದರಿ)ಯ ಸಮವಸ್ತ್ರ ತೊಟ್ಟಿದ್ದಳು. ಉಳಿದ ಮೂವರು ಕ್ಯಾಮೋಫ್ಲಾರ್ಜ್ ಪ್ಯಾಂಟ್ ಮತ್ತು ಶರ್ಟ್, ಟಿ-ಶರ್ಟ್ ತೊಟ್ಟಿದ್ದರು ಎಂದು ಪೊಲೀಸರ ತನಿಖೆ ವೇಳೆ ಅಂಗಡಿ ಮಾಲೀಕ ಮಾಹಿತಿ ನೀಡಿರುವುದು ತಿಳಿದು ಬಂದಿದೆ.

ನಕ್ಸಲರ ಗುರುತು: 2012ರಲ್ಲಿ ಮಡಿಕೇರಿ ತಾಲೂಕಿನ ಕಾಲೂರು ಗ್ರಾಮದಲ್ಲಿ ನಕ್ಸಲರು ಪ್ರತ್ಯಕ್ಷರಾಗಿ ಭೀತಿ ಮೂಡಿಸಿದ್ದರು. 2016ರ ನವೆಂಬರ್‌ನಲ್ಲಿ ಭಾಗಮಂಡಲದ ಮುಂಡ್ರೋಟು, 2018ರ ಫೆಬ್ರವರಿಯಲ್ಲಿ ಕಕ್ಕಬ್ಬೆ ಸಮೀಪದ ನಾಲಾಡಿ, ಜೂನ್‌ನಲ್ಲಿ ಸಂಪಾಜೆ ಸಮೀಪದ ಗುಡ್ಡೆಗದ್ದೆ, 2019ರ ಏಪ್ರಿಲ್‌ನಲ್ಲಿ ಕಕ್ಕಬ್ಬೆ ಸಮೀಪದ ತಡಿಯಂಡಮೋಳ್ ಪ್ರದೇಶ, 2023ರ ಮೇ ತಿಂಗಳಲ್ಲಿ ಕೊಡಗು–ಕೇರಳ ಗಡಿಯ ಕುಟ್ಟ ಸಮೀಪ ನಕ್ಸಲರು ಕಂಡು ಬಂದಿದ್ದರು. ಆ ಸಂದರ್ಭ ಕೂಡ ತೀವ್ರ ಕೂಂಬಿಂಗ್ ನಡೆಸಲಾಗಿತ್ತು. ಇದೀಗ ಲೋಕಸಭಾ ಚುನಾವಣೆ ಸಮಯದಲ್ಲಿ ಮತ್ತೊಮ್ಮೆ ಕೂಜಿಮಲೆ ವ್ಯಾಪ್ತಿಯಲ್ಲಿ ನಕ್ಸಲರು ಕಾಣಿಸಿಕೊಂಡಿದ್ದು, ಇದು ಪೊಲೀಸ್ ಇಲಾಖೆ ಹಾಗೂ ನಕ್ಸಲ್ ನಿಗ್ರಹ ದಳಕ್ಕೆ ತಲೆ ನೋವಾಗಿ ಪರಿಣಮಿಸಿದೆ.

ನಿಷೇಧಿತ ನಕ್ಸಲ್ ಸಂಘಟನೆಯ ಸದಸ್ಯರು

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮಾಹಿತಿ



ಮಡಿಕೇರಿ, ಮಾ.19– ಕೊಡಗು ಹಾಗೂ ದಕ್ಷಿಣ ಕನ್ನಡದ ಕೂಜಿಮಲೆ ರಬ್ಬರ್ ಎಸ್ಟೇಟ್ ಅಂಗಡಿಗೆ ಬಂದು ದಿನಸಿ ಪದಾರ್ಥ ತೆಗೆದುಕೊಂಡು ಹೋಗಿರುವ ವ್ಯಕ್ತಿಗಳು ನಿಷೇಧಿತ ನಕ್ಸಲ್ ಸಂಘಟನೆಯ ಸದಸ್ಯರಾಗಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದರು.

ನಗರದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಬ್ಬರು ಪುರುಷರು ಮತ್ತು ಇಬ್ಬರು ಮಹಿಳೆಯರು ಶಸ್ತ್ರಸಜ್ಜಿತರಾಗಿ ಮಾ.17ರ ಸಂಜೆ ಕೂಜಿಮಲೆ ರಬ್ಬರ್ ಎಸ್ಟೇಟ್‌ನ ಅಂಗಡಿಗೆ ಬಂದು ಅಕ್ಕಿ ಸಹಿತ ಇತರ ವಸ್ತುಗಳನ್ನು ಖರೀದಿಸಿದ್ದಾರೆ. ಈ ವೇಳೆ ಕನ್ನಡ ಭಾಷೆಯಲ್ಲಿ ನಾವು ನಕ್ಸಲರು ಎಂದೇ ಪರಿಚಯಿಸಿಕೊಂಡಿದ್ದಲ್ಲದೇ, ನಮ್ಮ ಹೋರಾಟಕ್ಕೆ ಬೆಂಬಲ ನೀಡಬೇಕು ಎಂದು ಅಂಗಡಿ ಮಾಲೀಕರಿಗೆ ತಿಳಿಸಿದ್ದಾರೆ ಎಂದರು.

ತನಿಖೆ ವೇಳೆ ಅಂಗಡಿ ಮಾಲೀಕರಿಗೆ ಕೆಲ ಫೋಟೋಗಳನ್ನು ತೋರಿಸಿದಾಗ ಓರ್ವ ನಕ್ಸಲ್ ಮುಖಂಡ ವಿಕ್ರಂಗೌಡ ನನ್ನು ಹೋಲುತ್ತಿದೆ. ಉಳಿದ ಮೂವರ ಕುರಿತು ಹೆಚ್ಚಿನ ಮಾಹಿತಿ ಕಲೆ ಹಾಕಲಾಗುತ್ತಿದೆ. ನಕ್ಸಲ್ ಪ್ರಕರಣವನ್ನು ಜಿಲ್ಲಾ ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಿದೆ ಎಂದು ಹೇಳಿದರು.

ತೀವ್ರ ಶೋಧ: ನಕ್ಸಲ್ ಮುಖಂಡ ವಿಕ್ರಂಗೌಡ ಸಹಿತ ಇತರ ಮೂವರು ಶಸ್ತ್ರಸಜ್ಜಿತರಿಗೆ ತೀವ್ರ ಶೋಧ ನಡೆಸಲಾಗುತ್ತಿದೆ. ನಕ್ಸಲ್ ನಿಗ್ರಹ ದಳದ ಕಮಾಂಡೋಗಳ ಸಹಿತ ಶ್ವಾನ ದಳ ಮತ್ತು ಡ್ರೋಣ್ ಕ್ಯಾಮರಾಗಳನ್ನು ಕೂಡ ಬಳಸಲಾಗುತ್ತಿದೆ. ಕೂಜಿಮಲೆ ಅರಣ್ಯ ಪ್ರದೇಶ ದಟ್ಟ ಕಾಡಿನ ಸಹಿತ ಕಣಿವೆಗಳಿಂದ ಕೂಡಿರುವುದರಿಂದ ತೀವ್ರ ಕಾರ್ಯಾಚರಣೆ ನಡೆಸಲಾಗುತ್ತಿದೆ. ನಕ್ಸಲ್ ನಿಗ್ರಹ ದಳದ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರ ಕುಮಾರ್ ದಯಾಮ ಕೂಂಬಿಂಗ್ ಮೇಲ್ವಿಚಾರಣೆ ಮಾಡುತ್ತಿದ್ದಾರೆ ಎಂದು ಮಾಹಿತಿ ನೀಡಿದರು.

ಗುಪ್ತ ಮಾಹಿತಿ ಸಂಗ್ರಹ: ಕೂಜಿಮಲೆ ರಬ್ಬರ್ ಎಸ್ಟೇಟ್‌ನ ಅಂಗಡಿಗೆ ಬಂದಿದ್ದ ನಕ್ಸಲರು ಎತ್ತ ಕಡೆ ತೆರಳಿದ್ದಾರೆ ಎಂದು ಪತ್ತೆ ಹಚ್ಚಲಾಗುತ್ತಿದೆ. ಈ ಕುರಿತು ನೆರೆ ಜಿಲ್ಲೆಗಳು ಮತ್ತು ಕೇರಳ ರಾಜ್ಯದ ಗುಪ್ತಚರ ಇಲಾಖೆಗಳಿಂದಲೂ ಮಾಹಿತಿ ಸಂಗ್ರಹಿಸಲಾಗುತ್ತಿದೆ. ನಕ್ಸಲ್ ಮುಖಂಡ ವಿಕ್ರಂಗೌಡ ವಿರುದ್ಧ 2018ರಲ್ಲಿ ಸಂಪಾಜೆ ಭಾಗದಲ್ಲಿ ಗ್ರಾಮಸ್ಥರಿಗೆ ಬೆದರಿಕೆ ಒಡ್ಡಿದ ಕುರಿತು ಪ್ರಕರಣ ದಾಖಲಾಗಿದೆ ಎಂದು ಹೇಳಿದರು.

ಕಾಡಾನೆ ಸೆರೆಗೆ ಕಾರ್ಯಾಚರಣೆ



ವಿರಾಜಪೇಟೆ ತಾಲೂಕಿನ ಚೆನ್ನಂಗಿ ಅಬ್ಬೂರು ಭಾಗದಲ್ಲಿ ಸಾಕಾನೆಗಳ ಮೂಲಕ ಕಾಡಾನೆ ಸೆರೆಗೆ ಕಾರ್ಯಾಚರಣೆ ನಡೆಸುತ್ತಿರುವುದು.

ಸಿದ್ದಾಪುರ, ಮಾ.19–ಕಾಫಿ ತೋಟಗಳಲ್ಲಿ ಫಸಲನ್ನು ನಾಶ ಪಡಿಸಿ, ಕಾರ್ಮಿಕರು, ಬೆಳೆಗಾರರು ಹಾಗೂ ವಿದ್ಯಾರ್ಥಿಗಳಲ್ಲಿ ಆತಂಕ ಸೃಷ್ಟಿಸಿರುವ ಕಾಡಾನೆ ಸೆರೆಗೆ ಸಾಕಾನೆಗಳ ಮೂಲಕ ಹುಡುಕಾಟ ಆರಂಭಿಸಲಾಗಿದೆ.

ವಿರಾಜಪೇಟೆ ತಾಲೂಕಿನ ಚೆನ್ನಂಗಿ ಅಬ್ಬೂರು ಭಾಗದ ಕಾಫಿ ತೋಟಗಳಲ್ಲಿ ಮತ್ತಿಗೋಡು ಶಿಬಿರದ ಸಾಕಾನೆಗಳಾದ ಶ್ರೀಕಂಠ, ಅಶೋಕ್‌ನೊಂದಿಗೆ ಆರ್‌ಆರ್‌ಟಿ ತಂಡದ 10ಕ್ಕೂ ಹೆಚ್ಚು ಸಿಬ್ಬಂದಿ ಕೂಂಬಿಂಗ್ ನಡೆಸುತ್ತಿದ್ದಾರೆ. ಎರಡು ದಿನಗಳಿಂದ ಕಾಡಾನೆಗಳ ಪತ್ತೆ ಹಚ್ಚಲು ಅರಣ್ಯ ಸಿಬ್ಬಂದಿ ಕಾರ್ಯಾಚರಣೆ ಚುರುಕುಗೊಳಿಸಿದ್ದಾರೆ. ಇದರೊಂದಿಗೆ ಕಾಫಿ ತೋಟಗಳಲ್ಲಿ ಬೀಡು ಬಿಟ್ಟಿರುವ ಕಾಡಾನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆ ಮುಂದುವರಿದಿದೆ. ತೋಟಗಳಲ್ಲಿ ಕಾರ್ಮಿಕರು ಕಾಳು ಮೆಣಸು ಹಾಗೂ ಕಾಫಿ ಕೊಯ್ಲು ಕೆಲಸ ನಡೆಯುತ್ತಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಬೆಳೆಗಾರರು ಹಾಗೂ ಕಾರ್ಮಿಕರು ಎಚ್ಚರ ವಹಿಸಬೇಕು ಎಂದು ವಿರಾಜಪೇಟೆ ಉಪವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್ ತಿಳಿಸಿದ್ದಾರೆ.

ಹಾಡಹಗಲೇ ಪಾಲಿಬೆಟ್ಟ, ಸಿದ್ದಾಪುರ, ಅಮ್ಮತಿ, ಮಾಲ್ದಾರೆ, ಕರಡಿಗೋಡು, ಮೈಲಾಪುರ, ಶಿಲ್ಪಿ, ಮಟ್ಟಂ, ಬಜೆಗೊಲ್ಲಿ, ಹುಂಡಿ, ಚೆನ್ನಂಗಿ, ಬಾಡಗ, ಬಾಣಂಗಾಲ, ಚನ್ನಯ್ಯನಕೋಟೆ, ಹೂಸೂರು, ಕಣಂಗಾಲ, ಇಂಜಲಗೆರೆ, ಗುಹ್ಯ ಗ್ರಾಮಗಳ ವ್ಯಾಪ್ತಿಯ ಕಾಫಿ ತೋಟಗಳಲ್ಲಿ ಕಾಡಾನೆಗಳು ಬಿಡುಬಿಟ್ಟು ಫಸಲನ್ನು ನಾಶ ಮಾಡುತ್ತಿವೆ. ಈ ಭಾಗದಲ್ಲಿ ಮೂರು ಕಾಡಾನೆಗಳು ಉಪಟಳ ನೀಡುತ್ತಿದ್ದು, ಇವುಗಳನ್ನು ಪತ್ತೆಹಚ್ಚಿ ರೇಡಿಯೋ ಕಾಲರ್ ಅಳವಡಿಸಲಾಗುವುದು ಎಂದು ತಿತಿಮತಿ ಎಸಿಎಫ್ ಗೋಪಾಲ್ ತಿಳಿಸಿದ್ದಾರೆ.

ಮಾ.22ರಿಂದ ಭಗವತಿ ದೇವಾಲಯ ವಾರ್ಷಿಕೋತ್ಸವ



ಮಡಿಕೇರಿ, ಮಾ.19– ತಾಲೂಕಿನ ಬಿಳಿಗೇರಿ ಗ್ರಾಮದ ಶ್ರೀ ಭಗವತಿ ದೇವಾಲಯದ ವಾರ್ಷಿಕೋತ್ಸವ ಮಾ.22 ರಿಂದ 26ರವರೆಗೆ ನಡೆಯಲಿದೆ. ಉತ್ಸವದ ಅಂಗವಾಗಿ ಮಾ.22ರಂದು ಬೆಳಗ್ಗೆ 10 ಗಂಟೆಗೆ ಗಣಪತಿ ಹೋಮ, ಮಹಾಪೂಜೆ, ಸಂಜೆ 6ಕ್ಕೆ ಪ್ರಾರ್ಥನೆ, ತಕ್ಕರ ಮನೆಯಿಂದ ಭಂಡಾರ ತೆಗೆದುಕೊಂಡು ಬರುವುದು, ಅಂದಿಬೆಳಕು, ಪ್ರಸಾದ ವಿತರಣೆ ನಡೆಯಲಿದೆ. 23ರಂದು ಬೆಳಗ್ಗೆ 6ಕ್ಕೆ ದೇವರು ಬಲಿ ಬರುವುದು, ಸಂಜೆ 6ಕ್ಕೆ ಶ್ರೀ ಪರದೇವರ ಕೋಟದಲ್ಲಿ ಕೊಟ್ಟಿ ಪಾಡುವುದು ಕಾರ್ಯಕ್ರಮ ಜರುಗಲಿದೆ. ಮಾ.24ರಂದು ಬೆಳಗ್ಗೆ 6ಕ್ಕೆ ಅಯ್ಯಪ್ಪ ದೇವರ ಪೂಜೆ, ಸಂಜೆ 6ಕ್ಕೆ ಬೆಳಕು, ಪ್ರಸಾದ ವಿತರಣೆ ನಡೆಯಲಿದೆ. 25ರಂದು ಪಟ್ಟಣಿ, ಬೆಳಗ್ಗೆ 6ಕ್ಕೆ ದೇವರ ನೃತ್ಯ ಬಲಿ, ಪರದೇವರ ಮುಡಿ, ಅಯ್ಯಪ್ಪ ದೇವರ ಭಂಡಾರ ತರುವುದು, ಕುಟ್ಟಿಚಾತ ದೇವರ ಎಡೆ ಮಡಗುವುದು, ಎತ್ತು ಪೋರಾಟ, ಹಬ್ಬದ ಕಟ್ಟು ಮುರಿಯುವುದು, ತೆಂಗೆಪೋರು, ಅನ್ನಸಂತರ್ಪಣೆ, ಶ್ರೀ ದೇವರ ನೆರಪು ಬಲಿ, ಶ್ರೀ ಪರದೇವರ, ಅಯ್ಯಪ್ಪ, ಕುಟ್ಟಿ ಚಾತ ದೇವರ ಕೋಲ ನಡೆಯಲಿದೆ. 26ರಂದು ಸಂಜೆ 4 ಗಂಟೆಗೆ ಬೆಳಕು, ಜಳಕ ಕಾರ್ಯ, ನಂತರ ಮೆಟ್ಟಿಲು ಪೂಜೆ, ನೃತ್ಯ ಬಲಿ, ಅನ್ನಸಂತರ್ಪಣೆ ನಡೆಯಲಿದೆ ಎಂದು ದೇವಾಲಯ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಆಶಾ ನಿಧನ



ನಾಪೋಕ್ಲು, ಮಾ.19–ಹೋದವಾಡ ಗ್ರಾಮದ ಕುಯ್ಯಡಿಗೇರಿ ನಿವಾಸಿ ಕೈಯಂದಿರ ಉತ್ತಪ್ಪ (ಪ್ರಕಾಶ್) ಅವರ ಪತ್ನಿ ಆಶಾ (ಪಾಪ) (45) ಸೋಮವಾರ ನಿಧನರಾದರು. ಮೃತರು ಪತಿ, ಪುತ್ರಿ, ಪುತ್ರನನ್ನು ಅಗಲಿದ್ದಾರೆ. ಸೋಮವಾರ ಸ್ವಗ್ರಾಮ ಕುಯ್ಯಡಗೇರಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ಅಂಚೆ ಮತಪತ್ರ ಕಾರ್ಯ ವ್ಯವಸ್ಥಿತವಾಗಿ ನಿರ್ವಹಿಸಬೇಕು



ಡಿಸಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿ ವೆಂಕಟ್ ರಾಜಾ ಮಾತನಾಡಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ ಇದ್ದರು.

ಮಡಿಕೇರಿ, ಮಾ.19–ಲೋಕಸಭಾ ಚುನಾವಣೆಯಲ್ಲಿ ಯಾರೂ ಮತದಾನದಿಂದ ವಂಚಿತರಾಗಬಾರದು. ಈ ನಿಟ್ಟಿನಲ್ಲಿ ಅಂಚೆ ಮತಪತ್ರ ಕಾರ್ಯವನ್ನು ವ್ಯವಸ್ಥಿತವಾಗಿ ನಿರ್ವಹಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ವೆಂಕಟ್ ರಾಜಾ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಅಂಚೆ ಮತಪತ್ರ ಸಂಬಂಧ ಮಂಗಳವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಅಂಚೆ ಮತಪತ್ರವನ್ನು ಆನ್‌ಲೈನ್ ಮೂಲಕ ನಮೂನೆ–12ಡಿ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಈ ಬಗ್ಗೆ ಹೆಚ್ಚಿನ ಮಾಹಿತಿ ನೀಡುವಂತಾಗಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. 85 ವರ್ಷ ಮೇಲ್ಪಟ್ಟವರು ಹಾಗೂ ವಿಕಲಚೇತನರಿಗೆ ಅಂಚೆ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ. ಸಾಧ್ಯವಾದಷ್ಟು ಮತಗಟ್ಟೆ ಕೇಂದ್ರಗಳಿಗೆ ಹೋಗಿ ಹಕ್ಕು ಚಲಾಯಿಸುವಂತಾಗಬೇಕು. ಮತಗಟ್ಟೆ ಕೇಂದ್ರಕ್ಕೆ ತೆರಳಲು ಸಾಧ್ಯವಾಗದಿರುವವರಿಗೆ ಅಂಚೆ ಮತಪತ್ರ ಮೂಲಕ ಹಕ್ಕು ಚಲಾಯಿಸಬಹುದು. ಈ ನಿಟ್ಟಿನಲ್ಲಿ ಅಗತ್ಯ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಒಮ್ಮೆ ಅಂಚೆ ಮತದಾನಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ ಮತಗಟ್ಟೆ ಕೇಂದ್ರದಲ್ಲಿ ಮತದಾನಕ್ಕೆ ಅವಕಾಶವಿರುವುದಿಲ್ಲ. ಈ ವಿಷಯವನ್ನು ಮತದಾರರಿಗೆ ಮನವರಿಕೆ ಮಾಡಬೇಕು. ಚುನಾವಣಾ ಆಯೋಗದ ನಿರ್ದೇಶನದಂತೆ ನಿಗದಿತ ದಿನಾಂಕದೊಳಗೆ ಅಂಚೆ ಮತಪತ್ರ ವಿತರಿಸಿ, ದೃಢೀಕರಣ ಪತ್ರ ಪಡೆಯಬೇಕು. ಯಾವುದೇ ಅರ್ಹ ಮತದಾರರು ಮತದಾನದಿಂದ ವಂಚಿತರಾಗಬಾರದು ಎಂದು ಹೇಳಿದರು.

ಎಡಿಸಿ ಬಿ.ಎನ್.ವೀಣಾ ಮಾತನಾಡಿ, ಅಗತ್ಯ ಸೇವೆಗಳ ಇಲಾಖೆಯಡಿ ಕರ್ತವ್ಯ ನಿರ್ವಹಿಸುವ ಸುಮಾರು 12 ಇಲಾಖೆಗಳು ಬರಲಿದ್ದು, ಚುನಾವಣಾ ಕರ್ತವ್ಯ ನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿ ಒಳಗೊಂಡ ಅಂಚೆ ಮತಪತ್ರದ ಪಟ್ಟಿ ಕಳುಹಿಸಲಾಗಿದೆ. ಹಾಗೆಯೇ 85 ವರ್ಷ ಮೇಲ್ಪಟ್ಟವರು 5 ಸಾವಿರಕ್ಕೂ ಹೆಚ್ಚು ಹಾಗೂ 4 ಸಾವಿರ ವಿಕಲಚೇತನರು ಇದ್ದಾರೆ ಎಂದು ತಿಳಿಸಿದರು. ಸಭೆಯಲ್ಲಿ ಅಂಚೆ ಮತಪತ್ರ ನೋಡಲ್ ಅಧಿಕಾರಿ ಅನಿತಾ ಭಾಸ್ಕರ್, ಎನ್‌ಐಸಿಯ ಅಜಿತ್, ಕೆ.ಸಿ.ದಯಾನಂದ, ವಿಜಯ್, ನಾಗರಾಜ ಆಚಾರ್, ಸಂಜಯ್ ಕುಮಾರ್, ಇತರರು ಇದ್ದರು.

ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಿನ ತಪಾಸಣೆಗೆ ಸೂಚನೆ



ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ವರ್ಚುವಲ್ ಸಭೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್ ಮಾತನಾಡಿದರು.

ಚಾಮರಾಜನಗರ, ಮಾ.19– ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಾಗಿ ತಪಾಸಣೆ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಸಹಾಯಕ ಚುನಾವಣಾಧಿಕಾರಿಗಳು, ನೋಡಲ್ ಅಧಿಕಾರಿಗಳೊಂದಿಗೆ ನಡೆದ ವರ್ಚುವಲ್ ಸಭೆಯಲ್ಲಿ ಮಾತನಾಡಿದ ಅವರು, ಈಗಾಗಲೇ ನೀತಿ ಸಂಹಿತೆ ಜಾರಿಯಾಗಿರುವ ಹಿನ್ನೆಲೆಯಲ್ಲಿ ಹೆಚ್.ಡಿ.ಕೋಟೆ, ನಂಜನಗೂಡು, ವರುಣ, ತಿ.ನರಸೀಪುರ, ಹನೂರು, ಕೊಳ್ಳೇಗಾಲ, ಚಾಮರಾಜನಗರ ಹಾಗೂ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅಂತಾರಾಜ್ಯ ಹಾಗೂ ಜಿಲ್ಲಾ ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆಯನ್ನು ಚುರುಕುಗೊಳಿಸಬೇಕು. ದಾಖಲೆ ಇಲ್ಲದೆ ಸಾಗಿಸುವ ಹಣ, ಅಕ್ರಮ ಮದ್ಯ, ಆಮಿಷ ಒಡ್ಡುವ ವಸ್ತುಗಳ ಮೇಲೆ ಹೆಚ್ಚಿನ ನಿಗಾ ವಹಿಸಬೇಕು. ಎಲ್ಲಾ ವಾಹನಗಳನ್ನು ತೀವ್ರ ತಪಾಸಣೆ ಮಾಡಬೇಕು ಎಂದರು.

ಚೆಕ್‌ಪೋಸ್ಟ್‌ಗಳಲ್ಲಿ ಅಗತ್ಯ ಮೂಲ ಸೌಕರ್ಯಗಳ ವ್ಯವಸ್ಥೆ ಇರಬೇಕು. ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗೆ ಜರ್ಕಿನ್, ಟಾರ್ಚ್‌ಗಳು ಇರಬೇಕು. ಎಲ್ಲಾ ಚೆಕ್‌ಪೋಸ್ಟ್‌ಗಳಲ್ಲಿ ಸಿಸಿ ಟಿವಿ ಕಾರ್ಯನಿರ್ವಹಿಸಬೇಕು. ವಿದ್ಯುತ್ ಅಡಚಣೆಯಾಗದಿರಲು ಯುಪಿಎಸ್ ಇರಬೇಕು ಎಂದು ನಿರ್ದೇಶಿಸಿದರು.

ಚೆಕ್‌ಪೋಸ್ಟ್‌ಗಳಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಸಿಬ್ಬಂದಿ ವಾಹನಗಳನ್ನು ಕೂಲಂಕುಷವಾಗಿ ತಪಾಸಣೆ ಮಾಡಬೇಕು. ಈ ಬಗ್ಗೆ ರಿಜಿಸ್ಟರ್‌ಗಳಲ್ಲಿ ಕಡ್ಡಾಯವಾಗಿ ನಮೂದಿಸ ಬೇಕು. ಎಆರ್‌ಓ ಮತ್ತು ತಹಶೀಲ್ದಾರ್‌ಗಳು ಭೇಟಿ ನೀಡಿ ಚೆಕ್‌ಪೋಸ್ಟ್ ಕಾರ್ಯ ನಿರ್ವಹಣೆ ಪರಿಶೀಲಿಸಬೇಕು ಎಂದರು.

ಸಭೆಯಲ್ಲಿ ಎಡಿಸಿ ಗೀತಾ ಹುಡೇದ, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ದಾಖಲೆ ಇಲ್ಲದ ಹಣ ವಶ




ದಾಸನಪುರ ಚೆಕ್‌ಪೋಸ್ಟ್‌ನಲ್ಲಿ ಎಸ್‌ಐಟಿ ಅಧಿಕಾರಿಗಳು ಹಣದ ಬ್ಯಾಗ್ ಪರಿಶೀಲಿಸಿದರು.

ಕೊಳ್ಳೇಗಾಲ, ಮಾ.19– ದಾಖಲೆ ಇಲ್ಲದೆ ಸಾಗಿಸುತ್ತಿದ್ದ 1 ಲಕ್ಷ ರೂ. ನಗದನ್ನು ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ದಾಸನಪುರ ಚೆಕ್‌ಪೋಸ್ಟ್‌ನಲ್ಲಿ ಎಸ್‌ಐಟಿ ಅಧಿಕಾರಿಗಳು ಮಂಗಳವಾರ ವಶಪಡಿಸಿಕೊಂಡಿದ್ದಾರೆ.

ಬೆಳಗ್ಗೆ 9.15 ಗಂಟೆಯಲ್ಲಿ ಬೆಂಗಳೂರಿನಿಂದ ಕೊಳ್ಳೇಗಾಲ ಕಡೆಗೆ ಕಾರಿನಲ್ಲಿ ಬರುತ್ತಿದ್ದ ಪ್ರಮೋದ್‌ನನ್ನು ತಪಾಸಣೆ ಮಾಡಿದಾಗ ಬ್ಯಾಗ್‌ನಲ್ಲಿ 1 ಲಕ್ಷ ರೂ. ಪತ್ತೆಯಾಗಿದೆ. ಈ ಹಣಕ್ಕೆ ಯಾವುದೇ ದಾಖಲೆ ಇಲ್ಲದಿದ್ದರಿಂದ ಎಸ್‌ಐಟಿ ಅಧಿಕಾರಿಗಳಾದ ಅಶೋಕ ನಾಗಪ್ಪ ಪ್ಯಾಟಿ, ಮಹದೇವಪ್ರಸಾದ್, ಎಸ್‌ಐ ಮಹೇಶ್ ಕುಮಾರ್ ವಶಕ್ಕೆ ಪಡೆದಿದ್ದಾರೆ.

ಕೆರೆಗೆ ಹಾರಿ ಯುವಕ ಆತ್ಮಹತ್ಯೆ



ಬೇಗೂರು, ಮಾ.19–ಕೌಟುಂಬಿಕ ಕಲಹದಿಂದ ಮನನೊಂದು ಯುವಕ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ಯಡವನಹಳ್ಳಿ ಗ್ರಾಮದಲ್ಲಿ ಸೋಮವಾರ ರಾತ್ರಿ ನಡೆದಿದೆ. ಗ್ರಾಮದ ನಿವಾಸಿ ಗೋವಿಂದಸ್ವಾಮಿ (28) ಆತ್ಮಹತ್ಯೆ ಮಾಡಿಕೊಂಡಿದ್ದು, ಈತ ಗುಂಡ್ಲುಪೇಟೆ ತಾಲೂಕಿನ ಮಲ್ಲಯ್ಯನಪುರ ಗ್ರಾಮದ ಹುಡುಗಿಯೊಂದಿಗೆ ಐದು ತಿಂಗಳ ಹಿಂದೆ ವಿವಾಹವಾಗಿದ್ದ. ಆದರೆ, ಕೆಲ ದಿನಗಳಿಂದ ಮನೆಯಲ್ಲಿ ಕಲಹದಿಂದ ನಡೆಯುತ್ತಿತ್ತು. ಇದರಿಂದ ಮನನೊಂದ ಗೋವಿಂದಸ್ವಾಮಿ ಸೋಮವಾರ ರಾತ್ರಿ ಕಮರಹಳ್ಳಿ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಾಮರಾಜನಗರಕ್ಕೆ ಕಾಂಗ್ರೆಸ್ ಅಭ್ಯರ್ಥಿ ಯಾರು?

ಟಿಕೆಟ್‌ಗಾಗಿ ನಂಜುಂಡಸ್ವಾಮಿ, ಸುನೀಲ್ ಬೋಸ್ ನಡುವೆ ತೀವ್ರ ಪೈಪೋಟಿ



ನಂಜುಂಡಸ್ವಾಮಿ





ಸುನಿಲ್ ಬೋಸ್

ಚಾಮರಾಜನಗರ, ಮಾ.19–ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಯಾರಾಗಲಿದ್ದಾರೆ ಎಂಬ ಕುತೂಹಲ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಜಿಲ್ಲಾ ರಾಜಕೀಯ ವಲಯದಲ್ಲಿ ಸಾಕಷ್ಟು ಚರ್ಚೆಯಾಗುತ್ತಿದೆ.

ಕ್ಷೇತ್ರದಲ್ಲಿ 9 ಆಕಾಂಕ್ಷಿಗಳಿದ್ದು, ಈಗಾಗಲೇ ಕಾಂಗ್ರೆಸ್ ವರಿಷ್ಠರ ಮನವೊಲಿಕೆಗೆ ಕಸರತ್ತು ನಡೆಸುತ್ತಿದ್ದಾರೆ. ಇವರಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರ ಪುತ್ರ ಸುನೀಲ್ ಬೋಸ್ ಹಾಗೂ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ ಅವರ ನಡುವೆ ಟಿಕೆಟ್‌ಗಾಗಿ ತೀವ್ರ ಪೈಪೋಟಿ ನಡೆಯುತ್ತಿದೆ. ಮೂಲಗಳ ಪ್ರಕಾರ ಸಚಿವ ಎಚ್.ಸಿ.ಮಹದೇವಪ್ಪ ಅವರ ಪುತ್ರ ಸುನೀಲ್ ಬೋಸ್ ಆಯ್ಕೆಯಾಗುವ ಸಾಧ್ಯತೆ ಹೆಚ್ಚಾಗಿದೆ ಎಂದು ತಿಳಿದು ಬಂದಿದೆ.

> ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದ ಕಾಂಗ್ರೆಸ್‌ನ ಅಭ್ಯರ್ಥಿ ಯಾರಾಗಬೇಕೆಂದು ಪಕ್ಷದ ವರಿಷ್ಠರು ನಿರ್ಧರಿಸುತ್ತಾರೆ. ಇಂದು (ಬುಧವಾರ) ಸಂಜೆಯೊಳಗೆ ಅಭ್ಯರ್ಥಿಯ ಹೆಸರನ್ನು ಪ್ರಕಟಿಸುವ ಸಾಧ್ಯತೆ ಇದ್ದು, ಸೂಕ್ತ ಅಭ್ಯರ್ಥಿಯನ್ನು ಪಕ್ಷದ ವರಿಷ್ಠರು ಆಯ್ಕೆ ಮಾಡಲಿದ್ದಾರೆ.
>
> -ಜಿ.ಕೆ.ರವಿಕುಮಾರ್, ಜಿಲ್ಲಾ ಉಪಾಧ್ಯಕ್ಷರು, ಜಿಲ್ಲಾ ಕಾಂಗ್ರೆಸ್ ಸಮಿತಿ

ಬಿಜೆಪಿ ಅಭ್ಯರ್ಥಿ ಘೋಷಣೆಯಾದ ಬಳಿಕ ಕಾಂಗ್ರೆಸ್‌ನಿಂದ ಬಿಜೆಪಿಗೆ ಸವಾಲೊಡ್ಡುವ ಅಭ್ಯರ್ಥಿ ಯಾರಾಗಲಿದ್ದಾರೆ ಎಂಬ ಚರ್ಚೆ ಕ್ಷೇತ್ರದಲ್ಲಿ ತೀವ್ರಗೊಂಡಿದೆ. ಪಕ್ಷದ ವರಿಷ್ಠರು ಸಚಿವ ಡಾ.ಎಚ್.ಸಿ. ಮಹದೇವಪ್ಪ, ಅವರ ಪುತ್ರ ಸುನೀಲ್ ಬೋಸ್ ಹಾಗೂ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ ಈ ಮೂವರ ಹೆಸರನ್ನು ಅಂತಿಮಗೊಳಿಸಿ ದೆಹಲಿಯ ಹೈಕಮಾಂಡ್‌ಗೆ ಶಿಫಾರಸ್ಸು ಮಾಡಿದ್ದಾರೆ ಎನ್ನಲಾಗಿದೆ.

ಸಚಿವ ಮಹದೇವಪ್ಪ ನಾನು ಸ್ಪರ್ಧಿಸುವುದಿಲ್ಲವೆಂದು ಸ್ಪಷ್ಟಪಡಿಸಿದ್ದು, ಪುತ್ರನಿಗೆ ಟಿಕೆಟ್ ಕೊಡಿಸಲು ಇನ್ನಿಲ್ಲದ ಪ್ರಯತ್ನ ನಡೆಸುತ್ತಿದ್ದಾರೆ. ಸುನೀಲ್ ಬೋಸ್‌ರನ್ನು ಅಭ್ಯರ್ಥಿಯನ್ನಾಗಿ ಮಾಡಿದರೆ, ಗೆಲ್ಲಿಸಿಕೊಂಡು ಬರುವ ವಾಗ್ದಾನವನ್ನು ವರಿಷ್ಠರಿಗೆ ನೀಡಿದ್ದಾರೆ ಎಂದು ತಿಳಿದು ಬಂದಿದೆ. ಹೀಗಾಗಿ, ಕಾಂಗ್ರೆಸ್‌ನ ರಾಷ್ಟ್ರ ನಾಯಕರು ಸುನೀಲ್ ಬೋಸ್ ಅವರ ಆಯ್ಕೆಯನ್ನು ಅಂತಿಮಗೊಳಿಸುವ ಸಾಧ್ಯತೆ ಇದ್ದು, ಇಂದು (ಬುಧವಾರ) ಸಂಜೆಯೊಳಗೆ ಅಭ್ಯರ್ಥಿ ಘೋಷಣೆ ಮಾಡಲಿದ್ದಾರೆ ಎಂದು ಪಕ್ಷದ ಮೂಲಗಳಿಂದ ತಿಳಿದು ಬಂದಿದೆ.

ನಂಜುಂಡಸ್ವಾಮಿ ಲಾಬಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿರುವ ಕೊಳ್ಳೇಗಾಲ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ ಅವರು ದೆಹಲಿಯಲ್ಲಿ ಬೀಡು ಬಿಟ್ಟಿದ್ದು, ಟಿಕೆಟ್‌ಗಾಗಿ ಇನ್ನಿಲ್ಲದ ಪ್ರಯತ್ನ ನಡೆಸುತ್ತಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಹಲವು ನಾಯಕರನ್ನು ಭೇಟಿ ಮಾಡಿರುವ ನಂಜುಂಡಸ್ವಾಮಿ, ತಮ್ಮ ರಾಜಕೀಯ ಭವಿಷ್ಯವನ್ನು ಕಂಡುಕೊಳ್ಳಲು ಕೊನೆ ಹಂತದ ಪ್ರಯತ್ನ ನಡೆಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಕಳೆದ ವಾರ ಅವರು ದೆಹಲಿಯಲ್ಲಿ ಖರ್ಗೆ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ. ನಂತರ ಖರ್ಗೆ ಅವರ ಸಲಹೆ ಮೇರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ, ಚಾಮರಾಜನಗರ ಕ್ಷೇತ್ರದ ಟಿಕೆಟ್ ವಿಚಾರವಾಗಿ ಮಾತುಕತೆ ನಡೆಸಿದ್ದಾರೆ ಎಂದು ಅವರ ಆಪ್ತರು ಹೇಳಿದ್ದಾರೆ. ಇನ್ನೂ ಇಂದು (ಬುಧವಾರ) ಸಂಜೆಯೊಳಗೆ ಕಾಂಗ್ರೆಸ್‌ನ ಅಭ್ಯರ್ಥಿ ಘೋಷಣೆಯಾಗುವ ಸಾಧ್ಯತೆಯಿದ್ದು, ಪಕ್ಷದ ವರಿಷ್ಠರು ಯಾರಿಗೆ ಮಣೆ ಹಾಕಲಿದ್ದಾರೆ ಎನ್ನುವುದನ್ನು ಕಾದು ನೋಡಬೇಕಿದೆ.

ನಾಳೆ ಜಿಲ್ಲಾ ಮಟ್ಟದ ಮಹಿಳಾ ಕ್ರೀಡಾಕೂಟ

ಚಾಮರಾಜನಗರ, ಮಾ.19–ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ವತಿಯಿಂದ 2023–24ನೇ ಸಾಲಿನ ಜಿಲ್ಲಾ ಮಟ್ಟದ ಮಹಿಳಾ ಕ್ರೀಡಾಕೂಟವನ್ನು ಮಾ.21ರಂದು ನಗರದ ಜಿಲ್ಲಾ ಪೊಲೀಸ್ ಮೈದಾನದಲ್ಲಿ (ಎಸ್‌ಪಿ ಗ್ರೌಂಡ್) ಏರ್ಪಡಿಸಲಾಗಿದೆ. ಚಾ.ನಗರ, ಯಳಂದೂರು, ಕೊಳ್ಳೇಗಾಲ, ಹನೂರು, ಗುಂಡ್ಲುಪೇಟೆ ತಾಲೂಕಿನ ಎಲ್ಲಾ ವಿದ್ಯಾರ್ಥಿನಿಯರು ಹಾಗೂ ಸಂಘ–ಸಂಸ್ಥೆಗಳ ಯುವತಿಯರು, ಮಹಿಳೆಯರು ಕ್ರೀಡಾಕೂಟದಲ್ಲಿ ಭಾಗವಹಿಸಬಹುದು. ಆಸಕ್ತರು ಮಾ.21ರ ಬೆಳಗ್ಗೆ 9 ಗಂಟೆಯೊಳಗೆ ವ್ಯವಸ್ಥಾಪಕರಲ್ಲಿ ವರದಿ ಮಾಡಿಕೊಳ್ಳಬೇಕು. ಮಾಹಿತಿಗೆ ದೂ.ಸಂ: 08226–224932 ಅಥವಾ ಮೊ.ಸಂ: 9916466659, 9844160841 ಅನ್ನು ಸಂಪರ್ಕಿಸಬಹುದು.



ಚಾಮರಾಜನಗರ ತಾಲೂಕಿನ ಮಂಗಲದ ಬೀರೇಶ್ವರ ದೇವಸ್ಥಾನಕ್ಕೆ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಭೇಟಿ ನೀಡಿ, ದೇವರ ದರ್ಶನ ಪಡೆದರು. ಮುಖಂಡರಾದ ಮಂಗಲ ಶಿವಕುಮಾರ್, ಆರ್.ಸುಂದರ್, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ನಾರಾಯಣ್ ಪ್ರಸಾದ್, ಉಪಾಧ್ಯಕ್ಷ ಶಿವು ವಿರಾಟ್, ತಾಲೂಕು ಗ್ರಾಮಾಂತರ ಮಂಡಲ ಅಧ್ಯಕ್ಷ ಬೇಡರಪುರ ಬಸವಣ್ಣ, ಸೋಮಣ್ಣ ಇತರರಿದ್ದರು.

ಮಾದೇಶ್ವರರ ಸಾಹಿತ್ಯಿಕ ನೆಲೆಗಳ ಹುಡುಕಾಟ ಗ್ರಂಥ ವಿಶ್ಲೇಷಣೆ



ಮಾದೇಶ್ವರರ ಸಾಹಿತ್ಯಿಕ ನೆಲೆಗಳ ಹುಡುಕಾಟ ಗ್ರಂಥ ವಿಶ್ಲೇಷಣೆ ಹಾಗೂ ವ್ಯಕ್ತಿತ್ವ ವಿಕಸನ ಕುರಿತ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ಚಾಮರಾಜನಗರ, ಮಾ.19– ಪ್ರೊ.ಎಸ್.ಶಿವರಾಜಪ್ಪ ಅವರ ಮಾದೇಶ್ವರರ ಸಾಹಿತ್ಯಿಕ ನೆಲೆಗಳ ಹುಡುಕಾಟ ಗ್ರಂಥದಲ್ಲಿ ಮಹದೇಶ್ವರರನ್ನು ಸಮಾಜ ಸುಧಾರಕರನ್ನಾಗಿಸಿದ್ದು, ಇದು ವ್ಯಕ್ತಿತ್ವ ವಿಕಸನಕ್ಕೂ ಆದರ್ಶವಾಗಿದೆ ಎಂದು ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಬಿ.ಎಸ್.ವಿನಯ್ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಭಾಂಗಣದಲ್ಲಿ ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠ, ಚಾಮರಾಜನಗರ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ ಹಾಗೂ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಪ್ರೊ.ಎಸ್.ಶಿವರಾಜಪ್ಪ ಅವರ ಮಾದೇಶ್ವರರ ಸಾಹಿತ್ಯಿಕ ನೆಲೆಗಳ ಹುಡುಕಾಟ ಗ್ರಂಥ ವಿಶ್ಲೇಷಣೆ ಹಾಗೂ ವ್ಯಕ್ತಿತ್ವ ವಿಕಸನ ಕುರಿತ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರೊ.ಎಸ್.ಶಿವರಾಜಪ್ಪ ಅವರು ಮಾದಪ್ಪನ ಕಾಡಿನವರು. ಆದ್ದರಿಂದ ಸಂಶೋಧನೆ ಮೂಲಕ ಮಹದೇಶ್ವರರ ಇತಿಹಾಸದ ನೆಲೆಯನ್ನು ಹುಡುಕಿ ನಿಖರವಾಗಿ ಜನಪದ ಕಾವ್ಯದ ಮೂಲಕ ಸತ್ಯ ಸಂಗತಿಯನ್ನು ಹುಡುಕಿಕೊಟ್ಟಿದ್ದಾರೆ ಎಂದರು.

ಮಹದೇಶ್ವರ ಜನಪದ ಕಾವ್ಯ ಅತಿ ದೊಡ್ಡ ಮಹಾಕಾವ್ಯ ಇದು ವಿಶ್ವಮಟ್ಟದಲ್ಲಿ ಎರಡನೇ ಕಾವ್ಯ. ಇದನ್ನು ಸಮಗ್ರವಾಗಿ ಅಧ್ಯಯನ ಮಾಡಿದರೆ ಪ್ರಪಂಚದ ಮೊದಲ ಕಾವ್ಯ ವಾಗುತ್ತದೆ. ಮಹದೇಶ್ವರ, ಮಂಟೇಸ್ವಾಮಿ, ಬಿಳಿಗಿರಿರಂಗನಾಥ ಮೂರು ಜಾನಪದ ಮಹತ್ವದ ಕಾವ್ಯಗಳು ಚಾಮರಾಜನಗರ ಜಿಲ್ಲೆಯ ಒಂದು ಪ್ರದೇಶದಲ್ಲೇ ಹುಟ್ಟಿರುವುದು ಹೆಮ್ಮೆಯ ವಿಚಾರ ಎಂದರು.

ಪ್ರೊ.ಎಸ್.ಶಿವರಾಜಪ್ಪ ಮಾತನಾಡಿ, ಚಾಮರಾಜನಗರ ಜಿಲ್ಲೆ ಬೆಲ್ಲದ ಅಚ್ಚು ಇದ್ದಂತೆ ಯಾವ ಭಾಗ ತಿಂದರೂ ಸಿಹಿಯಾಗಿರುತ್ತದೆ. ಅಂತಹ ಸೊಗಡು ಈ ಭಾಗದ ಜನರಲ್ಲಿ ಇದೆ ಎಂದು ತಿಳಿಸಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ದುಗ್ಗಹಟ್ಟಿ ಮಲ್ಲಿಕಾರ್ಜುನಸ್ವಾಮಿ ಇತರರಿದ್ದರು.

ಒಂದನೇ ಪುಟದಿಂದ

ಕುಡಿಯಲು ಸಾಕಾಗುವಷ್ಟು ನೀರಿದೆ

ಟ್ಯಾಂಕರ್‌ಗಳನ್ನು ಬಾಡಿಗೆಗೆ ಪಡೆದು ಬಳಸಿಕೊಳ್ಳಲು ಸೂಚನೆ ನೀಡಲಾಗಿದೆ ಎಂದರು. ಕಾವೇರಿ, ಕಬಿನಿಯಲ್ಲಿ ಜೂನ್ ಅಂತ್ಯದವರೆಗೂ ಸಾಕಾಗುವಷ್ಟು ನೀರನ್ನು ಸಂಗ್ರಹಿಸಿಟ್ಟಿದ್ದೇವೆ. ಕೆಆರ್‌ಎಸ್‌ನಲ್ಲಿ 11.02, ಕಬಿನಿಯಲ್ಲಿ 9.02 ಟಿಎಂಸಿ ನೀರು ಸಂಗ್ರಹವಿದೆ. ಜೂನ್ ಅಂತ್ಯಕ್ಕೆ ಕಾವೇರಿ 5ನೇ ಹಂತದ ಕಾಮಗಾರಿ ಮುಕ್ತಾಯವಾಗಿ 775 ಎಂಎಲ್‌ಡಿ ಹೆಚ್ಚುವರಿ ನೀರು ಸಿಗಲಿದೆ. ಇದು 110 ಹಳ್ಳಿಗಳಿಗೆ ಸರಬರಾಜು ಆಗಲಿದೆ.

ದಿನಕ್ಕೆ 2,600 ಮಿಲಿಯನ್ ಲೀಟರ್ (ಎಂಎಲ್‌ಡಿ) ನೀರಿನ ಅವಶ್ಯಕತೆ ಇರುವುದರಿಂದ, ಪ್ರಸ್ತುತ ಬಿಡಬ್ಲ್ಯುಎಸ್‌ಎಸ್‌ಬಿ ಕಾವೇರಿ ಮಾರ್ಗಗಳ ಮೂಲಕ 1,470 ಎಂಎಲ್‌ಡಿ ಮತ್ತು ಬೋರ್‌ವೆಲ್‌ಗಳ ಮೂಲಕ 650 ಎಂಎಲ್‌ಡಿ ಪೂರೈಸಲಾಗುತ್ತಿದೆ. ಅದಾಗ್ಯೂ 500 ಎಂಎಲ್‌ಡಿ ನೀರು ಕೊರತೆ ಇದೆ. ಈ ಕೊರತೆ ನೀಗಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ನೀರಿನ ದುರುಪಯೋಗ ತಡೆಗಟ್ಟಲು ಸೂಚಿಸಲಾಗಿದ್ದು, ಈ ಬಗ್ಗೆ 143 ಟಾಸ್ಕ್ ಫೋರ್ಸ್ ಗಳು ಕಾರ್ಯ ನಿರ್ವಹಿಸುತ್ತಿವೆ. ಈ ಪ್ರಮಾಣ ಹೆಚ್ಚಿಸಲು ಸೂಚನೆ ನೀಡಲಾಗಿದೆ. ಕೇಂದ್ರೀಯ ಸಹಾಯವಾಣಿ ಸಂಖ್ಯೆ 1916 ಹಾಗೂ ವಾಟ್ಸಾಪ್ ಮೂಲಕ ದೂರು ದಾಖಲಿಸಬಹುದು. ಈ ದೂರುಗಳನ್ನು ಕೂಡಲೇ ಬಗೆಹರಿಸಬೇಕು ಎಂದು ಸೂಚಿಸಲಾಗಿದೆ. ಬೆಂಗಳೂರು ನಗರದ ಪ್ರಮುಖ ಕೆರೆಗಳಿಗೆ ಸಂಸ್ಕರಿಸಿದ ನೀರು ತುಂಬಿಸುವ ಮೂಲಕ ಅಂತರ್ಜಲ ಮಟ್ಟ ಹೆಚ್ಚಿಸಲು ಸೂಚಿಸಲಾಗಿದೆ ಎಂದು ತಿಳಿಸಿದರು.

ಇಂದು ಕಾಂಗ್ರೆಸ್ 2ನೇ ಪಟ್ಟಿ ಪ್ರಕಟ

ಕ್ಷೇತ್ರಗಳನ್ನು ಬಿಟ್ಟು ಉಳಿದೆಲ್ಲಾ ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ನಾಳೆ ಹೊರಬೀಳಲಿದೆ. ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ವರಿಷ್ಠರೊಂದಿಗೆ ಚರ್ಚಿಸಲು ಮತ್ತು ಸಭೆಯಲ್ಲಿ ಭಾಗವಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿಗೆ ತೆರಳಿದ್ದಾರೆ. ಪಕ್ಷದ ಸಂಸದೀಯ ಮಂಡಳಿ ಸಭೆಗೂ ಮುನ್ನ ಉಭಯ ನಾಯಕರು ಪಕ್ಷದ ಮುಖಂಡರೊಂದಿಗೆ ಪ್ರತ್ಯೇಕವಾಗಿ ಚರ್ಚೆ ಮಾಡಿದ್ದಾರೆ. ರಾಜ್ಯ ಚುನಾವಣಾ ಸಮಿತಿ ನೀಡಿರುವ ವರದಿ ಹಾಗೂ ಚುನಾವಣಾ ಸಮೀಕ್ಷೆ ವರದಿಗಳನ್ನು ಆಧಾರವಾಗಿ ಇಟ್ಟುಕೊಂಡು ಗೆಲ್ಲುವ ಅಭ್ಯರ್ಥಿಗಳ ಆಯ್ಕೆ ನಡೆದಿದೆ. ಕರ್ನಾಟಕದವರೇ ಆದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ರಾಜ್ಯ ರಾಜಕೀಯದ ಉದ್ದ, ಆಳ, ಅಗಲದ ಅರಿವಿರುವುದರಿಂದ, ಅವರು ತಮ್ಮ ಪಕ್ಷದ ಮುಖಂಡರನ್ನು ನಿಭಾಯಿಸಿ ರಾಜ್ಯದ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಆಯ್ಕೆ ಮಾಡಲಿದ್ದಾರೆ. ಎಲ್ಲದಕ್ಕೂ ಮಿಗಿಲಾಗಿ ಕರ್ನಾಟಕದಲ್ಲಿ ಅತೀ ಹೆಚ್ಚು ಸ್ಥಾನ ಗೆಲಿಸುವುದು ಎಐಸಿಸಿ ಅಧ್ಯಕ್ಷರೂ ಆಗಿರುವ ಖರ್ಗೆ ಅವರಿಗೆ ಪ್ರತಿಷ್ಠೆಯಾಗಿದೆ. ಇದರ ನಡುವೆ ಬಿಜೆಪಿಯಲ್ಲಿ ಟಿಕೆಟ್ ಸಿಗದ 10ಕ್ಕೂ ಹೆಚ್ಚು ಮುಖಂಡರು ಹಾಗೂ ಹಾಲಿ ಸಂಸದರು ಕಾಂಗ್ರೆಸ್ ಟಿಕೆಟ್ ಪಡೆಯಲೆತ್ನಿಸಿ ತೆರೆಮರೆಯಲ್ಲಿ ಭಾರಿ ಲಾಬಿ ನಡೆಸಿದ್ದಾರೆ. ಸಿದ್ದರಾಮಯ್ಯ, ಶಿವಕುಮಾರ್ ಅವರ ಹೆಚ್ಚು ವಿಶ್ವಾಸ ಯಾರಿಗಿದೆಯೋ ಅಂತಹವರ ಮೂಲಕ ಟಿಕೆಟ್ ಪಡೆಯುವ ಪ್ರಯತ್ನ ಮಾಡಿದ್ದಾರೆ.

ಮೈತ್ರಿಗೆ ಯಾವುದೇ ಧಕ್ಕೆ ಇಲ್ಲ

ವರಿಷ್ಠರ ಜೊತೆ ಚರ್ಚಿಸಿ ಸಮಸ್ಯೆ ಪರಿಹರಿಸುವುದಾಗಿ ತಿಳಿಸಿದ್ದಾರೆ. ನಾವು ಮೂರು ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತೇವೆ, ಬಿಜೆಪಿ ಬೆನ್ನೆಲುಬಾಗಿ ನಿಲ್ಲುತ್ತೇವೆ, ನಮಗಾಗಿರುವ ಅಸಮಾಧಾನವನ್ನು ಹೇಳಿದ್ದೇನೆ, ಎಲ್ಲವೂ ಸರಿ ಹೋಗಲಿದೆ. ಶಿವಕುಮಾರ್ ಅಂತಹವರಿಂದ ನನಗೆ, ನನ್ನ ಕಾರ್ಯಕರ್ತರಿಗೆ ಭುಜ ಬಲದ ಅಗತ್ಯವಿಲ್ಲ ಎಂದರು.

ಬೆಂಗಳೂರು ಗ್ರಾಮಾಂತರ ಲೋಕಸಭೆ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಿಂದ ಚುನಾವಣಾ ಅಕ್ರಮಗಳು ಅವ್ಯಾಹತವಾಗಿ ನಡೆಯುತ್ತಿದ್ದು, ಕೂಡಲೇ ಈ ಬಗ್ಗೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಚುನಾವಣಾ ಆಯೋಗವನ್ನು ಒತ್ತಾಯ ಮಾಡಿದರು. ಪಾರದರ್ಶಕ ಚುನಾವಣೆ ನಡೆಸುವ ಸಲುವಾಗಿ ಕೂಡಲೇ ಈ ಕ್ಷೇತ್ರದಲ್ಲಿ ಅರೆಸೇನಾ ಪಡೆ ತುಕಡಿಗಳನ್ನು ನಿಯೋಜಿಸಬೇಕು ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರನ್ನು ಆಗ್ರಹಪಡಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಸುರೇಶ್ ನಡೆಸುತ್ತಿರುವ ಅಕ್ರಮಗಳಿಗೆ ಮೌನ ಸಹಕಾರ ನೀಡುತ್ತಿರುವ ಈ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಸಿಇಒ ಅವರನ್ನು ತಕ್ಷಣವೇ ವರ್ಗಾವಣೆ ಮಾಡಬೇಕು ಎಂದು ಆಯೋಗವನ್ನು ಕುಮಾರಸ್ವಾಮಿ ಅವರು ಒತ್ತಾಯ ಮಾಡಿದರು.

ಕರ್ನಾಟಕದಲ್ಲಿ ಚುನಾವಣೆ ಆಯೋಗ ಇದೆಯಾ, ಕೇಂದ್ರ ಚುನಾವಣಾ ಆಯೋಗ ಏನು ಮಾಡುತ್ತಿದೆ, ಚುನಾವಣೆ ಘೋಷಣೆಯಾದ ನಂತರ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಏನು ನಡೆಯುತ್ತಿದೆ ಎನ್ನುವುದು ಆಯೋಗಕ್ಕೆ ಗೊತ್ತಿಲ್ಲವೇ, ಆಯೋಗದ ಸಿಬ್ಬಂದಿ ಏನು ಮಾಡುತ್ತಿದ್ದಾರೆ?, ಭಾನುವಾರ ರಾತ್ರಿ ಈ ಕ್ಷೇತ್ರದಲ್ಲಿ ಏನು ನಡೆದಿದೆ ಎನ್ನುವುದನ್ನು ಆಯೋಗ ನೋಡಬೇಕು ಎಂದು ಒತ್ತಾಯ ಮಾಡಿದರು.

ಚುನಾವಣಾ ದಿನಾಂಕ ಘೋಷಣೆಯಾದ ದಿನದಿಂದ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಚುನಾವಣಾ ಅಕ್ರಮಗಳು ಮಿತಿಮೀರಿವೆ. ಕುಕ್ಕರ್ ಮತ್ತು ಹಣವನ್ನು ಅವ್ಯಾಹತವಾಗಿ ಹಂಚಲಾಗುತ್ತಿದೆ. ಮರಳವಾಡಿಯಲ್ಲಿ ಮತದಾರರಿಗೆ ಹಂಚಲು ಇರಿಸಿದ್ದ ಕುಕ್ಕರ್‌ಗಳನ್ನು ಲೋಡ್ ಮಾಡಲಾಗಿದ್ದ ಎರಡು ಲಾರಿಗಳನ್ನು ಜೆಡಿಎಸ್ ಕಾರ್ಯಕರ್ತರು ಹಿಡಿದಿದ್ದಾರೆ. ಮಾಧ್ಯಮಗಳು ಅದನ್ನು ತೋರಿಸಿವೆ.

ಬಿಜೆಪಿ–ಜೆಡಿಎಸ್ ಮೈತ್ರಿ ಸುಸೂತ್ರ

ವಿಶ್ವಾಸವಿದೆ, ಚರ್ಚೆಯಿಂದ ವಿಷಯ ಬಗೆಹರಿಯಲಿದೆ ಎಂದರು. ರಾಜ್ಯ ಬಿಜೆಪಿ ಅಭ್ಯರ್ಥಿಗಳ ಮೊದಲನೇ ಪಟ್ಟಿ ಬಿಡುಗಡೆ ಆಗಿದೆ, ಎರಡನೇ ಪಟ್ಟಿ ಸದ್ಯದಲ್ಲೇ ಬಿಡುಗಡೆ ಆಗಲಿದೆ. ಟಿಕೆಟ್ ನೀಡಿಕೆ ವಿಚಾರದಲ್ಲಿ ಪಕ್ಷದ ಹೈಕಮಾಂಡ್ ನಿರ್ಧಾರವೇ ಅಂತಿಮ ಎಂದು ಸ್ಪಷ್ಟಪಡಿಸಿದರು. ಪಕ್ಷದ ರಾಷ್ಟ್ರೀಯ ನಾಯಕರ ಜೊತೆ ನಿನ್ನೆ ದೂರವಾಣಿ ಮೂಲಕ ಚರ್ಚೆ ಮಾಡಿದ್ದು, ಬಳಿಕ ಮಾಜಿ ಪ್ರಧಾನಿ ದೇವೇಗೌಡ ಅವರೊಂದಿಗೂ ಚರ್ಚಿಸಲಾಗಿದೆ, ಜೆಡಿಎಸ್ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರಿಗೂ ಮಾಹಿತಿ ನೀಡಿದ್ದೇನೆ. ಹಲವು ವಿಚಾರಗಳ ಕುರಿತು ಪಕ್ಷದ ವರಿಷ್ಠರು ಮತ್ತು ಜೆಡಿಎಸ್ ವರಿಷ್ಠರೊಂದಿಗೆ ಚರ್ಚಿಸಿದ್ದಾರೆ, ಮಾತುಕತೆ ಇನ್ನೂ ಮುಂದುವರಿದಿದೆ, ಎಲ್ಲವೂ ಸುಸೂತ್ರ ಕಾಣಲಿದೆ.

ಕೆ.ಎಸ್.ಈಶ್ವರಪ್ಪ ಪಕ್ಷದ ಹಿರಿಯ ನಾಯಕರು, ಕೆಲವು ತಪ್ಪು ಮಾಹಿತಿಗಳು ಅವರಿಗೆ ತಲುಪಿವೆ, ಅದ್ದರಿಂದ ಸಾರ್ವಜನಿಕ ವಲಯದಲ್ಲಿ ಹಲವು ರೀತಿಯ ಚರ್ಚೆಗಳು ನಡೆಯುತ್ತಿವೆ, ಅವರಿಗೆ ಸತ್ಯ ಅರ್ಥ ಆದ ಮೇಲೆ ಸಮಸ್ಯೆ ಬಗೆಹರಿಯುವ ವಿಶ್ವಾಸ ಇದೆ. ಕಳೆದ ಒಂದು ವಾರದ ರಾಜಕೀಯ ವಿದ್ಯಮಾನಗಳನ್ನು ಅವಲೋಕಿಸಿದರೆ, ಕಾಂಗ್ರೆಸ್ ಮುಖಂಡರಿಗೆ ಅವರ ನಾಯಕರಿಗಿಂತ ಬಿಜೆಪಿ ಮುಖಂಡರ ಬಗ್ಗೆ ಹೆಚ್ಚು ವಿಶ್ವಾಸ ಇದ್ದಂತಿದೆ, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಅವರು ಬಿಜೆಪಿಯಲ್ಲೇ ಇರುತ್ತಾರೆ ಎಂದರು. ರಾಜ್ಯದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಜನಪ್ರಿಯತೆ ದಿನೇ ದಿನೆ ಎತ್ತರಕ್ಕೆ ಬೆಳೆಯುತ್ತಿರುವುದು ಚುನಾವಣಾ ರಣಭೂಮಿಯಲ್ಲಿರುವ ಪಕ್ಷದ ಕಾರ್ಯಕರ್ತರಿಗೆ ಉತ್ಸಾಹ ತಂದುಕೊಟ್ಟಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಶಿವಮೊಗ್ಗ ಪ್ರವಾಸ ಹಾಗೂ ಸಾರ್ವಜನಿಕ ಸಮಾವೇಶ ಯಶಸ್ವಿಯಾಗಿದೆ, ಒಂದು ವಾರದ ಅಂತರದಲ್ಲಿ ಇಷ್ಟು ದೊಡ್ಡ ಸಮಾವೇಶ ಆಯೋಜಿಸಿರುವುದಕ್ಕೆ ಮೆಚ್ಚುಗೆ ಸೂಚಿಸಿದ್ದಾರೆ, ಶಿವಮೊಗ್ಗ, ಕಲಬುರಗಿ ಕಾರ್ಯಕ್ರಮಗಳ ಕುರಿತು ಸ್ವತಃ ಪ್ರಧಾನಿ ಅವರು ಸಂತಸ ವ್ಯಕ್ತಪಡಿಸಿದ್ದಾರೆ ಎಂದರು.

ಮೈಸೂರಿನ ಇಬ್ಬರು ದುರ್ಮರಣ

ಸಾರ್ವಜನಿಕರ ಸಹಾಯದಿಂದ ಶಾದ್‌ನಗರದ ಸಂಚಾರ ಪೊಲೀಸರು, ಖಾಸಗಿ ಆಸ್ಪತ್ರೆಗೆ ದಾಖಲಿಸಿದರು. ಎಲ್ಲಾ ನಾಲ್ವರೂ ತೀವ್ರ ಚಿಕಿತ್ಸಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರಾದರೂ, ಮದನ್‌ಕುಮಾರ್ ಪರಿಸ್ಥಿತಿ ಚಿಂತಾಜನಕವಾಗಿದ್ದು, ಸಾವು–ಬದುಕಿನ ನಡುವೆ ಹೋರಾಡುತ್ತಿದ್ದಾರೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ. ವಿಶ್ವನಾಥನ್ ಐಯ್ಯರ್, ರಘುರಾಂ ಮತ್ತು ಶ್ರೀರಾಂ ಅವರು ಚೇತರಿಸಿಕೊಳ್ಳುತ್ತಿದ್ದು, ಪ್ರಾಣಾಪಾಯದಿಂದ ಪಾರಾಗುವರು. ಇಂದು ಸಂಜೆ ಈ ಮೂವರನ್ನು ಐಸಿಯುನಿಂದ ತುರ್ತು ಚಿಕಿತ್ಸಾ ವಾರ್ಡ್‌ಗೆ ಶಿಫ್ಟ್ ಮಾಡಲಾಯಿತು ಎಂದು ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ. ಮಾಹಿತಿ ತಿಳಿಯುತ್ತಿದ್ದಂತೆಯೇ ಸಂಬಂಧಿಕರು ಮೈಸೂರಿನಿಂದ ಸೋಮವಾರ ರಾತ್ರಿ ಹೊರಟು, ಇಂದು ಬೆಳಗ್ಗೆ ಶಾದ್‌ನಗರ ತಲುಪಿದರು. ಇಂದು ಮಧ್ಯಾಹ್ನ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ದೇಹಗಳನ್ನು ವಾರಸುದಾರರಿಗೆ ಒಪ್ಪಿಸಲಾಗಿದ್ದು, ತಡರಾತ್ರಿ ಮೈಸೂರಿಗೆ ತಲುಪುವ ಸಾಧ್ಯತೆ ಇದೆ. ನಾಳೆ (ಮಾ. 20) ಬೆಳಗ್ಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಅಭ್ಯರ್ಥಿ ಸಾಧ್ಯತೆ

ಶಾಸಕ ದರ್ಶನ್ ಧ್ರುವನಾರಾಯಣ್ ಸೇರಿದಂತೆ ಕೆಲ ಮುಖಂಡರ ಹೆಸರೂ ಚರ್ಚೆಯಾಗುತ್ತಿತ್ತು. ಇದೀಗ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಂಡಿದೆ ಎನ್ನಲಾಗಿದ್ದು, ಮೈಸೂರು–ಕೊಡಗು ಕ್ಷೇತ್ರದಲ್ಲಿ ಈಗಾಗಲೇ ಪ್ರಚಾರದಲ್ಲಿ ನಿರತರಾಗಿರುವ ಬಿಜೆಪಿ ಅಭ್ಯರ್ಥಿ ಯದುವೀರ್ ವಿರುದ್ಧ ಎಂ.ಲಕ್ಷ್ಮಣ್ ಹಾಗೂ ಚಾಮರಾಜನಗರದಲ್ಲಿ ಬಿಜೆಪಿಯ ಎಸ್.ಬಾಲರಾಜ್ ವಿರುದ್ಧ ಸುನೀಲ್ ಬೋಸ್ ಕಣಕ್ಕಿಳಿಯುವುದು ಬಹುತೇಕ ಖಚಿತ ಎನ್ನಲಾಗಿದೆ.

ಮೈಸೂರು ಜಿಲ್ಲೆಯಲ್ಲಿ 77,498 ಮಂದಿ ಅಂಚೆ ಮತದಾನಕ್ಕೆ ಅರ್ಹರು

● ಈ ಬಾರಿ 85 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಅಂಚೆ ಮತದಾನದ ಸೌಲಭ್ಯ ● ಶತಾಯುಷಿ 1,994, 85ರಿಂದ 99 ವರ್ಷದ 41,617 ಹಾಗೂ 33,887 ವಿಶೇಷಚೇತನ ● ಮತಗಟ್ಟೆಗೆ ಮತ ಹಾಕುವುದರಿಂದ ಹಿರಿಯ ನಾಗರಿಕರು, ವಿಶೇಷಚೇತನರಿಗೆ ವಿನಾಯಿತಿ

ಮೈಸೂರು, ಮಾ.19(ಎಂಟಿವೈ)– ಲೋಕಸಭಾ ಚುನಾವಣೆಯಲ್ಲಿ ಮನೆಯಲ್ಲೇ ಮತದಾನ ಮಾಡಲು 85 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಹಾಗೂ ವಿಶೇಷಚೇತನರಿಗೆ ಅಂಚೆಪತ್ರ ವಿತರಿಸಲು ಕ್ರಮ ಕೈಗೊಳ್ಳಲಾಗಿದ್ದು, ಮೈಸೂರು ಜಿಲ್ಲೆಯಲ್ಲಿ 77,498 ಮಂದಿಗೆ ಅಂಚೆ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿಯ ವಿಡಿಯೋ ಕಾನ್ಫರೆನ್ಸ್ ಸಭಾಂಗಣದಲ್ಲಿ ಅಂಚೆ ಮತಪತ್ರ ವಿತರಣೆ ಸಂಬಂಧ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಕಳೆದ ವಿಧಾನಸಭಾ ಚುನಾವಣೆಯಲ್ಲಿ 80 ವರ್ಷ ಮೇಲ್ಪಟ್ಟವರಿಗೆ ಅಂಚೆ ಮತದಾನಕ್ಕೆ ಅವಕಾಶ ನೀಡಲಾಗಿತ್ತು. ಈ ಬಾರಿ 85 ವರ್ಷ ಮೇಲ್ಪಟ್ಟವರಿಗೆ ಅವಕಾಶ ನೀಡಲು ನಿರ್ಧರಿಸಲಾಗಿದೆ. ಈ ಅಂಶವನ್ನು ಮನವರಿಕೆ ಮಾಡಿಕೊಡಬೇಕು. ಕೆಲವರು ಜನ್ಮ ದಿನಾಂಕ ಸರಿಯಾಗಿ ನೋಂದಣಿ ಮಾಡಿರದೇ ಇರುವವರೂ ಇರುತ್ತಾರೆ. ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ 85 ವರ್ಷ ವಯಸ್ಸಾಗಿದ್ದರೂ, ಮತಚೀಟಿಯಲ್ಲಿ ವಯಸ್ಸು ಕಡಿಮೆ ನಮೂದಾಗಿರುತ್ತದೆ. ಇಂತಹ ಪ್ರಕರಣವನ್ನು ಗುರುತಿಸಿ ಅವಕಾಶ ಮಾಡಿಕೊಡುವಂತೆ ಸಲಹೆ ನೀಡಿದರು.

ಮತಗಟ್ಟೆಗೆ ಬರುವವರ ಪ್ರೋತ್ಸಾಹಿಸಿ: ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳ ಮತದಾರರ ಒಟ್ಟು ಸಂಖ್ಯೆಯಲ್ಲಿ ಶತಾಯುಷಿಗಳು 1,994, 85ರಿಂದ 99 ವರ್ಷದ ಹಿರಿಯ ನಾಗರಿಕರು 41,617 ಹಾಗೂ 33,887 ಮಂದಿ ವಿಶೇಷಚೇತನರ ಪಟ್ಟಿ ಸಿದ್ಧಪಡಿಸಲಾಗಿದೆ. ಅಂಚೆ ಮತಪತ್ರ ಪಡೆದು ಮನೆಯಿಂದಲೇ ಮತದಾನ ಮಾಡಲು ನೋಂದಣಿ ಮಾಡಿಕೊಂಡರೆ, ಮತಗಟ್ಟೆಗೆ ಬಂದು ಮತ ಚಲಾವಣೆ ಸಾಧ್ಯವಿಲ್ಲ. ಈ ಅಂಶವನ್ನು ಮನವರಿಕೆ ಮಾಡಿಕೊಡಬೇಕು. ಕೆಲವರು ಮತಗಟ್ಟೆಗೆ ಬಂದು ಮತ ಚಲಾಯಿಸುವ ಇಂಗಿತ ವ್ಯಕ್ತಪಡಿಸಿದರೆ, ಅಂತಹವರಿಗೆ ಪ್ರೋತ್ಸಾಹ ನೀಡಬೇಕು ಎಂದು ತಿಳಿಸಿದರು.

ಅಂಚೆಮತ ಪತ್ರಗಳ ವಿತರಣಾ ಕಾರ್ಯವನ್ನು ಅತ್ಯಂತ ವ್ಯವಸ್ಥಿತವಾಗಿ ಗೊಂದಲಗಳಿಗೆ ಆಸ್ಪದ ನೀಡದಂತೆ ಕೈಗೊಳ್ಳಬೇಕು. 85 ವರ್ಷ ಮೇಲ್ಪಟ್ಟವರು, ವಿಕಲಚೇತನರು ಮತ್ತು ಕೋವಿಡ್ ಪೀಡಿತರಿಗೆ ಮತಪತ್ರ ಕುರಿತು ಮಾಹಿತಿ ನೀಡಬೇಕು. ಅರ್ಹರ ಮನೆಗಳಿಗೆ ಭೇಟಿ ನೀಡಿ, 12 ಡಿ–ಫಾರಂ ವಿತರಿಸಿ, ಒಪ್ಪಿಗೆ ಪತ್ರ ಪಡೆಯುವಂತೆ ಸೂಚಿಸಿದರು.

ಡಿ–ಫಾರಂ ವಿತರಿಸಿ: ಅಂಚೆ ಮತ ಪತ್ರ ಪಡೆಯಲು 12 ಡಿ–ಫಾರಂ ಚುನಾವಣಾ ವೆಬ್‌ಸೈಟ್‌ನಲ್ಲಿ ಲಭ್ಯವಿದ್ದು, ಆನ್‌ಲೈನ್ ಫಾರಂ ಡೌನ್‌ಲೋಡ್ ಮಾಡಿಕೊಳ್ಳಬಹುದು. 85 ವರ್ಷ ಮೇಲ್ಪಟ್ಟವರು ಹಾಗೂ ಶೇ.40ರಷ್ಟು ಅಂಗವೈಕಲ್ಯ ಹೊಂದಿದವರಿಗೆ ಮತದಾರರ ವಿವರಗಳನ್ನು ಒಳಗೊಂಡ ಪಟ್ಟಿಯನ್ನು ನೀಡಲಾಗಿದೆ. ಇಂದಿನಿಂದಲೇ ಸೆಕ್ಟರ್ ಅಧಿಕಾರಿಗಳು, ಮತಗಟ್ಟೆ ಅಧಿಕಾರಿಗಳೊಂದಿಗೆ ಮನೆ ಮನೆಗೆ ಭೇಟಿ ನೀಡಿ 12 ಡಿ–ಫಾರಂ ವಿತರಿಸಬೇಕು. ಪ್ರತಿ ದಿನ ಫಾರಂ ವಿತರಣೆ ಮಾಡಿರುವ ಅಂಕಿಅಂಶಗಳ ಮಾಹಿತಿ ನೀಡಬೇಕು. ವಿತರಿಸಲಾದ ಅಂಚೆ ಪತ್ರ ಫಾರಂಗಳನ್ನು ಮಾ.25ರೊಳಗಾಗಿ ಮತಗಟ್ಟೆ ಅಧಿಕಾರಿಗಳಿಗೆ ಸಲ್ಲಿಸಬೇಕು. ಆ ನಂತರ ಬಂದ ಫಾರಂಗಳನ್ನು ಪರಿಗಣಿಸುವುದಿಲ್ಲ ಎಂದು ತಿಳಿಸಿದರು.

ಮತದಾನದಿಂದ ವಂಚಿತರಾಗಬಾರದು: ಸಾರ್ವತ್ರಿಕ ಚುನಾವಣೆಗಳಲ್ಲಿ ಮತದಾರರು ಮತಗಟ್ಟೆಗೆ ಹೋಗಿ ಹಕ್ಕು ಚಲಾಯಿಸಿದಾಗ ಮಾತ್ರ 'ಮತದಾನ ಹಬ್ಬ' ಎನಿಸಿಕೊಳ್ಳುತ್ತದೆ. ಸಾಧ್ಯವಾದಷ್ಟು ಮತಕೇಂದ್ರಗಳಿಗೆ ಹೋಗಿ ಮತದಾನ ಮಾಡಲು ಜನರನ್ನು ಪ್ರೇರೇಪಿಸಬೇಕು. ಮತ ಕೇಂದ್ರಕ್ಕೆ ಬರಲು ಆಗದವರಿಗೆ ಅಂಚೆ ಮತಪತ್ರ ಕಡ್ಡಾಯವಾಗಿ ವಿತರಿಸಬೇಕು. ಚುನಾವಣಾ ಪ್ರಕ್ರಿಯೆಯಲ್ಲಿ ತೊಡಗಿರುವವರು ಹಾಗೂ ಅಗತ್ಯ ಸೇವೆಗಳಲ್ಲಿ ತೊಡಗಿರುವ ಎಲ್ಲಾ ನೌಕರರಿಗೆ ಈ ಸೌಲಭ್ಯ ಲಭ್ಯವಿದೆ. ಎಲ್ಲರೂ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು. ಚುನಾವಣಾ ಆಯೋಗದ ಸೂಚನೆಯಂತೆ ನಿಗದಿತ ದಿನಾಂಕದೊಳಗೆ ಅಂಚೆ ಮತಪತ್ರ ವಿತರಣೆ ಮತ್ತು ಒಪ್ಪಿಗೆ ಪತ್ರಗಳನ್ನು ಸಂಗ್ರಹಿಸಬೇಕು. ಯಾವುದೇ ಅರ್ಹ ಮತದಾರರು ಈ ಸೌಲಭ್ಯದಿಂದ ವಂಚಿತರಾಗದಂತೆ ಎಚ್ಚರ ವಹಿಸುವಂತೆ ಸಲಹೆ ನೀಡಿದರು.

ಸಭೆಯಲ್ಲಿ ಸಹಾಯಕ ಚುನಾವಣಾಧಿಕಾರಿಗಳು, ಸೆಕ್ಟರ್ ಅಧಿಕಾರಿಗಳಾದ ಚುನಾವಣಾ ತಹಶೀಲ್ದಾರ್ ಕರ್ನಲ್ ಅಶೋಕ್‌ಕುಮಾರ್, ಎಆರ್‌ಸಿ ಕವಿತಾ ರಾಜಾರಾಮ್, ಆದಾಯ ತೆರಿಗೆ ಇಲಾಖೆ ಅಧಿಕಾರಿ ಗೋವಿಂದ್ ಸಿಂಗ್ ಯಾದವ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಚಂದ್ರಶೇಖರ್, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಂಶೋಧನಾಧಿಕಾರಿ ಹೆಚ್.ಎಸ್.ಬಿಂಧ್ಯಾ, ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್ ಹಾಗೂ ಅಂಚೆ ಪತ್ರ ವಿತರಣೆಗೆ ನಿಯೋಜಿಸಲಾಗಿರುವ ನೋಡಲ್ ಅಧಿಕಾರಿಗಳು ಉಪಸ್ಥಿತರಿದ್ದರು.



ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳೂ ಆದ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಂಗಳವಾರ ಅಂಚೆ ಮತಪತ್ರ ವಿತರಣೆ ಸಂಬಂಧ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು

ತೃತೀಯಲಿಂಗಿಗಳು ಶಿಕ್ಷಣದೊಂದಿಗೆ ಆರ್ಥಿಕವಾಗಿ ಚೈತನ್ಯ ಹೊಂದಬೇಕು

ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್ ಸಲಹೆ



ಮೈಸೂರಿನ ನಜರ್‌ಬಾದ್‌ನ ಸಿಎಸ್‌ಐ ವಿಕ್ಟೋರಿಯಾ ಶಾಲಾ ಆವರಣದಲ್ಲಿ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರಿಗಾಗಿ ಆರಂಭವಾದ 'ಸ್ಪಂದನ' ಸ್ವಯಂ ಸೇವಾ ಸಂಸ್ಥೆಯನ್ನು ಮಂಗಳವಾರ ಉದ್ಘಾಟಿಸಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್ ಮಾತನಾಡಿದರು.

ಮೈಸೂರು, ಮಾ.19(ಜಿಎ)– ತೃತೀಯಲಿಂಗಿಗಳನ್ನು ಕೀಳಾಗಿ ಕಾಣದೆ ಎಲ್ಲ ರಂಗಗಳಲ್ಲಿಯೂ ಅವರಿಗೆ ಸಮಾನ ಅವಕಾಶಗಳನ್ನು ನೀಡಬೇಕಿದೆ. ಈ ಮೂಲಕ ಅವರು ಉತ್ತಮ ಶಿಕ್ಷಣ ಪಡೆದು, ಸ್ವತಂತ್ರವಾಗಿ ಆರ್ಥಿಕ ಚೈತನ್ಯ ಪಡೆಯಬೇಕು. ಇದಕ್ಕಾಗಿ ಕೌಶಲ ಬೆಳೆಸಿಕೊಳ್ಳುವುದು ಅನಿವಾರ್ಯ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಜಿ.ದಿನೇಶ್ ಸಲಹೆ ನೀಡಿದರು.

ಮೈಸೂರಿನಲ್ಲಿರುವ ನಜರ್‌ಬಾದ್‌ನ ಸಿಎಸ್‌ಐ ವಿಕ್ಟೋರಿಯಾ ಶಾಲಾ ಆವರಣದಲ್ಲಿ ಹರಿ ಮುರಾರಿ ಚಾರಿಟಬಲ್ ಟ್ರಸ್ಟ್, ಆಶಾ ಕಿರಣ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರಿಗಾಗಿ ಆರಂಭವಾದ 'ಸ್ಪಂದನ' ಸ್ವಯಂ ಸೇವಾ ಸಂಸ್ಥೆಯನ್ನು ಮಂಗಳವಾರ ಉದ್ಘಾಟಿಸಿ ಮಾತನಾಡಿದ ಅವರು, ಕಾನೂನಿನ ನೆರವು ಪಡೆಯುವ ಮೂಲಕ ತೃತೀಯಲಿಂಗಿಗಳು ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದರು.

ಸಮುದಾಯದವರ ಮನದ ಇಂಗಿತ ಸಮಸ್ಯೆ, ಅನಿವಾರ್ಯತೆ ಅರ್ಥ ಮಾಡಿಕೊಂಡು ಅವರಿಗಾಗಿ ಕೇಂದ್ರ ಸ್ಥಾಪಿಸಿರುವುದು ಹೆಮ್ಮೆಯ ವಿಷಯ. ಸಂವಿಧಾನ ಎಲ್ಲರಿಗೂ ಅವಕಾಶಗಳನ್ನು ನೀಡಿದೆ. ಅದರಂತೆ ಅವುಗಳನ್ನು ಪಡೆದುಕೊಳ್ಳಲು ಸಮುದಾಯದವರು ಮುಂದಾಗಬೇಕು.

ಸಮಾಜದಲ್ಲಿ ಬಹಳಷ್ಟು ಜನರಿಗೆ ಎಲ್‌ಜಿಬಿಟಿಕ್ಯೂ ಸಮುದಾಯದ ಬಗ್ಗೆ ತಿಳಿದಿಲ್ಲ. ಅವರನ್ನು ನೋಡುವ ದೃಷ್ಟಿ ಬಹಳ ಕೆಟ್ಟದಾಗಿದ್ದು, ದೌರ್ಜನ್ಯ ಎಸಗಿದರೆ ಕಾನೂನಿನಡಿ ಶಿಕ್ಷೆಗೆ ಒಳಪಡುತ್ತಾರೆ ಎಂದು ತಿಳಿಸಿದರು.

ಸಮುದಾಯದ ಕಾರ್ಯಕರ್ತೆ ಪ್ರಣತಿ ಪ್ರಕಾಶ್ ಮಾತನಾಡಿ, ಜಿಲ್ಲೆಯ ಸಮುದಾಯದವರಿಗೆ ವೈದ್ಯಕೀಯ ಸೌಲಭ್ಯ, ತರಬೇತಿ, ಉದ್ಯೋಗಕ್ಕೆ ನೆರವಾಗುವ ಉದ್ದೇಶದಿಂದ ಸಂಸ್ಥೆ ಆರಂಭಿಸಲಾಗಿದ್ದು, ಕಚೇರಿಯು ಡ್ರಾಪ್ ಇನ್ ಸೆಂಟರ್ ಆಗಿ ಸಮುದಾಯದ ಸುರಕ್ಷತೆಯ ಸ್ಥಳವಾಗಿ ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಕಾರ್ಯನಿರ್ವಹಿಸಲಿದೆ ಎಂದರು.

ಜಿಲ್ಲೆಯಲ್ಲಿ ಸಮುದಾಯದ 700ರಿಂದ 800 ಜನರು ವಾಸವಾಗಿದ್ದಾರೆ. ಅವರಲ್ಲಿ ಹಲವರು ಕುಟುಂಬದ ಬೆಂಬಲ ಕಳೆದುಕೊಂಡಿದ್ದಾರೆ. ಜೀವನಕ್ಕಾಗಿ ಅಪಾಯಕಾರಿ, ಕಾನೂನುಬಾಹಿರ ಚಟುವಟಿಕೆ ಮಾಡುವಂತಾಗಿದೆ. ಈ ಹಿನ್ನೆಲೆಯಲ್ಲಿ ನಾವೂ ಎಲ್ಲರಂತೆ ಬದುಕಲು ಅವಕಾಶ ಮಾಡಿಕೊಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಎಚ್.ಆರ್.ಸುರೇಶ್, ಜಿಲ್ಲಾ ಏಡ್ಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಘಟಕದ ಅಧಿಕಾರಿ ಎಂ.ಡಿ.ಸಿರಾಜ್ ಅಹಮ್ಮದ್, ಅಂಜಲಿ ಗುಪ್ತಾ, ಮಹೇಶ್ ಕುಮಾರ್, ಜಗದಾಂಬ, ಗುರುರಾಜ್, ಜ್ಯೋತಿ ಉಪಸ್ಥಿತರಿದ್ದರು.

ಗೀತಾ ಶಿವರಾಜ್‌ಕುಮಾರ್ ಸಂಬಂಧ ಪ್ರಣವಾನಂದ ಸ್ವಾಮೀಜಿ ಹೇಳಿಕೆ ವೈಯಕ್ತಿಕ

ಮೈಸೂರು, ಮಾ.19(ಜಿಎ)–ಲೋಕಸಭಾ ಚುನಾವಣೆಯಲ್ಲಿ ಶಿವಮೊಗ್ಗ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಗೀತಾ ಶಿವರಾಜ್ ಕುಮಾರ್ ಅವರನ್ನು ತಾವು ಬೆಂಬಲಿಸುವುದಿಲ್ಲ ಎಂಬ ಪ್ರಣವಾನಂದ ಸ್ವಾಮೀಜಿಯವರ ಹೇಳಿಕೆ ವೈಯಕ್ತಿಕವಾಗಿದ್ದು, ಅದು ಈಡಿಗ ಸಮುದಾಯಕ್ಕೆ ಸಂಬಂಧಿಸಿದ್ದಲ್ಲ ಎಂದು ಜಿಲ್ಲಾ ಆರ್ಯ ಈಡಿಗ ಯುವ ವೇದಿಕೆ ಸ್ಪಷ್ಟಪಡಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಮಾಜಿ ಸಿಎಂ ದಿವಂಗತ ಎಸ್. ಬಂಗಾರಪ್ಪ ಮತ್ತು ಡಾ. ರಾಜ್‌ಕುಮಾರ್ ಅವರ ಆದರ್ಶದಲ್ಲಿ ಮುಂದುವರಿಯುತ್ತಿರುವ ಈಡಿಗ ಸಮಾಜದಲ್ಲಿ ಶ್ರೀ ಪ್ರಣವಾನಂದ ಸ್ವಾಮೀಜಿಯವರ ಹೇಳಿಕೆಗಳು ಗೊಂದಲವನ್ನು ಸೃಷ್ಟಿಸುತ್ತಿದೆ ಎಂದರು.

ಪ್ರಣವಾನಂದ ಸ್ವಾಮೀಜಿಯವರು ಸ್ವಾರ್ಥ ಸಾಧನೆಗಾಗಿ, ಸ್ವಹಿತಾಸಕ್ತಿಗಾಗಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಸಮುದಾಯದ ಮುಖಂಡರು ಮತ್ತು ರಾಜಕೀಯ ನಾಯಕರಲ್ಲಿ ಒಡಕು ಉಂಟಾಗುತ್ತಿದೆ. ಹೀಗಾಗಿ ಅವರು ಈ ರೀತಿಯ ಹೇಳಿಕೆ ನೀಡುವುದನ್ನು ನಿಲ್ಲಿಸಬೇಕೆಂದು ತಾಕೀತು ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಮುದಾಯದ ಮುಖಂಡರಾದ ಮಹದೇವ್, ನಾರಾಯಣ್, ಕೆ.ಎಸ್. ಮುರಳಿ, ಕೆ.ಪಿ. ಗುರುಮೂರ್ತಿ, ತಮ್ಮಣ್ಣೇಗೌಡ, ಎನ್. ಕೃಷ್ಣಮೂರ್ತಿ, ಎಸ್.ಎನ್. ನಾಗರಾಜ್ ಉಪಸ್ಥಿತರಿದ್ದರು.

ಸೇಲಂನಲ್ಲಿ ಹತ್ಯೆಯಾದ ಕಾರ್ಯಕರ್ತನನ್ನು ನೆನೆದು ಪ್ರಧಾನಿ ಮೋದಿ ಭಾವುಕ

ಸೇಲಂ, ಮಾ.19– 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು 370 ಸ್ಥಾನದಲ್ಲಿ ಗೆಲ್ಲಿಸುವ ಗುರಿ ಹೊಂದಿರುವ ಪ್ರಧಾನಿ ನರೇಂದ್ರ ಮೋದಿ ಅವರು ತಮಿಳುನಾಡಿನಲ್ಲಿ ಲೋಕಸಭೆ ಚುನಾವಣಾ ಪ್ರಚಾರದಲ್ಲಿರುವ ಅವರು 10 ವರ್ಷಗಳ ಹಿಂದೆ ಹತ್ಯೆಯಾದ ಬಿಜೆಪಿ ಕಾರ್ಯಕರ್ತನನ್ನು ನೆನೆದು ಭಾವುಕರಾಗಿದ್ದಾರೆ.



ಬಿಜೆಪಿ ಆಯೋಜಿಸಿದ್ದ ಬೃಹತ್ ಸಮಾವೇಶದಲ್ಲಿ ಜನರನ್ನುದ್ದೇಶಿಸಿ ಮಾತನಾಡಿದ ಮೋದಿ, ದಿವಂಗತ ಬಿಜೆಪಿ ನಾಯಕ ಕೆಎನ್ ಲಕ್ಷ್ಮಣನ್ ಸೇರಿದಂತೆ ಜಿಲ್ಲೆಗೆ ಸಂಬಂಧಿಸಿದ ಮೂವರು ವ್ಯಕ್ತಿಗಳನ್ನು ಸ್ಮರಿಸಿದರು. ಅದರಲ್ಲೂ ಹತ್ಯೆಗೊಳಗಾದ ಆಡಿಟರ್ ರಮೇಶ್ ಕುರಿತು ಮಾತನಾಡುವಾಗ ಪ್ರಧಾನಿ ಮೋದಿ ಭಾವುಕರಾದರು. ಸ್ವಲ್ಪ ಸಮಯ ಭಾಷಣ ನಿಲ್ಲಿಸಿ ತಮಿಳುನಾಡಿನಲ್ಲಿ ಬಿಜೆಪಿಗಾಗಿ ದುಡಿದ ರಮೇಶ್ ಕಾರ್ಯವನ್ನು ಶ್ಲಾಘಿಸಿದರು. ಆಡಿಟರ್ ರಮೇಶ್ ಅವರನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ದುರದೃಷ್ಟವಶಾತ್ ಇಂದು ರಮೇಶ್ ನಮ್ಮ ನಡುವೆ ಇಲ್ಲ. ರಮೇಶ್ ಪಕ್ಷಕ್ಕಾಗಿ ಹಗಲಿರುಳು ಶ್ರಮಿಸಿದ್ದಾರೆ. ಉತ್ತಮ ವಾಗ್ಮಿಯಾಗಿದ್ದರು. ಆದರೆ ಅವರು ದುಷ್ಕರ್ಮಿಗಳಿಂದ ಹತ್ಯೆಗೀಡಾದರು. ಇಂದು ನಾನು ಅವರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತೇನೆ ಎಂದು ಮೋದಿ ಹೇಳಿದರು.

ವೃತ್ತಿಯಲ್ಲಿ ಆಡಿಟರ್ ಆಗಿರುವ ವಿ.ರಮೇಶ್ ಸೇಲಂ ಮೂಲದ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿದ್ದರು. 2013ರ ಜುಲೈನಲ್ಲಿ ಅವರ ಮನೆಯಲ್ಲಿಯೇ ಅವರನ್ನು ಕೊಚ್ಚಿ ಕೊಲೆ ಮಾಡಲಾಗಿತ್ತು. ದಿವಂಗತ ಲಕ್ಷ್ಮಣನ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದ ಮೋದಿ, ತಮಿಳುನಾಡಿನಲ್ಲಿ ಪಕ್ಷದ ಬೆಳವಣಿಗೆಗೆ ಅವರು ನೀಡಿದ ಕೊಡುಗೆಗಳನ್ನು ಸ್ಮರಿಸಿದರು.

ಮಾ.22, 23ಕ್ಕೆ ಸ್ಪೆಕ್ಟ್ರಾ–2024 ಸ್ಪರ್ಧೆ

ಮೈಸೂರು,ಮಾ.19(ಎಂಟಿವೈ)– ಮೈಸೂರಿನ ಜೆ.ಪಿ.ನಗರದ ಹಿಂದೂಸ್ತಾನ್ ಕಾಲೇಜಿನಲ್ಲಿ ಮಾ.22 ಮತ್ತು 23ರಂದು ಎರಡು ದಿನಗಳ ರಾಷ್ಟ್ರ ಮಟ್ಟದ ಅಂತರ ಕಾಲೇಜು ವ್ಯವಹಾರ ನಿರ್ವಹಣೆ, ಮಾಹಿತಿ ತಂತ್ರಜ್ಞಾನ, ವಾಯುಯಾನ ಮತ್ತು ಸಾಂಸ್ಕೃತಿಕ ವಿಷಯಗಳ 'ಸ್ಪೆಕ್ಟ್ರಾ–2024' ಸ್ಪರ್ಧೆ ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ.ಸಿ.ಜೆ. ಪ್ರಿಯಾ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.22 ರಂದು ಬೆಳಗ್ಗೆ 10ಗಂಟೆಗೆ ಕಾಲೇಜು ಆವರಣದಲ್ಲಿ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದೆ. ಮಾ.23 ರಂದು ಸಂಜೆ 5.30ಕ್ಕೆ ಸಮಾರೋಪ ನಡೆಯಲಿದೆ. ಈ ವೇಳೆ ಶೈಕ್ಷಣಿಕ ಹಾಗೂ ಸಾಂಸ್ಕೃತಿಕವಾದ ಒಟ್ಟು 13 ಸ್ಪರ್ಧೆಗಳು ನಡೆಯಲಿವೆ. ನಗದು ಹಾಗೂ ಟ್ರೋಫಿಗಳನ್ನು ಒಳಗೊಂಡಂತೆ ಒಟ್ಟಾರೆ 1 ಲಕ್ಷ ರೂ.ವರೆಗೆ ಬಹುಮಾನಗಳಿವೆ. ಅತಿ ಹೆಚ್ಚು ಬಹುಮಾನ ಪಡೆದ ತಂಡಕ್ಕೆ 20 ಸಾವಿರ ನಗದು ಮತ್ತು ಟ್ರೋಫಿ, ದ್ವಿತೀಯ ಸ್ಥಾನಕ್ಕೆ ಹತ್ತು ಸಾವಿರ ಮತ್ತು ಟ್ರೋಫಿ, ರನ್ನರ್ ಅಪ್‌ಗಳಿಗೂ ಟ್ರೋಫಿ ದೊರೆಯಲಿದೆ. ಸ್ನಾತಕ, ಸ್ನಾತಕೋತ್ತರ, ಕಾನೂನು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಪಾಲ್ಗೊಳ್ಳಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ವಿಶೇಷಾಧಿಕಾರಿ ಏಬಲ್ ಮ್ಯಾಥ್ಯೂ ಪ್ರಸಾದ್, ಮೋಹನ್‌ಕುಮಾರ್, ಸವಿತಾ ಇದ್ದರು.

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಲ್ಲಿ ತಜ್ಞರಿಗಿಲ್ಲ ಅವಕಾಶ

● ಪರಿಸರವಾದಿಗಳು, ಪಾರಂಪರಿಕ ತಜ್ಞರ ಬೇಸರ ● ಬರೀ ಮಂತ್ರಿಗಳು, ಅಧಿಕಾರಿಗಳಿರುವುದು ಸಮಂಜಸವಲ್ಲ

ಮೈಸೂರು, ಮಾ.19(ಜಿಎ)–ವಿಧಾನಸಭೆಯಲ್ಲಿ ಅಂಗೀಕರಿಸಲ್ಪಟ್ಟ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನಾ ವೈಖರಿ ಬಗ್ಗೆ ಪರಿಸರವಾದಿಗಳು ಮತ್ತು ಪಾರಂಪರಿಕ ತಜ್ಞರು ಅಸಮಾಧಾನ ವ್ಯಕ್ತಪಡಿಸಿದ್ದು, ಪ್ರಾಧಿಕಾರ ಕೇವಲ ಮಂತ್ರಿಗಳು ಮತ್ತು ಅಧಿಕಾರಿಗಳನ್ನು ಒಳಗೊಂಡಿದೆ. ತಜ್ಞರಿಗೆ ಅವಕಾಶ ಇಲ್ಲದೇ ಇರುವುದು ಸರಿಯಲ್ಲ ಎಂದು ಹೇಳಿದ್ದಾರೆ.

ಈ ಕುರಿತು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪರಿಸರ ಬಳಗ ಹಾಗೂ ಚಾಮುಂಡಿಬೆಟ್ಟ ಉಳಿಸಿ ಸಮಿತಿಯ ಸಂಚಾಲಕ ಪರಶುರಾಮೇಗೌಡ ಮಾತನಾಡಿ, ಚಾಮುಂಡಿ ಬೆಟ್ಟದ ಸುಸ್ಥಿರ ಅಭಿವೃದ್ಧಿಗೆ ಸರ್ವಸಮ್ಮತ ಶಾಸನಬದ್ಧ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಬೇಕೆಂದು ಒತ್ತಾಯಿಸಿದರು.

ಚಾಮುಂಡಿಬೆಟ್ಟದ ಪ್ರಾಕೃತಿಕ ನೆಲೆಯನ್ನು ಕಾಪಾಡಿಕೊಳ್ಳಲು ಅರಣ್ಯ ಮತ್ತು ಪರಿಸರ ಇಲಾಖೆ ಸಚಿವರು, ಪರಿಸರವಾದಿಗಳು, ಪಾರಂಪರಿಕ ತಜ್ಞರು, ಭೂವಿಜ್ಞಾನಿ, ಕೀಟ ಮತ್ತು ಜಲ ತಜ್ಞರು ಸೇರಿದಂತೆ ವಿವಿಧ ಕ್ಷೇತ್ರದ ಪರಿಣತರು ಪ್ರಾಧಿಕಾರದಲ್ಲಿರಬೇಕು ಎಂದು ಆಗ್ರಹಿಸಿದರು.

ಪ್ರಸಾದ ಯೋಜನೆ : ಕೇಂದ್ರದ ಪ್ರಸಾದ ಯೋಜನೆಯಡಿ 45.71 ಕೋಟಿ ರೂ.ಗಳಲ್ಲಿ ಚಾಮುಂಡಿಬೆಟ್ಟದ ಅಭಿವೃದ್ಧಿಗೆ ಸಿದ್ಧಪಡಿಸಿರುವ ನೀಲನಕ್ಷೆಯು ಕಾಂಕ್ರೀಟೀಕರಣಕ್ಕೆ ಆದ್ಯತೆ ನೀಡುವಂತೆ ಕಾಣುತ್ತಿದೆ. ಆದ್ದರಿಂದ ಬೆಟ್ಟದಲ್ಲಿ ಕಾಂಕ್ರೀಟೀಕರಣ ಬೇಡ. ಅದರ ಬದಲು ಸುಸ್ಥಿರ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿ. ಕಳೆದ ಹಲವಾರು ವರ್ಷಗಳಿಂದ ಬೆಟ್ಟಕ್ಕೆ ರೋಪ್ ವೇ ಅಳವಡಿಕೆ ಬಗ್ಗೆ ಸಾಕಷ್ಟು ವಿರೋಧ ವ್ಯಕ್ತವಾಗಿದ್ದರು, ಮತ್ತೆ ರೋಪ್ ವೇ ಅಳವಡಿಕೆ ಬಗ್ಗೆ ಚರ್ಚೆಯಾಗುತ್ತಿದೆ. ಇದು ಸರಿಯಲ್ಲ. ಈ ಸಂಬಂಧ ಮುಖ್ಯಮಂತ್ರಿಗಳಿಗೆ ಪತ್ರ ಬರೆಯಲಾಗಿದ್ದು, ಅವರು ಸದ್ಯದಲ್ಲಿಯೇ ತಂಡದ ಜೊತೆ ಚರ್ಚೆ ಮಾಡುವುದಾಗಿ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಭಾರಿ ವಾಹನಗಳಿಗೆ ಪ್ರವೇಶ ನಿಷೇಧ: ಈ ವೇಳೆ ಜಿಲ್ಲಾ ಪರಂಪರೆ ಸಮಿತಿ ಸದಸ್ಯ ರಂಗರಾಜು ಮಾತನಾಡಿ, ಚಾಮುಂಡಿ ಬೆಟ್ಟದಲ್ಲಿ ಭಾರಿ ವಾಹನಗಳ ಸಂಚಾರ ಸಂಪೂರ್ಣ ನಿಷೇಧಿಸಬೇಕು. ಬೆಟ್ಟದ ಮೇಲೆ ಪರ್ಯಾಯ ಸಾರಿಗೆಯಾಗಿ ಎಲೆಕ್ಟ್ರಿಕ್ ಬಸ್ ಅಥವಾ ಮಿನಿ ಬಸ್‌ಗಳನ್ನು ಬಳಕೆ ಮಾಡುವಂತೆ ಮನವಿ ಮಾಡಿದರು.

ಪ್ರಸಾದ ಯೋಜನೆಯಲ್ಲಿ ವಿವರಿಸಿದಂತೆ ಚಾಮುಂಡಿಬೆಟ್ಟದ ಮೆಟ್ಟಿಲುಗಳಿಗೆ ಟೈಲ್ಸ್ ಮತ್ತು ಎರಡು ಬದಿಗಳಲ್ಲಿ ರೈಲಿಂಗ್ ಅಳವಡಿಸುವ ಪ್ರಸ್ತಾಪ ಇದ್ದು, ಇದರ ಬಗ್ಗೆ ಆರಂಭದಲ್ಲಿ ಕೆಲವರು ಮೆಚ್ಚುಗೆ ವ್ಯಕ್ತಪಡಿಸಿದರು. ಆದರೆ, ನಮ್ಮ ತಂಡ ನಂತರದ ದಿನಗಳಲ್ಲಿ ಸಮೀಕ್ಷೆ ಮಾಡಿದ್ದಾಗ ಅದಕ್ಕೆ ವಿರೋಧ ವ್ಯಕ್ತವಾಗಿದೆ. ಆದ್ದರಿಂದ ಬೆಟ್ಟವನ್ನು ಈಗಿರುವಂತೆ ಪ್ರಾಕೃತಿಕ ಮತ್ತು ಧಾರ್ಮಿಕ ಕ್ಷೇತ್ರವಾಗಿರಲು ಬಿಡಿ ಎಂದು ಆಗ್ರಹಿಸಿದರು. ನಂತರ ಲೇಖಕ ದೊರೆಸ್ವಾಮಿ ಹೊರೆಯಾಲ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಚಾಮುಂಡಿಬೆಟ್ಟದಲ್ಲಿ ಭಕ್ತಿಗೆ ಬದಲಾಗಿ ಹಣ ಮತ್ತು ವಾಣಿಜ್ಯ ಹಿತಾಸಕ್ತಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗುತ್ತಿದೆ ಎಂದು ವಿಷಾದಿಸಿ, ಪ್ರಾಧಿಕಾರವು ಬೆಟ್ಟದ ಮೂಲ ಜಾಗವನ್ನು ವಶಪಡಿಸಿಕೊಳ್ಳಬೇಕು. ಈ ಕಾರ್ಯಕ್ಕೆ ಸಾರ್ವಜನಿಕರು ಕೈಜೋಡಿಸಬೇಕು ಎಂದರು.



ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಮುಖ್ಯಮಂತ್ರಿಗಳು ಈ ಪ್ರಾಧಿಕಾರದ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಮೂವರು ಚುನಾಯಿತ ಪ್ರತಿನಿಧಿಗಳು ಉಪಾಧ್ಯಕ್ಷರಾಗಿ, ಐವರು ನಾಮನಿರ್ದೇಶನ ಸದಸ್ಯರೂ ಸೇರಿದಂತೆ ಒಟ್ಟು 15 ಮಂದಿ ಸದಸ್ಯರು, ಪದನಿಮಿತ್ತ ಕಾರ್ಯದರ್ಶಿ ಒಳಗೊಂಡಿರುವ ಪ್ರಾಧಿಕಾರದಲ್ಲಿ ಮೈಸೂರು ರಾಜವಂಶದ ಕಾನೂನುಬದ್ಧ ವಂಶಸ್ಥರು ಅಥವಾ ಅವರ ಪ್ರತಿನಿಧಿ ಶಾಶ್ವತ ಸದಸ್ಯರಾಗಿರುತ್ತಾರೆ ಎಂದು ವಿಧೇಯಕದಲ್ಲಿ ಉಲ್ಲೇಖಿಸಲಾಗಿದೆ.

ಮೂವರು ಸಚಿವರು ಉಪಾಧ್ಯಕ್ಷರು: ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆಯ ಸಚಿವರು, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು, ಪ್ರವಾಸೋದ್ಯಮ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ಚಾಮುಂಡೇಶ್ವರಿ ಕ್ಷೇತ್ರದ ಐತಿಹಾಸಿಕ ಹಿನ್ನೆಲೆ ಮತ್ತು ಸ್ಥಳ ಪುರಾಣದ ಬಗ್ಗೆ ಹೆಚ್ಚಿನ ಪರಿಚಯವಿರುವ ಅತೀ ಗಣ್ಯ ವ್ಯಕ್ತಿಗಳ ಪೈಕಿ ಐವರನ್ನು ಸದಸ್ಯರನ್ನಾಗಿ ರಾಜ್ಯ ಸರ್ಕಾರ ನಾಮನಿರ್ದೇಶನ ಮಾಡುತ್ತದೆ. ಅವರಲ್ಲಿ ಕನಿಷ್ಠ ಒಬ್ಬರು ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದವರಾಗಿರಬೇಕು ಹಾಗೂ ಒಬ್ಬರು ಮಹಿಳಾ ಸದಸ್ಯರಿರಬೇಕು ಎಂದು ಪ್ರಾಧಿಕಾರ ರಚನೆ ವಿಧೇಯಕದಲ್ಲಿ ತಿಳಿಸಿದೆ.

ಶ್ರೀ ಚಾಮುಂಡೇಶ್ವರಿ ಕ್ಷೇತ್ರವನ್ನು ಭಾಗಶಃ ಅಥವಾ ಪೂರ್ಣವಾಗಿ ಪ್ರತಿನಿಧಿಸುವ ಹಾಗೂ ಅದರ ಎಲ್ಲೆಯೊಳಗೆ ತಮ್ಮ ಚುನಾವಣಾ ಕ್ಷೇತ್ರವನ್ನು ಹೊಂದಿರುವ ಸಂಸತ್ ಸದಸ್ಯರು ಮತ್ತು ವಿಧಾನಸಭಾ ಸದಸ್ಯರು, ಲೋಕೋಪಯೋಗಿ ಇಲಾಖೆಯ ಸಂಪರ್ಕ ಮತ್ತು ಕಟ್ಟಡ ವಿಭಾಗದ ಮುಖ್ಯ ಅಭಿಯಂತರರು ಅಥವಾ ಅವರ ಪ್ರತಿನಿಧಿ, ಆರ್ಥಿಕ ಇಲಾಖೆಯ ಕಾರ್ಯದರ್ಶಿ ಅಥವಾ ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗೆ ಕಡಿಮೆ ಇಲ್ಲದ ಅವರ ಪ್ರತಿನಿಧಿ, ಕಂದಾಯ ಇಲಾಖೆ (ಮುಜರಾಯಿ) ಕಾರ್ಯದರ್ಶಿ ಅಥವಾ ಸರ್ಕಾರಿ ಉಪ ಕಾರ್ಯದರ್ಶಿ ದರ್ಜೆಗೆ ಕಡಿಮೆ ಇಲ್ಲದ ಆತನ ಪ್ರತಿನಿಧಿ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ ಆಯುಕ್ತರು, ಮೈಸೂರು ಜಿಲ್ಲಾಧಿಕಾರಿಗಳು, ಪುರಾತತ್ವ ಮತ್ತು ವಸ್ತುಸಂಗ್ರಹಾಲಯಗಳ ನಿರ್ದೇಶಕರು, ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕರು ಪದನಿಮಿತ್ತ ಸದಸ್ಯರಾಗಿದ್ದರೆ, ದೇವಸ್ಥಾನದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

ಪ್ರವಾಸಿ ತಾಣವಾಗಿ ಮತ್ತಿಗೋಡು ಆನೆ ಕ್ಯಾಂಪ್

● ಕೋಟಿ ವೆಚ್ಚದಲ್ಲಿ ಸಕಲ ವ್ಯವಸ್ಥೆ ● ಸರ್ಕಾರ ಅನುಮತಿಸಿದ ಕೂಡಲೇ ವೀಕ್ಷಣೆಗೆ ಮುಕ್ತ



■ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಮಾ.19– ಕೊಡಗು ಜಿಲ್ಲೆಯ ಮತ್ತಿಗೋಡು ಆನೆ ಶಿಬಿರ(ಕ್ಯಾಂಪ್) ಪ್ರವಾಸಿ ತಾಣವಾಗಿ ರೂಪುಗೊಂಡಿದ್ದು, ಇಲ್ಲಿಗೆ ಶೀಘ್ರವೇ ಪ್ರವಾಸಿಗರಿಗೆ ಪ್ರವೇಶಾವಕಾಶ ಕಲ್ಪಿಸಲು ನಿರ್ಧರಿಸಲಾಗಿದೆ.

ನಾಡಹಬ್ಬ ದಸರಾ ಮಹೋತ್ಸವದ ಗಜಪಡೆಯ ನಾಯಕ ಹಾಗೂ ಕರ್ನಾಟಕ ಅರಣ್ಯ ಇಲಾಖೆಯ ಕೂಂಬಿಂಗ್ ಸ್ಟಾರ್ ಖ್ಯಾತಿಯ 'ಅಭಿಮನ್ಯು' ಸೇರಿದಂತೆ 17 ಆನೆಗಳಿಗೆ ಮತ್ತಿಗೋಡು ಶಿಬಿರ ಆಶ್ರಯ ತಾಣವಾಗಿದೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಆನೆಚೌಕೂರು ವಲಯ ವ್ಯಾಪ್ತಿಗೆ ಒಳಪಡುವ ಮತ್ತಿಗೋಡು ಆನೆ ಕ್ಯಾಂಪ್, ಅತ್ಯುತ್ತಮ ಆನೆಗಳನ್ನು ಪಳಗಿಸಿದ ಕೀರ್ತಿ ಹೊಂದಿದೆ. ಇದು ಮೈಸೂರು–ತಿತಿಮತಿ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇದ್ದರೂ, ಈವರೆಗೂ ಪ್ರವಾಸಿಗರ ಪ್ರವೇಶಕ್ಕೆ ನಿರ್ಬಂಧ ವಿತ್ತು. ಇದನ್ನು ಪ್ರವಾಸಿ ತಾಣವಾಗಿ ಮಾರ್ಪಡಿಸುವ ಚಿಂತನೆ ಅರಣ್ಯ ಇಲಾಖೆ ಅಧಿಕಾರಿಗಳಲ್ಲಿ ಇರಲಿಲ್ಲ. ಆದರೆ ಕುಶಾಲನಗರದ ಸಮೀಪದ ದುಬಾರೆ ಆನೆ ಶಿಬಿರಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ದಿನೇ ದಿನೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಅದೇ ಮಾದರಿಯಲ್ಲಿ ಮತ್ತಿಗೋಡು ಆನೆ ಶಿಬಿರವನ್ನೂ ಅಭಿವೃದ್ಧಿ ಪಡಿಸಲು ನಿರ್ಧರಿಸಲಾಗಿದೆ.

ಜಾಗೃತಿ ಕೇಂದ್ರ: ಹಲವು ಕಾರಣಗಳಿಂದ ಇತ್ತೀಚಿನ ದಿನಗಳಲ್ಲಿ ಮಾನವ ಮತ್ತು ವನ್ಯಜೀವಿ ಸಂಘರ್ಷ ಹೆಚ್ಚುತ್ತಿದೆ. ಅದರಲ್ಲೂ ಮೈಸೂರು, ಕೊಡಗು, ಹಾಸನ, ಚಾಮರಾಜನಗರ, ಚಿಕ್ಕಮಗಳೂರು, ಕೋಲಾರ, ಮಂಡ್ಯ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಕಾಡಾನೆ ಉಪಟಳ ವ್ಯಾಪಕವಾಗುತ್ತಿದೆ. ಆನೆಗಳು ಜಮೀನು ಗಳು, ಜನವಸತಿ ಪ್ರದೇಶಕ್ಕೂ ಲಗ್ಗೆ ಇಡುತ್ತವೆ. ಈ ಹಿನ್ನೆಲೆಯಲ್ಲಿ ಮಾನವ ಹಾಗೂ ವನ್ಯಜೀವಿ ಸಂಘರ್ಷ ಕುರಿತಂತೆ ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಅರಣ್ಯ ಇಲಾಖೆ ಸಕ್ರಿಯವಾಗಿದ್ದು, ಇದರ ಭಾಗವಾಗಿ ಮತ್ತಿಗೋಡು ಆನೆ ಶಿಬಿರವನ್ನು ವನ್ಯಜೀವಿ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ ಕೇಂದ್ರವಾಗಿ ರೂಪಿಸುವ ಉದ್ದೇಶವಿದೆ.

1 ಕೋಟಿಯಲ್ಲಿ ಅಭಿವೃದ್ಧಿ: ಮತ್ತಿಗೋಡು ಆನೆ ಶಿಬಿರವನ್ನು 1 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಪ್ರಮುಖವಾಗಿ ಆನೆ ಶಿಬಿರ ವೀಕ್ಷಣೆಗೆ ಬರುವ ಪ್ರವಾಸಿಗರ ವಾಹನ ನಿಲುಗಡೆಗೆ ವ್ಯವಸ್ಥೆ, ಆನೆಗಳಿಗೆ ಆಹಾರ ನೀಡುವ ಸ್ಥಳ, ಅವು ವಿಹರಿಸುವ ಸ್ಥಳ ವೀಕ್ಷಣೆಗೆ ವ್ಯವಸ್ಥೆ, ಪ್ರವಾಸಿಗರ ಸುರಕ್ಷತೆಗೆ ರೈಲ್ವೆ ಹಳಿಯ ಬ್ಯಾರಿಕೇಡ್, ಪ್ರವಾಸಿಗರು ವಿಶ್ರಾಂತಿ ಪಡೆಯಲು ಎರಡು ಪರ್ಗೋಲ (ವಿಶೇಷ ವಿಶ್ರಾಂತಿ ತಾಣ), ಪಾರ್ಕಿಂಗ್ ಸ್ಥಳದಿಂದ ಆನೆಗಳ ವೀಕ್ಷಣೆ ಸ್ಥಳಕ್ಕೆ ವಾಕಿಂಗ್ ಪಾಥ್ ಸೇರಿದಂತೆ ಎಲ್ಲಾ ಅನುಕೂಲಗಳೊಂದಿಗೆ ಅಭಿವೃದ್ಧಿ ಪಡಿಸಲಾಗಿದ್ದು, ಮೈಸೂರು ಮತ್ತು ಕೊಡಗು ಜಿಲ್ಲೆಗೆ ಬರುವ ಪ್ರವಾಸಿಗರನ್ನು ಆಕರ್ಷಿಸಲು ಸಜ್ಜಾಗಿದೆ.

ಆನೆಗಳ ಮಾಹಿತಿ: ಆನೆಗಳ ಜೀವನ ಕ್ರಮ, ಆನೆ ಶಿಬಿರಗಳ ಅಗತ್ಯತೆ, ಆನೆಗಳ ಆರೈಕೆ, ಆನೆ ಸೆರೆ ಹಿಡಿಯುವ ವಿಧಾನ, ಕ್ರಾಲ್ ಬಳಕೆ, ಆನೆ ಕಾರಿಡಾರ್, ಆಹಾರ ಪದ್ಧತಿ, ಏಷ್ಯಾ ಹಾಗೂ ಆಫ್ರಿಕಾ ಆನೆಗಳ ನಡುವಿನ ವ್ಯತ್ಯಾಸ, ಪಳಗಿಸಿದ ಆನೆಗಳ ಬಳಕೆ, ಕುಮ್ಕಿ ಆನೆಗಳ ಪ್ರಧಾನತೆ, ದಸರಾ ಆನೆಗಳ ಮಾಹಿತಿ ಸೇರಿದಂತೆ ಆನೆಗಳ ಕುರಿತ ಸಮಗ್ರ ಮಾಹಿತಿಯ ಜೊತೆಗೆ ಅರಣ್ಯ ಸಂರಕ್ಷಣೆ ಅನಿವಾರ್ಯತೆಯನ್ನು ಮತ್ತಿಗೋಡು ಶಿಬಿರದಲ್ಲಿ ತಿಳಿಸಲಾಗುವುದು.

ಸಲಕರಣೆ ವೀಕ್ಷಣೆ: ಅರವಳಿಕೆ ಚುಚ್ಚುವುದು, ಅದಕ್ಕೆ ಬಳಸುವ ಕೋವಿ, ಹಗ್ಗ ಸೇರಿದಂತೆ ವನ್ಯಜೀವಿ ಸೆರೆ ಕಾರ್ಯಾಚರಣೆಗೆ ಬಳಸುವ ಪರಿಕರಗಳು, ಪ್ರಾಣಿ ಗಣತಿಗೆ ಬಳಸುವ ಕ್ಯಾಮರಾ ಟ್ರ್ಯಾಪ್, ಥರ್ಮಲ್ ಡ್ರೋಣ್, ಟಾರ್ಚ್, ವೈರ್‌ಲೆಸ್ ಇನ್ನಿತರ ಉಪಕರಣಗಳನ್ನು ಒಂದು ಕೊಠಡಿಯಲ್ಲಿಟ್ಟು ಪ್ರವಾಸಿಗರ ವೀಕ್ಷಣೆಗೆ ಅನುವು ಮಾಡಿಕೊಡಲಾಗಿದೆ.

ಅಂಬಾರಿ ಆನೆಗಳ ವಿವರ: ಮೈಸೂರು ದಸರಾದಲ್ಲಿ ಚಿನ್ನದ ಅಂಬಾರಿ ಹೊತ್ತ ಜಯಮಾರ್ತಾಂಡ(45 ಬಾರಿ ಅಂಬಾರಿ ಹೊತ್ತಿದೆ), ವಿಜಯಬಹದ್ದೂರ್, ನಂಜುಂಡ, ರಾಮಪ್ರಸಾದ್, ಮೋತಿಲಾಲ್ ರಾವ್, ಐರಾವತ, ರಾಜೇಂದ್ರ, ದ್ರೋಣ(19 ಬಾರಿ), ಬಲರಾಮ(11), ಅರ್ಜುನ(9) ಹಾಗೂ ಅಭಿಮನ್ಯು ಆನೆಗಳ ಮಾಹಿತಿ ಪ್ರದರ್ಶಿಸಲಾಗಿದೆ.

ಶಿಬಿರದಲ್ಲಿರುವ 17 ಆನೆಗಳು

ಮತ್ತಿಗೋಡು ಶಿಬಿರದಲ್ಲಿ ಅಭಿಮನ್ಯು, ಭೀಮ, ಮಹೇಂದ್ರ, ರವಿ, ಸೋಮಶೇಖರ್, ಮಾಸ್ತಿ, ಅಶೋಕ, ಕ್ಯಾತ, ಚಾಮುಂಡೇಶ್ವರಿ, ಭುವನೇಶ್ವರಿ, ಶ್ರೀಕಂಠ, ಮೃಗಾಲಯ ಆನೆ ಅಭಿ, ರಾಮ, ಏಕಲವ್ಯ ಹಾಗೂ 2 ಕಾಡಾನೆ ಸೇರಿ ಸದ್ಯ 17 ಆನೆಗಳು ಆಶ್ರಯ ಪಡೆದಿವೆ. ಆರ್‌ಎಫ್‌ಓ ಡಿ.ದೇವರಾಜ್ ನೇತೃತ್ವದಲ್ಲಿ ಡಿಆರ್‌ಎಫ್‌ಓ, ಸಿಬ್ಬಂದಿ, ಮಾವುತ ಹಾಗೂ ಕಾವಾಡಿಗಳು ಆನೆಗಳ ಪಾಲನೆ ಮಾಡುತ್ತಿದ್ದಾರೆ.





ಶುಲ್ಕ ನಿಗದಿಗೆ ಪತ್ರ...



ಮತ್ತಿಗೋಡು ಆನೆ ಶಿಬಿರ ಅಭಿವೃದ್ಧಿ ಪಡಿಸಿ, ಪ್ರವಾಸಿಗರ ವೀಕ್ಷಣೆಗೆ ಸಕಲ ವ್ಯವಸ್ಥೆ ಕಲ್ಪಿಸಲಾಗಿದೆ. ಪ್ರವೇಶಾವಕಾಶ ಹಾಗೂ ಶುಲ್ಕ ನಿಗಧಿ ಸಂಬಂಧ ಸರ್ಕಾರಕ್ಕೆ ಪತ್ರ ಬರೆಯಲಾಗಿದ್ದು, ಅನುಮತಿ ದೊರೆತ ಕೂಡಲೇ ಪ್ರವಾಸಿಗರ ವೀಕ್ಷಣೆಗೆ ಮುಕ್ತಗೊಳಿಸಲಾಗುವುದು.

–ಹರ್ಷಕುಮಾರ್ ಚಿಕ್ಕನರಗುಂದ, ನಿರ್ದೇಶಕ(ಡಿಸಿಎಫ್), ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ





ನಾಲ್ಕೈದು ದಿನದಲ್ಲಿ ಸಾಧಾರಣ ಮಳೆ ಸಾಧ್ಯತೆ



ಮೈಸೂರು, ಮಾ.19(ಎಸ್‌ಬಿಡಿ)– ಹವಾಮಾನ ಇಲಾಖೆ ಮಾಹಿತಿ ಪ್ರಕಾರ ಮೈಸೂರು, ಕೊಡಗು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಮುಂದಿನ ನಾಲ್ಕೈದು ದಿನ ಅಲ್ಪ ಮೋಡ ಕವಿದ ವಾತಾವರಣವಿದ್ದು, ಹಗುರ ಮಳೆಯಾಗುವ ಸಾಧ್ಯತೆ ಇದೆ ಎಂದು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಪ್ರಕಟಣೆ ತಿಳಿಸಿದೆ.

ಈಗಾಗಲೇ ದಕ್ಷಿಣ ಒಳನಾಡಿನ ಕೊಡಗು, ಚಿಕ್ಕಮಗಳೂರು ಜಿಲ್ಲೆಗಳ ಕೆಲವೆಡೆ ಹಾಗೂ ಉತ್ತರ ಒಳನಾಡಿನ ಕಲಬುರಗಿ, ಬೀದರ್ ಜಿಲ್ಲೆಗಳ ಕೆಲ ತಾಲೂಕುಗಳಲ್ಲಿ ಮಳೆಯಾಗಿದ್ದು, ಮಾ.20ರ ನಂತರ ರಾಜ್ಯದ ಹಲವೆಡೆ ಮಳೆಯಾಗಲಿದೆ. ಏಪ್ರಿಲ್‌ನಲ್ಲೂ ಒಂದೆರಡು ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ರಾಜ್ಯದಲ್ಲಿ ಕಳೆದ ವರ್ಷ ವಾಡಿಕೆಗಿಂತ ಮಳೆ ಕಡಿಮೆಯಾದ ಹಿನ್ನೆಲೆಯಲ್ಲಿ ತೀವ್ರ ಬರಗಾಲ ಎದುರಾಗಿದೆ. ಆದರೆ, ಈ ವರ್ಷ ವಾಡಿಕೆಯಷ್ಟು ಮಳೆಯಾಗಬಹುದು ಎಂದು ಹೇಳಲಾಗುತ್ತಿದೆ. ಪ್ರಸಕ್ತ ತಿಂಗಳಲ್ಲಿ ಎಲ್ ನಿನೋ ಪ್ರಭಾವ ತಗ್ಗಲಿರುವುದರಿಂದ ಮುಂಗಾರು ಉತ್ತಮವಾಗಲಿದೆ. ವಾಡಿಕೆಯಷ್ಟು ಮಳೆಯಾಗಲಿದೆ ಎಂದು ಹವಾಮಾನ ತಜ್ಞರು ಅಭಿಪ್ರಾಯಿಸಿದ್ದಾರೆ.

ಬ್ಯಾಂಕ್‌ನಲ್ಲಿ ಸಾಲ ಕೊಡಿಸುವುದಾಗಿ ವೈದ್ಯರಿಗೆ 1.56 ಲಕ್ಷ ವಂಚನೆ

ಮೈಸೂರು, ಮಾ.19– ಬ್ಯಾಂಕ್ ಲೋನ್ ಕೊಡುವುದಾಗಿ ನಂಬಿಸಿ ವೈದ್ಯರೊಬ್ಬರಿಗೆ ಆನ್‌ಲೈನ್ ಮೂಲಕ 1.56 ಲಕ್ಷ ರೂ. ವಂಚಿಸಲಾಗಿದೆ. ಮೈಸೂರಿನ ಶ್ರೀರಾಂಪುರ 2ನೇ ಹಂತದ ಮಧುವನ ಬಡಾವಣೆ ನಿವಾಸಿ ಬಡಾವಣೆಯ ವೈದ್ಯ ಪಿ.ಆರ್.ಕುಕ್ಕೆ ಸುಬ್ರಹ್ಮಣ್ಯ(55) ವಂಚನೆಗೊಳಗಾದವರು. ಇವರಿಗೆ 9035137366 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ತಾನು ಹೆಚ್‌ಡಿಎಫ್‌ಸಿ ಬ್ಯಾಂಕ್‌ನ ಸಿಬ್ಬಂದಿ ಎಂದು ಪರಿಚಯಿಸಿಕೊಂಡು ನಿಮಗೆ 25 ಲಕ್ಷ ರೂ ಸಾಲ ಮಂಜೂರಾಗಿದೆ ಎಂದು ತಿಳಿಸಿ ಅವರಿಂದ ಬ್ಯಾಂಕ್ ಸ್ಟೇಟ್‌ಮೆಂಟ್ ಇನ್ನಿತರ ದಾಖಲೆಗಳನ್ನು ವಾಟ್ಸಾಪ್ ಮೂಲಕ ಪಡೆದಿದ್ದಾನೆ. ನಂತರ ಪ್ರೋಸೆಸಿಂಗ್ ಚಾರ್ಜಸ್ ಎಂದು ತಿಳಿಸಿ, 1,56,935 ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾನೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೃಹಿಣಿಯ ಸರ ಕಳವು

ಮೈಸೂರು, ಮಾ.19–ಗೃಹಿಣಿಯೊಬ್ಬರ ಮಾಂಗಲ್ಯ ಸರವನ್ನು ಕಿತ್ತುಕೊಂಡು ಹೋದ ಘಟನೆ ಮೈಸೂರಿನ 2ನೇ ಹಂತದ ಬಿಇಎಂಎಲ್ ಬಡಾವಣೆಯಲ್ಲಿ ನಡೆದಿದೆ. ಅಲ್ಲಿನ ನಿವಾಸಿ ಪಾರ್ವತಿ ಅಡಿ (52) ಸರ ಕಳೆದುಕೊಂಡವರಾಗಿದ್ದು, ಇವರು ಮಾ.17ರಂದು ಸಂಜೆ 6 ಗಂಟೆ ಸುಮಾರಿನಲ್ಲಿ ಬಿಇಎಂಎಲ್ ಬಡಾವಣೆಯ ಶ್ರೀ ಮಹದೇಶ್ವರ ಪ್ರಾವಿಜನ್ ಸ್ಟೋರ್ ಮುಂಭಾಗ ನಡೆದುಕೊಂಡು ಹೋಗುತ್ತಿದ್ದಾಗ ಸ್ಕೂಟರ್‌ನಲ್ಲಿ ನಿಂತಿದ್ದ ಖದೀಮ ಇವರ ಕತ್ತಿನಲ್ಲಿದ್ದ 40 ಗ್ರಾಂ ತೂಕದ ಮಾಂಗಲ್ಯ ಸರವನ್ನು ಕಿತ್ತಿದ್ದಾನೆ. ಈ ಸಂದರ್ಭದಲ್ಲಿ ಪಾರ್ವತಿ ಅವರು ಸರವನ್ನು ಕೈಯ್ಯಲ್ಲಿ ಗಟ್ಟಿಯಾಗಿ ಹಿಡಿದುಕೊಂಡ ಪರಿಣಾಮ ಅದು ತುಂಡಾಗಿ 18 ಗ್ರಾಂ ತೂಕದ ಸರ ಮಾತ್ರ ಖದೀಮನ ಪಾಲಾಗಿದೆ. ಈ ಸಂಬಂಧ ಕುವೆಂಪುನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಿಕ್ಷಣ ಇಲಾಖೆ ಸಿಬ್ಬಂದಿಗೆ ಚುನಾವಣಾ ಕಾರ್ಯದಿಂದ ವಿನಾಯ್ತಿ ನೀಡುವಂತೆ ಮನವಿ

ಮೈಸೂರು, ಮಾ.19(ಎಸ್‌ಪಿಎನ್)– ಲೋಕಸಭಾ ಚುನಾವಣೆ 2024ರ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಮೌಲ್ಯಮಾಪನ ಕಾರ್ಯಕ್ಕೆ ನಿಯೋಜನೆಗೊಂಡಿರುವ ಸಿಬ್ಬಂದಿಗಳಿಗೆ ಚುನಾವಣಾ ಕಾರ್ಯದಿಂದ ವಿನಾಯಿತಿ ನೀಡುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ರಾಜ್ಯದ ಎಲ್ಲಾ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಮಂಗಳವಾರ ಪತ್ರ ಬರೆದಿದ್ದಾರೆ.

ಈಗಾಗಲೇ ದ್ವಿತೀಯ ಪಿಯುಸಿ ಪರೀಕ್ಷೆಗಳು ನಡೆಯುತ್ತಿವೆ. ಇದರ ಬೆನ್ನಲ್ಲೇ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಪ್ರಾರಂಭವಾಗುತ್ತಿವೆ. ನಂತರ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯವನ್ನು ತ್ವರಿತವಾಗಿ ಮುಗಿಸಿ, ಫಲಿತಾಂಶ ಪ್ರಕಟಿಸಬೇಕಾಗಿರುವುದರಿಂದ ಹಾಗೂ ವಿದ್ಯಾರ್ಥಿಗಳ ಮುಂದಿನ ಶೈಕ್ಷಣಿಕ ಹಿತದೃಷ್ಟಿಯಿಂದ ಆಯಾಯ ಜಿಲ್ಲಾ ಹಂತದಲ್ಲಿ ಮೌಲ್ಯಮಾಪನ ಕಾರ್ಯಕ್ಕೆ ನಿಯೋಜನೆಗೊಂಡಿರುವ ಪ್ರಾಂಶುಪಾಲರು, ಉಪನ್ಯಾಸಕರು, ಶಿಕ್ಷಕರನ್ನು ಮೌಲ್ಯಮಾಪನ ಕಾರ್ಯ ಮುಗಿಯುವವರೆಗೂ ಚುನಾವಣಾ ಕಾರ್ಯದಿಂದ ವಿನಾಯ್ತಿ ನೀಡಿ, ತದನಂತರ ಚುನಾವಣಾ ಕಾರ್ಯಕ್ಕೆ ನಿಯೋಜಿಸಿಕೊಳ್ಳುವಂತೆ ಕೋರಿದ್ದಾರೆ.

ಕೆಪಿಟಿಸಿಎಲ್‌ನಲ್ಲಿ ಕೆಲಸ ಕೊಡಿಸುವುದಾಗಿ ವ್ಯಕ್ತಿಯೊಬ್ಬರಿಗೆ 28 ಲಕ್ಷ ವಂಚನೆ; ಹಣ ಕೇಳಿದ್ದಕ್ಕೆ ಕೊಲೆ ಬೆದರಿಕೆ

ಮೈಸೂರು, ಮಾ.19–ಅಕ್ಕನ ಮಗಳಿಗೆ ಕೆಪಿಟಿಸಿಎಲ್‌ನಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಬೆಂಗಳೂರಿನ ವ್ಯಕ್ತಿಯೋರ್ವರಿಗೆ 28 ಲಕ್ಷ ರೂ. ವಂಚನೆ ಮಾಡಿರುವ ಬಗ್ಗೆ ನಾಲ್ವರ ವಿರುದ್ಧ ಪ್ರಕರಣ ದಾಖಲಾಗಿದೆ. ಬೆಂಗಳೂರಿನ ಜೆ.ಪಿ.ನಗರ ನಿವಾಸಿ ಸಂತೋಷ್ ಕುಮಾರ್(45) ವಂಚನೆಗೊಳಗಾದವರಾಗಿದ್ದು, ಚನ್ನಪಟ್ಟಣದ ಹನುಮಂತು, ಮೈಸೂರಿನ ಮಧುಸೂದನ್, ಶಶಿಕುಮಾರ್ ಮತ್ತು ರಂಗನಾಥ್ ಎಂಬುವರು ಆರೋಪಕ್ಕೆ ಒಳಗಾಗಿರುವವರು.

ವಿವರ: ಸಂತೋಷ್ ಕುಮಾರ್ ಅವರಿಗೆ ಪರಿಚಯಸ್ಥನಾದ ಚನ್ನಪಟ್ಟಣದ ಹನುಮಂತು ಎಂಬಾತ ತನಗೆ ಮೈಸೂರಿನಲ್ಲಿರುವ ಮಧುಸೂದನ್ ಎಂಬುವರು ಪರಿಚಯವಿದ್ದು, ಅವರು ಹಲವರಿಗೆ ಸರ್ಕಾರಿ ಕೆಲಸ ಕೊಡಿಸಿದ್ದಾರೆ ಎಂದು ತಿಳಿಸಿದ್ದಾನೆ. ಈ ಹಿನ್ನೆಲೆಯಲ್ಲಿ ಸಂತೋಷ್ ಕುಮಾರ್ ಮೈಸೂರಿಗೆ ಆಗಮಿಸಿ, ಮಧುಸೂದನ್‌ನನ್ನು ಪರಿಚಯಿಸಿಕೊಂಡು ತನ್ನ ಅಕ್ಕನ ಮಗಳು ಕಾವ್ಯ ಎಂಬಾಕೆಗೆ ಕೆಲಸ ಕೊಡಿಸಬೇಕೆಂದು ಕೇಳಿಕೊಂಡಾಗ ಆತ ಮೈಸೂರಿನ ಕೆಪಿಟಿಸಿಎಲ್ ಕಚೇರಿಯಲ್ಲಿ ಹಿರಿಯ ಸಹಾಯಕರ ಹುದ್ದೆ ಕೊಡಿಸುವುದಾಗಿಯೂ, ಅದಕ್ಕೆ 28 ಲಕ್ಷ ರೂ. ಕೊಡಬೇಕು ಎಂದು ಹೇಳಿದ್ದಾನೆ.

2023ರ ಮೇ 30ರಂದು ಮಧುಸೂದನ್‌ಗೆ ಸಂತೋಷ್ ಕುಮಾರ್‌ಗೆ 14 ಲಕ್ಷ ರೂ. ನೀಡಿದಾಗ ಅವರ ಅಕ್ಕನ ಮಗಳು ಕಾವ್ಯಗೆ ಮೆಡಿಕಲ್ ಟೆಸ್ಟ್ ಮಾಡಿಸಬೇಕು. ಅದಾದ ನಂತರ ಅಪಾಯಿಂಟ್‌ಮೆಂಟ್ ಆರ್ಡರ್ ಬರುತ್ತದೆ ಎಂದು ತಿಳಿಸಿ, ಮತ್ತೆ 10 ಲಕ್ಷ ರೂ. ಪಡೆದಿದ್ದಾನೆ. ಜೊತೆಗೆ ಬೆಂಗಳೂರಿನ ಅಂಬೇಡ್ಕರ್ ಮೆಡಿಕಲ್ ಕಾಲೇಜಿಗೆ ಒಬ್ಬ ವ್ಯಕ್ತಿಯನ್ನು ಕಳುಹಿಸಿ, ಆತನಿಂದ ಕಾವ್ಯಗೆ ಮೆಡಿಕಲ್ ಟೆಸ್ಟ್ ಮಾಡಿಸುವ ನಾಟಕವಾಡಿಸಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ನಂತರ ಕಾವ್ಯ ಅವರಿಗೆ ಮೈಸೂರಿನ ಕುವೆಂಪು ನಗರದಲ್ಲಿರುವ ಕೆಪಿಟಿಸಿಎಸ್ ಕಚೇರಿಯಲ್ಲಿ ಕೆಲಸ ದೊರೆತಿದೆ ಎಂದು ತಿಳಿಸಿ, ಮತ್ತೆ 4 ಲಕ್ಷ ರೂ. ಪಡೆದು ಮೈಸೂರಿನ ಎಫ್‌ಟಿಎಸ್ ಸರ್ಕಲ್‌ನಲ್ಲಿರುವ ಚೆಸ್ಕಾಂ ಕಚೇರಿಗೆ ಅವರನ್ನು ಕರೆದೊಯ್ದಿದ್ದಾನೆ. ಅಲ್ಲಿ ಕಚೇರಿಯ ಲೆಕ್ಕಾಧಿಕಾರಿ ಎಂದು ಮಧುಸೂದನ್‌ನಿಂದ ಪರಿಚಯಿಸಲ್ಪಟ್ಟ ರಂಗನಾಥ್ ಎಂಬಾತ ಕೆಪಿಟಿಸಿಎಲ್‌ನಲ್ಲಿ ಕಾವ್ಯ ಅವರಿಗೆ ಕೆಲಸ ದೊರೆತಿರುವ ಸಂಬಂಧ ನಕಲಿ ಅಪಾಯಿಂಟ್‌ಮೆಂಟ್ ಆರ್ಡರ್ ಅನ್ನು ನೀಡಿದ್ದಲ್ಲದೇ, ಶಶಿಕುಮಾರ್ ಎಂಬಾತನ ಮೊಬೈಲ್ ನಂಬರ್ ಕೊಟ್ಟು ಅವರು ತಿಳಿಸಿದಾಗ ಕುವೆಂಪುನಗರದ ಕೆಪಿಟಿಸಿಎಲ್ ಕಚೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗುವಂತೆ ತಿಳಿಸಿದ್ದಾರೆ.

ಸಂತೋಷ್ ಕುಮಾರ್ ಅವರು ಶಶಿಕುಮಾರ್‌ಗೆ ಕರೆ ಮಾಡಿದಾಗಲೆಲ್ಲಾ ಸಬೂಬುಗಳನ್ನು ಹೇಳುತ್ತಾ ಕೆಲ ದಿನಗಳ ನಂತರ ಅವರ ಕರೆಯನ್ನು ಶಶಿಕುಮಾರ್ ಸ್ವೀಕರಿಸುತ್ತಿರಲಿಲ್ಲ.

ಹೀಗಾಗಿ ಮಧುಸೂದನ್‌ಗೆ ಸಂತೋಷ್ ಕುಮಾರ್ ಕರೆ ಮಾಡಿದಾಗ ಆತ ನಿಮ್ಮ ಅಕ್ಕನ ಮಗಳಿಗೆ ಯಾವ ಕೆಲಸವೂ ಆಗಿಲ್ಲ. ನಿಮ್ಮ ಹಣವನ್ನು ಮರೆತುಬಿಡಿ. ಮತ್ತೆ ಫೋನ್ ಮಾಡಿದರೆ ಕೊಲೆ ಮಾಡಿಬಿಡುತ್ತೇನೆ ಎಂದು ಬೆದರಿಕೆ ಹಾಕಿರುವುದಾಗಿ ಸಂತೋಷ್ ಕುಮಾರ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ನರಸಿಂಹರಾಜ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.



ಮೈಸೂರಿನ ಕುವೆಂಪುನಗರದ ಸಾಮ್ರಾಟ್ ಛತ್ರದಲ್ಲಿ ಮಂಗಳವಾರ ನಡೆದ ಬಿಜೆಪಿ ಕೆಆರ್ ಕ್ಷೇತ್ರದ ಬೂತ್ ಅಧ್ಯಕ್ಷರ ಸಭೆಯಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಸನ್ಮಾನಿಸಲಾಯಿತು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಮೇಯರ್ ಶಿವಕುಮಾರ್, ಮಹಾನಗರ ಪಾಲಿಕೆ ಮಾಜಿ ಸದಸ್ಯ ರಮೇಶ್, ಮುಖಂಡರಾದ ಹೇಮಂತ್, ರಾಜೇಶ್, ಚೇತನ್, ಸಚಿನ್, ರವಿ ಮತ್ತಿತರರು ಹಾಜರಿದ್ದರು.

ಪಾಕಿಸ್ತಾನ: ಎರಡು ಪ್ರಕರಣಗಳಲ್ಲಿ ಇಮ್ರಾನ್ ಖಾನ್ ಖುಲಾಸೆ



ಇಸ್ಲಾಮಾಬಾದ್, ಮಾ.19– ಪಾಕಿಸ್ತಾನದಲ್ಲಿ ಸರ್ಕಾರದ ವಿರುದ್ಧ 2022ರ ಮಾರ್ಚ್‌ನಲ್ಲಿ ನಡೆದ ಮೆರವಣಿಗೆಯಲ್ಲಿ ನಡೆದಿದ್ದ ವಿಧ್ವಂಸಕ ಘಟನೆಗಳಿಗೆ ಸಂಬಂಧಿಸಿದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಇಲ್ಲಿನ ನ್ಯಾಯಾಲಯವೊಂದು ಮಂಗಳವಾರ ಖುಲಾಸೆಗೊಳಿಸಿದೆ. ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಶೈಯಿಷ್ತಾ ಕುಂದಿ ಅವರು ಖಾನ್ ಅರ್ಜಿಯ ವಿಚಾರಣೆ ನಡೆಸಿ ಅವರನ್ನು ಖುಲಾಸೆಗೊಳಿಸಿದ್ದಾರೆ ಎಂದು ಜಿಯೊ ನ್ಯೂಸ್ ವರದಿ ಮಾಡಿದೆ. ಖಾನ್ ಪರವಾಗಿ ನಯೀಮ್ ಪಂಜೋತಾ ವಾದ ಮಂಡಿಸಿದರು. 2022ರಲ್ಲಿ ತಮ್ಮ ಪದಚ್ಯುತಿ ನಂತರ ತಕ್ಷಣ ಚುನಾವಣೆ ನಡೆಸಬೇಕು ಎಂದು ಆಗ್ರಹಿಸಿ ಇಮ್ರಾನ್ ಖಾನ್ ಮೆರವಣಿಗೆ ನಡೆಸಿದ್ದರು. ಈ ವೇಳೆ ಅವರ ಹತ್ಯೆ ಯತ್ನ ಸಹ ನಡೆದಿತ್ತು. ಪಾಕಿಸ್ತಾನ್ ತೆಹ್ರೀಕ್ ಇ ಇನ್ಸಾಫ್ (ಪಿಟಿಐ) ಪಕ್ಷದ ಸಂಸ್ಥಾಪಕ ಇಮ್ರಾನ್ ಖಾನ್ ಹಲವು ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಜೈಲಿನಲ್ಲಿದ್ದಾರೆ.

ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯ ವಾಚನ–ವ್ಯಾಖ್ಯಾನ

ಶ್ರೀರಾಮನು ನಿತ್ಯ ವರ್ತಮಾನದಲ್ಲಿ ನಮ್ಮನ್ನು ಕಾಪಾಡುವ ಚೇತನಶಕ್ತಿ

ಮೈಸೂರು,ಮಾ.19(ಪಿಎಂ)–ರಾಷ್ಟ್ರಕವಿ ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಶ್ರೀರಾಮನು ನಿತ್ಯ ವರ್ತಮಾನದಲ್ಲಿ ನಮ್ಮನ್ನು ಕಾಪಾಡುವ ಚೇತನಶಕ್ತಿಯ ಸ್ವರೂಪವಾಗಿದ್ದಾನೆ ಎಂದು ವ್ಯಾಖ್ಯಾನಕಾರ ಹಾಗೂ ಪ್ರಾಧ್ಯಾಪಕ ನಂದೀಶ ಹೇಳಿದರು.

ಮೈಸೂರಿನ ಯಾದವಗಿರಿಯಲ್ಲಿರುವ ಶ್ರೀರಾಮಕೃಷ್ಣ ಆಶ್ರಮದ ಸಭಾಂಗಣದಲ್ಲಿ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ 189ನೇಯ ಜನ್ಮದಿನೋತ್ಸವ ಹಾಗೂ ಆಶ್ರಮದ ವಾರ್ಷಿಕೋತ್ಸವದ ಪ್ರಯುಕ್ತ ಭಾನುವಾರ ಹಮ್ಮಿಕೊಂಡಿದ್ದ ಕುವೆಂಪು ಅವರ 'ರಾಮಯಾಣ ದರ್ಶನಂ' ವಾಚನ ಮತ್ತು ವ್ಯಾಖ್ಯಾನ ಕಾರ್ಯಕ್ರಮದಲ್ಲಿ ಅವರು ವಾಚನ ಮತ್ತು ವ್ಯಾಖ್ಯಾನ ನೀಡಿದರು.

ಕುವೆಂಪು ಅವರು ಈ ಇಡೀ ಕಾವ್ಯದಲ್ಲಿ ಪ್ರಾರ್ಥನೆ ಮಾಡದ ಜಾಗವೇ ಇಲ್ಲ. ರಾಮ, ರಾವಣ, ಆಂಜನೇಯ, ಸೀತೆಯೂ ಇಲ್ಲಿ ಪ್ರಾರ್ಥಿಸುತ್ತಾಳೆ. ಪ್ರಾರ್ಥನೆ ಮಾಡದ ಪಾತ್ರವೇ ಇಲ್ಲ. ಇಲ್ಲಿ ರಾಮನ ಉದ್ದೇಶ ಕೇವಲ ರಾವಣನನ್ನು ಕೊಲ್ಲುವುದಲ್ಲ. ಇಲ್ಲಿ ರಾಮನು ನಿತ್ಯ ವರ್ತಮಾನದಲ್ಲಿ ನಮ್ಮನ್ನು ಕಾಪಾಡುವ ಚೇತನಶಕ್ತಿಯ ಸ್ವರೂಪವಾಗಿದ್ದಾನೆ ಎಂದರು.

ಈಗಲೂ ಈ ಕಾವ್ಯ ಅನುಸಂಧಾನ ಮಾಡುವಾಗ ನಿತ್ಯಶಕ್ತಿಗಳು ನಮ್ಮೊಳಗೆ ಪ್ರವೇಶಿಸಿ ನಮ್ಮನ್ನು ಉದ್ಧಾರ ಮಾಡುವ ಕಾರ್ಯದಲ್ಲಿ ತೊಡಗುತ್ತವೆ. ಅಂದರೆ ರಾಮ ಆಗಿ ಹೋದವನಲ್ಲ. ಕೇವಲ ಈಗಿರುವವನೂ ಅಷ್ಟೇ ಅಲ್ಲ ಮುಂದೆಯೂ ಇರುವ ನಿತ್ಯ ರಾಮ ಎಂದು ವ್ಯಾಖ್ಯಾನಿಸಿದರು. ಈ ಕಾವ್ಯದ ಛಂದಸ್ಸಿನೊಳಗೆ ಒಂದು ಲಯವಿನ್ಯಾಸವಿದೆ. ಅದಕ್ಕೆ ಅನುಗುಣವಾಗಿ ನನ್ನದೇ ಆದ ವಾಚನ ವೈಖರಿಯನ್ನು ಕಂಡುಕೊಂಡಿದ್ದೇನೆ. ಸದರಿ ಕಾವ್ಯದ ವಾಚನ ಮಾಡುವವರಲ್ಲಿ ಮತ್ತು ಆಲಿಸುವವರಲ್ಲಿ ಲೋಕ ನಡೆಸುವ ಶಕ್ತಿಯ ಸ್ಪಂದನವಾಗಲಿದೆ. ಕಾವ್ಯದಲ್ಲಿ ದಿವ್ಯ ದೃಷ್ಟಿ ಇದ್ದು, 20ನೇ ಶತಮಾನದ ಯುವ ಪ್ರಜ್ಞೆಯೊಂದು ಈ ಕಾವ್ಯದಲ್ಲಿದೆ. ಅದರೊಂದಿಗೆ ನಮ್ಮನ್ನು ಜೋಡಿಸಿಕೊಂಡಾಗ ಮಹಾಪ್ರಜ್ಞೆ ನಮ್ಮೊಳಗೆ ಆವಿರ್ಭಾವಿಸಲಿದೆ ಎಂದು ಹೇಳಿದರು.

ಯೋಗ, ವೇದಾಂತ, ತತ್ವಶಾಸ್ತ್ರ ಸಾಹಿತ್ಯ, ಛಂದಸ್ಸು ಮತ್ತು ಅಲಂಕಾರ ಸೇರಿದಂತೆ ಎಲ್ಲವೂ ಈ ಕಾವ್ಯದಲ್ಲಿದೆ. ಅದಕ್ಕಿಂತಲೂ ಮುಖ್ಯವಾಗಿ ಪೂರ್ಣ ಯೋಗ ದೃಷ್ಟಿ ಮೂಲಕ ಜಡ ಮತ್ತು ಚೈತನ್ಯಗಳನ್ನು ಏಕವೀಕ್ಷಣದಲ್ಲಿ ನೋಡುವ ಸಾಧ್ಯತೆ ಇದೆ. ಕಾವ್ಯ ವಾಚಿಸಿದರೆ ಸಾಕು ನಮ್ಮೊಳಗಿನ ನಾದಮಾಧುರ್ಯ ಶರೀರದ ಜೀವಕೋಶದಲ್ಲಿ ಚಲಿಸಲಿದೆ. ಮಂತ್ರ ಸಿದ್ಧಿಯಾಗಿರುವ ಕಾವ್ಯ ಇದಾಗಿದ್ದು, ಮಂತ್ರಕ್ಕೆ ಮೂಲ ಧ್ವನಿ. ಅದು ಭಾವಲೋಕದ ದ್ವಾರವನ್ನು ತೆರೆಯುತ್ತದೆ. ನಿತ್ಯಸತ್ಯಗಳು ಭಾವಲೋಕದಲ್ಲಿ ಪ್ರತ್ಯಕ್ಷವಾಗಲಿವೆ ಎಂದು ತಿಳಿಸಿದರು. ಇದಕ್ಕೂ ಮುನ್ನ ವಿಶೇಷಚೇತನ ಹಿರಿಯ ಗಾಯಕ ವಿದ್ವಾನ್ ಗುರುರಾಜ್ ಅವರು 'ದಿವ್ಯ ತ್ರಯರ ಗಾನರಸಾಮೃತ' ಶೀರ್ಷಿಕೆಯ ಗಾಯನ ಕಾರ್ಯಕ್ರಮದಲ್ಲಿ ಶ್ರೀರಾಮಕೃಷ್ಣ ಪರಮಹಂಸ, ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರನ್ನು ಸ್ಮರಿಸಿದರು. ಆಶ್ರಮದಲ್ಲಿ ಮಾ.12ರಂದು ಶ್ರೀರಾಮಕೃಷ್ಣ ಪರಮಹಂಸರ 189ನೇ ಜಯಂತಿ ಆಚರಿಸಲಾಯಿತು. ಅಂತೆಯೇ ಮಾ.15ರಿಂದ 17ರವರೆಗೆ ಆಶ್ರಮದ ವಾರ್ಷಿಕೋತ್ಸವ ಆಚರಣೆಯ ಭಾಗವಾಗಿ ಪ್ರವಚನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು. ಮಾ.17ರ ಭಾನುವಾರ 'ರಾಮಯಾಣ ದರ್ಶನಂ' ವಾಚನ ಮತ್ತು ವ್ಯಾಖ್ಯಾನ ಕಾರ್ಯಕ್ರಮದ ಮೂಲಕ ಆಶ್ರಮದ ವಾರ್ಷಿಕೋತ್ಸವಕ್ಕೆ ತೆರೆ ಬಿದ್ದಿತು. ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಸೇರಿದಂತೆ ಮತ್ತಿತರರು ಇಂದಿನ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಪ್ರಾಧ್ಯಾಪಕ ನಂದೀಶ ಅಭಿಮತ



ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಲ್ಲಿ ಭಾನುವಾರ ಆಶ್ರಮದ ವಾರ್ಷಿಕೋತ್ಸವದ ಪ್ರಯುಕ್ತ ಪ್ರಾಧ್ಯಾಪಕ ನಂದೀಶ ಅವರು ಕುವೆಂಪು ಅವರ 'ರಾಮಯಾಣ ದರ್ಶನಂ' ವಾಚನ ಮತ್ತು ವ್ಯಾಖ್ಯಾನ ಕಾರ್ಯಕ್ರಮ ನಡೆಸಿಕೊಟ್ಟರು.

ಮೈಸೂರು ಮಿತ್ರ

ಮಾ.22, ಶ್ರೀಕಂಠೇಶ್ವರ ಪಂಚ ಮಹಾರಥೋತ್ಸವ: ಸಕಲ ಸಿದ್ಧತೆ





ನಂಜನಗೂಡು, ಮಾ.19– ದಕ್ಷಿಣಕಾಶಿ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿಯ ವೈಭವಯುತ ಪಂಚ ಮಹಾ ರಥೋತ್ಸವ ಮಾ.22 ರಂದು ನಡೆಯಲಿದ್ದು, ಇದಕ್ಕಾಗಿ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ.

ಇಡೀ ದಕ್ಷಿಣ ಭಾರತದಲ್ಲೇ ಒಂದೇ ಬಾರಿಗೆ 5 ರಥಗಳನ್ನು ಏಕಕಾಲದಲ್ಲಿ ಎಳೆಯುವ ಏಕೈಕ ಕ್ಷೇತ್ರವೆಂದು ನಂಜನಗೂಡಿನ ನಂಜುಂಡೇಶ್ವರನ ದೊಡ್ಡ ಜಾತ್ರೆ ಪ್ರಸಿದ್ಧಿಯಾಗಿದ್ದು, ಮೊದಲು ಗಣಪತಿ, ಪಾರ್ವತಿ ಸಮೇತ ಶ್ರೀಕಂಠೇಶ್ವರ, ಪಾರ್ವತಿ, ಸುಬ್ರಹ್ಮಣ್ಯಸ್ವಾಮಿ, ಚಂಡಿಕೇಶ್ವರಸ್ವಾಮಿಯ ರಥಗಳು ರಥ ಬೀದಿಯಲ್ಲಿ ಚಲಿಸಲಿವೆ.

ಶ್ರೀಗೌತಮ ಮಹಾರಥ 92 ಅಡಿ ಎತ್ತರವಿದ್ದು, 250 ಟನ್ ತೂಕವಿದ್ದು ಜಾತ್ರೆಯ ಪ್ರಮುಖ ಆಕರ್ಷಣೆಯಾಗಿದೆ. ಈಗಾಗಲೇ ರಥೋತ್ಸವ ಅಂಗವಾಗಿ ಸಕಲ ಸಿದ್ಧತೆ ಕೈಗೊಳ್ಳಲಾಗಿದ್ದು, ಅಲ್ಲದೇ ರಥಗಳ ಚಕ್ರವನ್ನು ಸರಿಪಡಿಸಿ ಹೊಸ ಹಗ್ಗ ಕಟ್ಟುವ ಕಾರ್ಯ ಪ್ರಗತಿಯಲ್ಲಿದೆ. ಬಣ್ಣ ಬಣ್ಣದ ಬಾವುಟಗಳನ್ನು ಕಟ್ಟಿ, ರಥವನ್ನು ವಿಶೇಷವಾಗಿ ಕಂಗೊಳಿಸುವಂತೆ ಮಾಡುವ ಸಲುವಾಗಿ ಕಾರ್ಮಿಕರು ಕಳೆದ ಹಲವು ದಿನಗಳಿಂದ ಸಿದ್ಧತೆ ನಡೆಸಿದ್ದಾರೆ. ಅಲ್ಲದೆ ಪಾರ್ವತಿ ರಥ, ಗಣಪತಿ, ಸುಬ್ರಹ್ಮಣ್ಯಸ್ವಾಮಿ, ಚಂಡಿಕೇಶ್ವರ ರಥಗಳನ್ನು ಸಿದ್ಧಪಡಿಸಲಾಗುತ್ತಿದೆ. ದೇವಾಲಯದ ಸುತ್ತಲೂ ತಳಿರು ತೋರಣಗಳನ್ನು ಕಟ್ಟುವ ಮೂಲಕ ಜಾತ್ರೆಗೆ ಸಿದ್ಧತೆ ನಡೆಸಲಾಗಿದೆ.

ವಿದ್ಯುತ್ ದೀಪಾಲಂಕಾರ: ಜಾತ್ರಾ ಮಹೋತ್ಸವ ಅಂಗವಾಗಿ ದೇವಾಲಯದ ಆವರಣದ ಸುತ್ತಲೂ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಸಿಂಗರಿಸಲಾಗಿದೆ ಅಲ್ಲದೆ ನಗರದ ಪ್ರಮುಖ ಬೀದಿ ಹಾಗೂ ಕಟ್ಟಡಗಳನ್ನು ವಿದ್ಯುತ್ ದೀಪಗಳಿಂದ ಅಲಂಕೃತಗೊಳಿಸಲಾಗಿದೆ.

ಪ್ರಸಾದ ವಿತರಣೆಗೆ ಕಟ್ಟೆಚ್ಚರ: ಸಾಂಕ್ರಾಮಿಕ ರೋಗ ಹರಡುವ ಭೀತಿಯಿಂದಾಗಿ ಜಿಲ್ಲಾಡಳಿತ ಎಚ್ಚರಿಕೆ ವಹಿಸಿದ್ದು, ಜಾತ್ರಾ ಮಹೋತ್ಸವದಂದು ವಿವಿಧ ಸಂಘ ಸಂಸ್ಥೆಗಳು ಪ್ರಸಾದ ವಿತರಣೆಗೆ ಕಡ್ಡಾಯವಾಗಿ ಆರೋಗ್ಯ ಇಲಾಖೆಯಿಂದ ಅನುಮತಿ ಪಡೆಯಬೇಕಿದೆ.

ರಾಜ್ಯದ ವಿವಿಧೆಡೆಗಳಿಂದ ಆಗಮಿಸುವ ಭಕ್ತರ ಅನುಕೂಲಕ್ಕಾಗಿ ಮೂಲ ಸೌಕರ್ಯ, ಸಾರಿಗೆ ಸಂಸ್ಥೆ ವತಿಯಿಂದ ಹೆಚ್ಚುವರಿ ವಿಶೇಷ ಬಸ್ ಸೌಲಭ್ಯವನ್ನು ಕಲ್ಪಿಸಲಾಗಿದೆ. ಅಲ್ಲದೇ ಹೆಚ್ಚುವರಿ ರೈಲುಗಳು ಹಾಗೂ ರೈಲುಗಳಲ್ಲಿ ಹೆಚ್ಚುವರಿ ಬೋಗಿಗಳನ್ನು ಅಳವಡಿಸಲು ಪತ್ರ ಬರೆಯಲಾಗಿದೆ.

ಮಾ.22 ರಂದು ಉದಯಾತ್ಪೂರ್ವ 6.30 ರಿಂದ 6.50ರೊಳಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ ಶ್ರೀ ಮನ್ಮಹಾಗೌತಮ ರಥಾರೋಹಣ ಜರುಗಲಿದ್ದು, ಇದನ್ನು ಕಣ್ತುಂಬಿಕೊಳ್ಳಲು ಲಕ್ಷಾಂತರ ಭಕ್ತರು ಕಾತುರದಿಂದ ಕಾಯುತ್ತಿದ್ದಾರೆ.

ರಥದಲ್ಲಿ ವಜ್ರ ವೈಡೂರ್ಯ ಖಚಿತ ಶ್ರೀಕಂಠೇಶ್ವರಸ್ವಾಮಿಯ ಮೂರ್ತಿ ಪ್ರತಿಷ್ಠಾಪಿಸಿ ಹೂವಿನ ಅಲಂಕಾರದಿಂದ ವಿಶೇಷವಾಗಿ ಅಲಂಕರಿಸಲಾಗುತ್ತದೆ. ನಿಗದಿತ ಸಮಯದಲ್ಲಿ ಅರ್ಚಕ ವೃಂದ ಧಾರ್ಮಿಕ ವಿಧಿವಿಧಾನ, ವೇದ ಘೋಷಗಳು ಮೊಳಗಿಸಿದ ನಂತರ ಮಹಾಮಂಗಳಾರತಿ, ಈಡುಗಾಯಿ ಒಡೆದು ರಥೋತ್ಸವಕ್ಕೆ ಚಾಲನೆ ಸಿಗಲಿದೆ.

ಮಾ.24 ರಂದು ಉತ್ತರ ನಕ್ಷತ್ರದ ದಿನ ಅವಭೃತ ತೀರ್ಥಸ್ನಾನ ಮಾಡಿದರೆ ಮಾಡಿದ ಪಾಪಗಳೆಲ್ಲವೂ ನಶಿಸಿ ಹೋಗುತ್ತದೆ ಎಂಬ ನಂಬಿಕೆ ಇದ್ದು, ಭಕ್ತರು ಪುಣ್ಯಸ್ನಾನದಲ್ಲಿ ಪಾಲ್ಗೊಳ್ಳಲಿದ್ದಾರೆ. ಅಲ್ಲದೆ ಅದೇ ದಿನ ರಾತ್ರಿ 7 ಗಂಟೆಗೆ ಕಪಿಲಾ ನದಿಯ ತೇಲುವ ದೇವಾಲಯದಲ್ಲಿ ತೆಪ್ಪೋತ್ಸವ ನಡೆಯಲಿದ್ದು, ಲಕ್ಷಾಂತರ ಭಕ್ತರು ಇದಕ್ಕೆ ಸಾಕ್ಷಿಯಾಗಲಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಸೈರನ್ 108 (ತ)	4 ಪ್ರದರ್ಶನಗಳು,
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸೈತಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕರಟಕ ದಮನಕ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಂಗನಾಯಕ (ಕ)	4 ಪ್ರದರ್ಶನಗಳು
ರಾಜಕಮಲ್	
ಯೋಧ (ಹಿಂ)	4 ಪ್ರದರ್ಶನಗಳು
ಸಂಗಂ	
ಕೆರೆಬೇಟೆ (ಕ)	4 ಪ್ರದರ್ಶನಗಳು
ಲಿಡೋ	
ಹೈಡ್ ಅಂಡ್ ಸೀಕ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸೈರನ್ (ತ)	4 ಪ್ರದರ್ಶನಗಳು
ಪ್ರಭಾ	
ಸೋಮು ಸೌಂಡ್ ಇಂಜಿನಿಯರ್ (ಕ)	4 ಪ್ರದರ್ಶನಗಳು

ಬೈಕ್‌ಗೆ ಸಾರಿಗೆ ಬಸ್ ಡಿಕ್ಕಿ: ಸವಾರ ಸಾವು

ಮಲ್ಕುಂಡಿ, ಮಾ.19– ಬೈಕ್‌ಗೆ ಸಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಸಮೀಪದ ಅಂಬಳೆ ಗ್ರಾಮದ ಬಳಿ ನಡೆದಿದೆ.

ಮೈಸೂರಿನ ಅಶೋಕಪುರಂ ನಿವಾಸಿ ಹಾಗೂ ಲೈನ್‌ಮನ್ ಗುರುಮೂರ್ತಿ (36) ಸಾವನ್ನಪ್ಪಿದವರು. ಈತ ಹುರ ವಿಭಾಗದ ಕೆಇಬಿಯಲ್ಲಿ ಲೈನ್‌ಮನ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ನಿತ್ಯ ಮೈಸೂರಿನಿಂದ ಹುರ ಗ್ರಾಮಕ್ಕೆ ಬೈಕ್‌ನಲ್ಲಿ ಆಗಮಿಸುತ್ತಿದ್ದ ಗುರುಮೂರ್ತಿ ಮಂಗಳವಾರ ಬೆಳಗ್ಗೆ ಹಗಿನವಾಳು ಮಾರ್ಗವಾಗಿ ಹುರ ಗ್ರಾಮಕ್ಕೆ ಬರುತ್ತಿದ್ದ ವೇಳೆ ಹುರದಿಂದ ನಂಜನಗೂಡಿಗೆ ತೆರಳುತ್ತಿದ್ದ ಸಾರಿಗೆ ಬಸ್ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಗುರುಮೂರ್ತಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಂಜನಗೂಡು ಸಂಚಾರಿ ಠಾಣೆ ಎಸ್‌ಐ ಸಿದ್ದರಾಜು ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಆಸ್ತಿ ಕೊಡದ ತಂದೆ ಹತ್ಯೆಗೆ ಪುತ್ರನ ಯತ್ನ

ತಿ.ನರಸೀಪುರ, ಮಾ.19– ಆಸ್ತಿ ಕೊಡದ ತಂದೆಯನ್ನು ಪುತ್ರನೋರ್ವ ತನ್ನ ಸ್ನೇಹಿತರೊಡಗೂಡಿ ಚಾಕುವಿನಿಂದ ಇರಿದು ಹತ್ಯೆಗೆ ಯತ್ನಿಸಿರುವ ಘಟನೆ ಪಟ್ಟಣದ ಹೊರವಲಯದ ಮೂಲ ಸ್ಥಾನೇಶ್ವರಸ್ವಾಮಿ ದೇವಸ್ಥಾನದ ಎದುರು ನಡೆದಿದೆ.



ತಾಲೂಕಿನ ಆಲಗೂಡು ಗ್ರಾಮದ ನಿವಾಸಿ ರಾಚಪ್ಪಾಜಿ (60) ಎಂಬುವರೇ ತನ್ನ ಪುತ್ರ ಸುಭಾಷ್‌ನಿಂದ ಇರಿತಗೊಳಗಾದವರು. ಈ ಸಂಬಂಧ ಸುಭಾಷ್ ಸೇರಿದಂತೆ ಅಜಿತ್, ಶಶಿ, ರಾಜೇಂದ್ರ, ಮಹೇಶ್, ಕುಳ್ಳಿ ಮಾದ ಎಂಬುವವರ ವಿರುದ್ಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ರಾಚಪ್ಪಾಜಿ ಜೊತೆ ಆತನ ಸ್ನೇಹಿತ ಮಹದೇವ ಅಲಿಯಾಸ್ ಕೆಂಚ ಎಂಬುವರು ಸಹ ಚಾಕು ಇರಿತಕ್ಕೆ ಒಳಗಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವಿವರ: ರಾಚಪ್ಪಾಜಿ ತಮ್ಮ ಮಕ್ಕಳಿಗೆ ಕೊಡಬೇಕಾದ ಆಸ್ತಿಯನ್ನು ಕೊಟ್ಟಿದ್ದರು. ಆದರೆ ಸುಭಾಷ್ ಮತ್ತೆ ಆಸ್ತಿ ನೀಡುವಂತೆ ತನ್ನ ತಂದೆಯನ್ನು ಒತ್ತಾಯಿಸಿದ್ದಾನೆ. ಇದಕ್ಕೆ ಒಪ್ಪದ ರಾಚಪ್ಪಾಜಿ ನಿಮಗೆ ನೀಡಬೇಕಾದ ಆಸ್ತಿ ಕೊಟ್ಟು ನಿಮ್ಮಿಂದ ಬಿಡುಗಡೆ ಹೊಂದಿದ್ದೇನೆ. ಹೀಗಾಗಿ ನನ್ನ ಮುಂದಿನ ಜೀವನಕ್ಕೆ ಸ್ವಲ್ಪ ಆಸ್ತಿಯನ್ನು ಇಟ್ಟುಕೊಂಡಿದ್ದು, ಮತ್ತೆ ಆಸ್ತಿ ಕೊಡುವುದಿಲ್ಲ ಎಂದಿದ್ದಾರೆ. ಇದರಿಂದ ಕುಪಿತನಾದ ಸುಭಾಷ್ ತನ್ನ ಸ್ನೇಹಿತರೊಂದಿಗೆ ಸೇರಿ ಪಟ್ಟಣದ ಮೂಲ ಸ್ಥಾನೇಶ್ವರ ಸ್ವಾಮಿ ದೇವಸ್ಥಾನದ ಬಳಿ ರಾಚಪ್ಪಾಜಿ ಹಾಗೂ ಆತನ ಸ್ನೇಹಿತ ಮಹದೇವ ಎಂಬುವರ ಮೇಲೆ ಹಲ್ಲೆ ನಡೆಸಿ, ಚಾಕುವಿನಿಂದ ಇರಿದು ಕೊಲೆ ಮಾಡಲು ಯತ್ನಿಸಿದ್ದಾನೆ. ಈ ವೇಳೆ ಸ್ಥಳಕ್ಕಾಗಮಿಸಿದ ಮಹದೇವನ ಪುತ್ರ ಮನುನನ್ನು ನೋಡಿದ ಆರೋಪಿಗಳು ಅಲ್ಲಿಂದ ಪರಾರಿಯಾಗಿದ್ದಾರೆ. ತೀವ್ರ ಗಾಯಗೊಂಡಿದ್ದ ರಾಚಪ್ಪಾಜಿ ಹಾಗೂ ಮಹದೇವನನ್ನು ಮನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿ ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ತೀವ್ರ ಗಾಯಗೊಂಡಿರುವ ರಾಚಪ್ಪಾಜಿ ಸ್ಥಿತಿ ಗಂಭೀರವಾಗಿದ್ದು, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಎಸ್‌ಐ ಜಗದೀಶ್ ಧೂಳ್ ಶೆಟ್ಟಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕುಂಗ್ ಫು ಪಾಂಡ 4(3ಡಿ) (ಇಂ): ಬೆ.10.20ಕ್ಕೆ, ಸಂ.5.45ಕ್ಕೆ, ರಾ.7.50ಕ್ಕೆ, ರಾ.9.55ಕ್ಕೆ, ಕರಟಕ ದಮನಕ (ಕ): ಮ.12.25ಕ್ಕೆ, ಚೌಚೌ ಬಾತ್ (ಕ): ಮ.3.25ಕ್ಕೆ.
ಸ್ಕ್ರೀನ್ 2	ಹೈಡ್ & ಸೀಕ್ (ಕ): ಬೆ.10.25ಕ್ಕೆ, ಡ್ಯೂನ್ ಪಾರ್ಟ್2 (ಇಂ): ಮ.1ಕ್ಕೆ, ಆರ್ಟಿಕಲ್ 370 (ಹಿಂ): ಸಂ.4.10ಕ್ಕೆ, ಕರಟಕ ದಮನಕ (ಕ): ರಾ.7.15ಕ್ಕೆ, ಸೋಮು ಸೌಂಡ್ ಇಂಜಿನಿಯರ್ (ಕ): ರಾ.10.15ಕ್ಕೆ.
ಸ್ಕ್ರೀನ್ 3	ಮೆಹಬೂಬ (ಕ): ಬೆ.10.50ಕ್ಕೆ, ಕೆರೆಬೇಟೆ (ಕ): ಮ.1.35ಕ್ಕೆ, ಬಸ್ತಾರ್ ದಿ ನಕ್ಸಲ್ ಸ್ಟೋರಿ (ಹಿಂ): ಸಂ.4.30ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.7ಕ್ಕೆ, ರಜಾಕರ್ ಸೈಲೆಂಟ್ ಜಿನೋಸೈಡ್ ಆಫ್ ಹೈದ್ರಾಬಾದ್ (ತೆ): ರಾ.9.45ಕ್ಕೆ.
ಸ್ಕ್ರೀನ್ 4	ಜಾಕಿ (ಕ): ಬೆ.8ಕ್ಕೆ, ಬೆ.10.50ಕ್ಕೆ, ರಾ.10.10ಕ್ಕೆ, ಸೈತಾನ್ (ಹಿಂ): ಮ.1.45ಕ್ಕೆ, ಯೋಧ (ಹಿಂ): ಸಂ.4.30ಕ್ಕೆ, ರಾ.7.20ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಆಪರೇಷನ್ ವ್ಯಾಲೆಂಟೈನ್ (ತೆ): ಬೆ.9.55ಕ್ಕೆ, ಲಾಪತಾ ಲೇಡಿಸ್ (ಹಿಂ): ಮ.12.45ಕ್ಕೆ, ಡ್ಯೂನ್ ಪಾರ್ಟ್2 (ಇಂ): ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಡ್ಯೂನ್ ಪಾರ್ಟ್2 (ಇಂ): ಬೆ.9.50ಕ್ಕೆ, ಮ.1.20ಕ್ಕೆ, ಕ್ರೀಂ (ಕ): ಸಂ.4.50ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ): ರಾ.7.25ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಲಾಪತಾ ಲೇಡಿಸ್ (ಹಿಂ): ಬೆ.10ಕ್ಕೆ, ರಾ.7.25ಕ್ಕೆ, ಆರ್ಟಿಕಲ್ 370 (ಹಿಂ): ಮ.12.45ಕ್ಕೆ, ಸಂ.4.05ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಆಪರೇಷನ್ ವ್ಯಾಲೆಂಟೈನ್ (ತೆ): ಮ.12ಕ್ಕೆ, ಉಪಾಧ್ಯಕ್ಷ (ಕ): ಮ.3.05ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಸಂ.6.20ಕ್ಕೆ.

ಇಂದು ಹುಣಸೂರಿಗೆ ಯದುವೀರ್

ಹುಣಸೂರು, ಮಾ.19– ಮೈಸೂರು ಮತ್ತು ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮಾ.20 ರಂದು ಬೆಳಗ್ಗೆ 9 ಗಂಟೆಗೆ ಹುಣಸೂರಿಗೆ ಭೇಟಿ ನೀಡಲಿದ್ದಾರೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಮಹದೇವಸ್ವಾಮಿ ತಿಳಿಸಿದ್ದಾರೆ.



ಬೆಳಗ್ಗೆ ತಾಲೂಕಿನ ಧರ್ಮಾಪುರ ಜಿಪಂ, ಕರಿಮುದ್ದನಹಳ್ಳಿ ಗ್ರಾಪಂನ ವ್ಯಾಪ್ತಿಯ ಗದ್ದಿಗೆ ಶ್ರೀಕೆಂಡಗಣ್ಣಸ್ವಾಮಿ ದೇವಾಲಯಕ್ಕೆ ಭೇಟಿ ನೀಡಲಿರುವ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ವಿಶೇಷ ಪೂಜೆ ಸಲ್ಲಿಸುವರು. ಬಳಿಕ ದೇವಾಲಯದ ವತಿಯಿಂದ ಅವರನ್ನು ಸನ್ಮಾನಿಸಲಾಗುವುದು. ನಂತರ 10 ಗಂಟೆಗೆ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಲಿದ್ದಾರೆ.

ನಂತರ 10.30ಕ್ಕೆ ರತ್ನಪುರಿಯಲ್ಲಿರುವ ಶ್ರೀಬಲಮುರಿ ಗಣಪತಿ ದೇವಸ್ಥಾನ ಮುಂಭಾಗ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. 11 ಗಂಟೆಗೆ ಆಸ್ಪತ್ರೆ ಕಾವಲ್ ಗ್ರಾಪಂ ವ್ಯಾಪ್ತಿಯ ಸಿಬಿಟಿ ಕಾಲೋನಿಯಲ್ಲಿ ಕಾರ್ಯಕರ್ತರನ್ನು ಭೇಟಿಯಾಗಲಿದ್ದಾರೆ. ಮಧ್ಯಾಹ್ನ 12 ಗಂಟೆಗೆ ವಿನೋಬಾ ಕಾಲೋನಿಯಲ್ಲಿ ಹಾಗೂ 1 ಗಂಟೆಗೆ ನಗರದ ಕೋಟೆ ಸರ್ಕಲ್‌ನಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ನಗರಕ್ಕೆ ಆಗಮಿಸುವ ಯದುವೀರ್ ಅವರನ್ನು ಕೋಟೆ ಸರ್ಕಲ್‌ನಿಂದ ವಿಶ್ವೇಶ್ವರಯ್ಯ ಸರ್ಕಲ್‌ವರೆಗೆ ಮೆರವಣಿಗೆ ಮಾಡಲಾಗುವುದು. ಈ ಕಾರ್ಯಕ್ರಮಕ್ಕೆ ತಾಲೂಕಿನ ಎಲ್ಲಾ ಪದಾಧಿಕಾರಿಗಳು, ಮುಖಂಡರು, ಕಾರ್ಯಕರ್ತರು ಆಗಮಿಸಿ ಯಶಸ್ವಿಗೊಳಿಸಬೇಕು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಮಹದೇವಸ್ವಾಮಿ ತಿಳಿಸಿದ್ದಾರೆ.

ನಂ.ಗೂಡಲ್ಲಿ ಕೆ.ಶಿವರಾಂ ನುಡಿನಮನ ಕಾರ್ಯಕ್ರಮ



ನುಡಿ ನಮನ ಕಾರ್ಯಕ್ರಮವನ್ನು ವಾಣಿ ಶಿವರಾಂ ಉದ್ಘಾಟಿಸಿದರು.

ನಂಜನಗೂಡು, ಮಾ.19– ಬಡ ಕುಟುಂಬದಿಂದ ಬಂದ ಕೆ.ಶಿವರಾಂ ಅವರು ಶಿಕ್ಷಣ ಪಡೆದು ಐಎಎಸ್‌ನಂತಹ ಉನ್ನತ ಹುದ್ದೆ ಅಲಂಕರಿಸಿದ್ದರು. ಅಲ್ಲದೇ ಜನಪ್ರಿಯ ಅಧಿಕಾರಿಯಾಗಿ ಸೇವೆ ಸಲ್ಲಿಸಿದ ಅವರು ಜನುಪಯೋಗಿ ಹೊಸ ಯೋಜನೆಗಳನ್ನು ತಂದಿದ್ದರು ಎಂದು ಕೆ.ಶಿವರಾಂ ಧರ್ಮಪತ್ನಿ ವಾಣಿ ಶಿವರಾಂ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಮಂಗಳವಾರ ತಾಲೂಕು ಛಲವಾದಿ ಮಹಾಸಭಾ ಹಾಗೂ ಕೆ.ಶಿವರಾಂ ಅಭಿಮಾನಿ ಬಳಗ ಆಯೋಜಿಸಿದ್ದ ನುಡಿನಮನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶಿವರಾಂ ಅವರು ಬಡಜನರ ಪರ ಶಕ್ತಿ ಮೀರಿ ಕೆಲಸ ಮಾಡಿದ ತೃಪ್ತಿ ಹೊಂದಿದ್ದರು. ಹೀಗಾಗಿ ಜನರ ಮನಸ್ಸಿನಲ್ಲಿ ಉಳಿದಿದ್ದಾರೆ. ಸ್ವಾಭಿಮಾನ, ಹಠ, ಛಲದಿಂದ ಬದುಕಿ ತೋರಿಸಿದ ಅವರು ನನಗೆ ಗಂಡನಲ್ಲದೇ ಗುರು ಆಗಿದ್ದರು. ನಂಜುಂಡೇಶ್ವರ ನನಗೆ ಇಂತಹ ಸ್ಥಿತಿ ಕೊಡಬಾರದಿತ್ತು ಎಂದು ಭಾವುಕರಾದರು.

ನಂಜನಗೂಡಿನೊಂದಿಗೆ ನಂಟು ಹೊಂದಿದ್ದ ಅವರು ನನ್ನಂತೆಯೇ ದೀನ ದಲಿತರು ಉನ್ನತ ಹುದ್ದೇರಬೇಕು ಎಂಬುದು ಅವರ ಕನಸಾಗಿತ್ತು. ಜನಸೇವೆ ಮಾಡಬೇಕೆಂಬ ಹಂಬಲ ಹೊಂದಿದ್ದ ಅವರು ರಾಜಕೀಯ ಕೇತ್ರಕ್ಕೆ ಕಾಲಿಟ್ಟಿದ್ದರು. ಆದರೆ ಅವರ ನಿಧನದಿಂದ ನಿರಾಸೆಯಾಯಿತು. ಹೀಗಾಗಿ ಮುಂದೆ ನನ್ನ ಜೊತೆ ಇದ್ದು ನನಗೆ ಶಕ್ತಿ ತುಂಬುವ ಕೆಲಸ ಮಾಡಬೇಕು ಎಂದು ಮನವಿ ಮಾಡಿದರು.


ಕಾರ್ಯಕ್ರಮದಲ್ಲಿ ತಾಲೂಕು ಛಲವಾದಿ ಮಹಾಸಭಾ ಜಿಲ್ಲಾಧ್ಯಕ್ಷ ಅಭಿನಾಗಭೂಷಣ್, ರಾಜ್ಯ ಖಜಾಂಚಿ ಮೈಕೋ ನಾಗರಾಜ್, ಜೈಕಾಂತ್ ಚಾಲುಕ್ಯ, ರಾಜ್ಯ ಉಪಾಧ್ಯಕ್ಷ ಬಸವರಾಜು, ಕೆ.ಶಿವರಾಂ ಅಳಿಯ ಭರತ್, ಛಲವಾದಿ ಮಹಾಪೀಠಾಧಿಪತಿ ಬಸವನಾಗಿದೇವ ಸ್ವಾಮೀಜಿ, ತ್ರಿನೇಶ್, ರೈತ ಸಂಘದ ತಾಲೂಕು ಅಧ್ಯಕ್ಷ ಸತೀಶ್, ಛಲವಾದಿ ಮಹಾಸಭಾ ತಾಲೂಕು ಅಧ್ಯಕ್ಷ ಉಮೇಶ್ ರಾಜ್, ಪ್ರಶಾಂತ್, ಸುರೇಶ್, ಶಶಿರೇಖಾ ಉಪಸ್ಥಿತರಿದ್ದರು.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಮಾ.26, ಶ್ರೀ ಗುಂಜಾ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ



ತಿ.ನರಸೀಪುರ, ಮಾ.19– ಕಾವೇರಿ, ಕಪಿಲ ನದಿ ದಡದಲ್ಲಿರುವ ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ ಮಾ.26 ರಂದು ನಡೆಯಲಿದ್ದು, ಪ್ರತಿ ವರ್ಷದಂತೆ ಈ ಬಾರಿಯೂ ರಥೋತ್ಸವಕ್ಕೆ ಎಲ್ಲಾ ಸಮುದಾಯದವರು ಸಹಕಾರ ನೀಡುವಂತೆ ಪಾರುಪತ್ತೇಗಾರ್ ತಿರುಮಕೂಡಲು ದಿಲೀಪ್(ದೀಪು) ಮನವಿ ಮಾಡಿದ್ದಾರೆ.

ರಥೋತ್ಸವ ಅಂಗವಾಗಿ ಮಾ.19 ರಂದು ಅಂಕುರಾರ್ಪಣೆ, ಬುಧವಾರ ಧ್ವಜಾರೋಹಣ, ಚಂದ್ರ ಮಂಡಲಾರೋಹಣ, ಗುರುವಾರ ತಿರುನಾಳ್ ಕಟ್ಟೆ ಉತ್ಸವ, ಅನಂತ ಪೀಠಾರೋಹಣ, ಶುಕ್ರವಾರ ಹಂಸಾರೋಹಣ, ಶನಿವಾರ ಪುಷ್ಪ ಮಂಟಪಾರೋಹಣ, ಭಾನುವಾರ ಪ್ರಹ್ಲಾದ ಪರಿಪಾಲನೋತ್ಸವ, ಸೋಮವಾರ ಲಕ್ಷ್ಮಿ ಕಲ್ಯಾಣೋತ್ಸವ, ಗಜೇಂದ್ರ ಪರಿಪಾಲನೋತ್ಸವ, ಮಾ.26 ಮಂಗಳವಾರ ದಿವ್ಯ ಮಹಾರಥೋತ್ಸವ, ಬುಧವಾರ ತಿರುನಾಳ್ ಕಟ್ಟೆ ಉತ್ಸವ, ಡೋಲೋತ್ಸವ, ಶಯನೋತ್ಸವ, ಗುರುವಾರ ಅವಕೃತ ಸ್ನಾನ, ಧ್ವಜ ಅವರೋಹಣ, ಶುಕ್ರವಾರ ಮಹಾಭಿಷೇಕ ಹನುಮಂತೋತ್ಸವ, ಶನಿವಾರ ವೈಮಾಳಿಗೆ ಉತ್ಸವದೊಂದಿಗೆ ಜಾತ್ರಾ ಮಹೋತ್ಸವ ಮುಕ್ತಾಯಗೊಳ್ಳಲಿದೆ.

ಪುರಸಭೆ ವತಿಯಿಂದ ಸ್ವಚ್ಛತಾ ಕಾರ್ಯಗಳು ಜರುಗಲಿದ್ದು, ರಥೋತ್ಸವಕ್ಕೆ ಬರುವ ಭಕ್ತರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯವರು ಮಾಡಲಿದ್ದಾರೆ ಎಂದು ದಿಲೀಪ್ ತಿಳಿಸಿದ್ದಾರೆ.

ಕಾಂಗ್ರೆಸ್‌ನಿಂದ ಮಾತ್ರ ಎಲ್ಲಾ ಜನಾಂಗದವರಿಗೂ ಅಧಿಕಾರ

ಅಭಿನಂದನಾ ಸಮಾರಂಭದಲ್ಲಿ ಎಸ್.ಎಸ್.ಸಂದೇಶ್ ಅಭಿಪ್ರಾಯ



ಕೆ.ಆರ್.ನಗರ, ಮಾ.19– ಸರ್ವ ಜನಾಂಗದವರನ್ನು ಸಮಾನವಾಗಿ ಕಂಡು ಅವರಿಗೆ ರಾಜಕೀಯ ಶಕ್ತಿ ನೀಡುವುದು ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ ಎಂದು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಸ್.ಎಸ್.ಸಂದೇಶ್ ತಿಳಿಸಿದರು.

ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರು ಮತ್ತು ನಿರ್ದೇಶಕರಿಗೆ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ದಶಕಗಳಿಂದ ದೇಶದ ಅಭಿವೃದ್ಧಿಗೆ ಶ್ರಮಿಸುತ್ತಿರುವ ನಮ್ಮ ಪಕ್ಷವನ್ನು ಎಲ್ಲರೂ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ವೀರಶೈವ ಸಮಾಜಕ್ಕೆ ಸೇರಿದ ಕೆ.ಎಸ್.ಮಹೇಶ್ ಅವರನ್ನು ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ಮತ್ತು ಮುಸ್ಲಿಂ ಸಮುದಾಯದ ಸೈಯದ್ ಜಾಬೀರ್, ಮರಾಠ ಸಮಾಜದ ಕೆ.ಎನ್.ಪ್ರಸನ್ನಕುಮಾರ್ ಹಾಗೂ ಕುರುಬ ಸಮುದಾಯದ ಸರಿತಾ ಜವರಪ್ಪ ಅವರನ್ನು ಪ್ರಾಧಿಕಾರದ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದ್ದು ಸರ್ವ ಜನಾಂಗದವರಿಗೂ ಸಮಾನ ಅವಕಾಶ ನೀಡಿ ರಾಜಕೀಯ ಸ್ಥಾನಮಾನ ನೀಡಲಾಗಿದೆ ಎಂದು ತಿಳಿಸಿದರು.

ಪಕ್ಷ ಮತ್ತು ಸರ್ಕಾರ ತಮಗೆ ನೀಡಿರುವ ಅಧಿಕಾರವನ್ನು ಜವಾಬ್ದಾರಿಯಿಂದ ನಿರ್ವಹಿಸಿ ಪಟ್ಟಣದ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡಬೇಕೆಂದು ಸಲಹೆ ನೀಡಿದ ಅವರು ಅತ್ಯಂತ ಯೋಜನಾಬದ್ಧ ಪಟ್ಟಣವಾಗಿರುವ ಕೆ.ಆರ್.ನಗರವನ್ನು ಮತ್ತಷ್ಟು ಸುಂದರವನ್ನಾಗಿಸಲು ನಗರ ಯೋಜನಾ ಪ್ರಾಧಿಕಾರದ ನಿರ್ದೇಶಕರು ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎಂದು ಮನವಿ ಮಾಡಿದರು.

ಆರೋಗ್ಯ ರಕ್ಷಾ ಸಮಿತಿ ಸದಸ್ಯ ಹೆಚ್.ಹೆಚ್.ನಾಗೇಂದ್ರ, ಗುತ್ತಿಗೆದಾರ ಮಿರ್ಲೆ ದೀಪು, ಅಕ್ರಮ ಸಕ್ರಮ ಸಮಿತಿ ಸದಸ್ಯ ಪ್ರಕಾಶ್, ಯುವ ಕಾಂಗ್ರೆಸ್ ಮುಖಂಡ ವೈ.ಎಸ್.ಜಯಂತ್, ಭೀಮ್‌ರಾವ್ ಮತ್ತಿತರರಿದ್ದರು.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಝಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಕ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

ಸೂಚನೆ: ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಶ್ರೀದುರ್ಗಮ್ಮ–ಮರುಗಮ್ಮ ದೇವಿ ಅಡ್ಡಪಲ್ಲಕ್ಕಿ ಉತ್ಸವ

ಹುಣಸೂರು, ಮಾ.19– ನಗರದ ಐತಿಹಾಸಿಕ ಶ್ರೀದುರ್ಗಮ್ಮ–ಮರುಗಮ್ಮ ದೇವಿ 117ನೇ ವಾರ್ಷಿಕೋತ್ಸವ ಮತ್ತು ಅಡ್ಡಪಲ್ಲಕ್ಕಿ ಉತ್ಸವ ಈಗಾಗಲೇ ಆರಂಭವಾಗಿದ್ದು, ಮಾ.21ರವರೆಗೆ ನಡೆಯಲಿದೆ ಎಂದು ದೇವಾಲಯದ ಪ್ರಕಟಣೆ ತಿಳಿಸಿದೆ.

ಮಾ.20ರಂದು ಬೆಳಗ್ಗೆ 5.30ಕ್ಕೆ ಸರಸ್ವತಿಪುರಂನಿಂದ ನಗರದ ಪ್ರಮುಖ ಬೀದಿಗಳಲ್ಲಿ ತಂಬಿಟ್ಟು ಆರತಿ ಮೆರವಣಿಗೆಯಲ್ಲಿ ಬಂದು ಶ್ರೀದುರ್ಗಮ್ಮ–ಮರ್ಗಮ್ಮ ದೇವಿಯರಿಗೆ ತಂಬಿಟ್ಟು ಆರತಿ, ತಂಪು ತಲುಪಿದ ನಂತರ ಮಹಾಮಂಗಳಾರತಿ ಮಾಡಲಾಗುವುದು. ಮಾ.21ರಂದು ಬೆಳಗ್ಗೆ 8 ಗಂಟೆಗೆ ಹೋಳಿ ಹಬ್ಬ ಆಚರಿಸಲಾಗುವುದು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವಿ ಕೃಪೆಗೆ ಪಾತ್ರರಾಗಬೇಕೆಂದು ಪ್ರಕಟಣೆ ತಿಳಿಸಿದೆ.

ಮುಕ್ತ, ನ್ಯಾಯ ಸಮ್ಮತ ಚುನಾವಣೆಗೆ ಸಿದ್ಧತೆ: ತಹಸೀಲ್ದಾರ್



ಕೆ.ಆರ್.ನಗರ, ಮಾ.19– ಲೋಕಸಭಾ ಚುನಾವಣೆಯನ್ನು ಮುಕ್ತ ಮತ್ತು ನ್ಯಾಯ ಸಮ್ಮತವಾಗಿ ನಡೆಸಲು ಚುನಾವಣಾ ಆಯೋಗದ ಆದೇಶ ಮೇರೆಗೆ ಎಲ್ಲಾ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಎಂದು ತಹಸೀಲ್ದಾರ್ ಸಿ.ಎಸ್.ಪೂರ್ಣಿಮಾ ತಿಳಿಸಿದರು.

ಪಟ್ಟಣದ ಮುಸ್ಲಿಂ ಬಡಾವಣೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತಗಟ್ಟೆಯನ್ನು ಪರಿಶೀಲಿಸಿ, ಚುನಾವಣೆಗೆ ಸಂಬಂಧಿಸಿದಂತೆ ಮಾಹಿತಿ ನೀಡಿದ ಅವರು, ಕೆಆರ್.ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 252 ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, ಈ ಪೈಕಿ 8 ಅತಿಸೂಕ್ಷ್ಮ ಹಾಗೂ 32 ಸೂಕ್ಷ್ಮ ಮತಗಟ್ಟೆಗಳೆಂದು ಗುರುತಿಸಲಾಗಿದೆ ಎಂದರು.

ಕ್ಷೇತ್ರದಲ್ಲಿ 2,17,319 ಮತದಾರರಿದ್ದು, ಈ ಪೈಕಿ 1 ಲಕ್ಷದ 9 ಸಾವಿರದ 903 ಮಹಿಳೆಯರು ಮತ್ತು 1 ಲಕ್ಷದ 7 ಸಾವಿರದ 404 ಪುರುಷರು ಹಾಗೂ 12 ಮಂದಿ ಇತರರು ಇದ್ದಾರೆಂದು ಮಾಹಿತಿ ನೀಡಿದರು.

ಚುನಾವಣಾ ಕಾರ್ಯಕ್ಕೆ 32 ಸೆಕ್ಟರ್ ಮ್ಯಾಜಿಸ್ಟ್ರೇಟರ್‌ಗಳನ್ನು ನೇಮಕ ಮಾಡಲಾಗಿದ್ದು, ಜೊತೆಗೆ 7 ಫ್ಲೈಯಿಂಗ್ ಸ್ಕ್ವಾಡ್ ತಂಡ ರಚಿಸಲಾಗಿದೆ. ಇವರು ದಿನದ 24 ಗಂಟೆಗಳ ಕಾಲ 21 ತಂಡವಾಗಿ ಕಾರ್ಯ ನಿರ್ವಹಿಸಲಿದ್ದು, ಇವರಿಗೆ ಪೂರಕವಾಗಿ ಕೆಲಸ ಮಾಡಲು ಮತ್ತಷ್ಟು ಅಗತ್ಯ ಸಿಬ್ಬಂದಿ ನೇಮಕ ಮಾಡಲಾಗಿದೆ ಎಂದರು.

85 ವರ್ಷ ತುಂಬಿದ ಮತದಾರರು ಮತ್ತು ವಿಶೇಷಚೇತನರು ಮತಗಟ್ಟೆಗೆ ಬರಲು ತೊಂದರೆಯಾದರೆ ಅವರು ಮನೆಯಿಂದಲೇ ಮತ ಚಲಾವಣೆ ಮಾಡುವಂತೆ ಅನುಕೂಲ ಕಲ್ಪಿಸಬೇಕೆಂದು ಕೇಂದ್ರ ಚುನಾವಣಾ ಆಯೋಗ ಸೂಚನೆ ನೀಡಿರುವುದರಿಂದ ಬಿಎಲ್‌ಒಗಳು ಮನೆ ಮನೆಗೆ ತೆರಳಿ 12ಡಿ ಫಾರಂಗಳನ್ನು ವಿತರಿಸಲಿದ್ದು, ಅವುಗಳನ್ನು ಭರ್ತಿ ಮಾಡಿ ಬೇಡಿಕೆ ಸಲ್ಲಿಸಿದರೆ ಮನೆಯಿಂದಲೇ ಮತದಾನ ಮಾಡಿಸಲು ಕಲ್ಪಿಸಲಾಗುತ್ತದೆ ಎಂದು ವಿವರಿಸಿದರು.

ಕೆ.ಆರ್.ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 5 ಸಖಿ ಮತಗಟ್ಟೆ, 2 ಯುವ ಮತಗಟ್ಟೆ ಮತ್ತು 1 ವಿಶೇಷ ಚೇತನರ ಮತಗಟ್ಟೆಗಳನ್ನು ಸ್ಥಾಪಿಸಲಿದ್ದು, ಇದರ ಜತೆಗೆ 1 ಪಾರಂಪರಿಕ ಮತಗಟ್ಟೆ ತೆರೆಯಲಿದ್ದು ಮತದಾರರು ಮುಕ್ತವಾಗಿ ತಮ್ಮ ಹಕ್ಕು ಚಲಾಯಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಚುನಾವಣಾ ಸಂಬಂಧಿತ ಅಕ್ರಮದ ಬಗ್ಗೆ ಯಾವುದೇ ದೂರುಗಳಿದ್ದರೂ ಸಾರ್ವಜನಿಕರು ನಿರ್ಭೀತಿಯಿಂದ ಈ ಸಂಖ್ಯೆಗೆ (08223–262371) ಮಾಹಿತಿ ನೀಡಬಹುದು ಎಂದು ತಿಳಿಸಿದರು.

ಅಪರಿಚಿತ ವಾಹನ ಡಿಕ್ಕಿ: ಮಹಿಳೆ ಸಾವು

ಪತಿ, ಪುತ್ರಿಗೆ ತೀವ್ರ ಗಾಯ, ಆಸ್ಪತ್ರೆಗೆ ದಾಖಲು

ಹೆಚ್.ಡಿ.ಕೋಟೆ, ಮಾ.19– ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಮಹಿಳೆ ಮೃತಪಟ್ಟು, ಆಕೆಯ ಪತಿ ಹಾಗೂ ಪುತ್ರಿ ತೀವ್ರ ಗಾಯಗೊಂಡಿರುವ ಘಟನೆ ತಾಲೂಕಿನ ರಾಮೇನಹಳ್ಳಿ ಗ್ರಾಮದಲ್ಲಿ ಮಂಗಳವಾರ ನಡೆದಿದೆ.

ತಾಲೂಕಿನ ಕಾರಪುರ ಗ್ರಾಮದ ಪುಟ್ಟಸ್ವಾಮಿನಾಯಕ ಅವರ ಪತ್ನಿ ಹಾಲಮ್ಮ (57) ಮೃತಪಟ್ಟವರು. ಈಕೆಯ ಪತಿ ಪುಟ್ಟಸ್ವಾಮಿ ನಾಯಕ ಹಾಗೂ ಪುತ್ರಿ ಮಂಗಳಿ ತೀವ್ರ ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವಿವರ: ರಾಮೇನಹಳ್ಳಿ ಗ್ರಾಮದಲ್ಲಿ 3 ದಿನದ ಹಿಂದೆ ಸಂಬಂಧಿಕರೊಬ್ಬರು ಮೃತಪಟ್ಟಿದ್ದು, ಇಂದು ಮೂರು ದಿನದ ಕಾರ್ಯಕ್ಕೆ ಕಾರಪುರದಿಂದ ಪುಟ್ಟಸ್ವಾಮಿ ನಾಯಕ, ಪತ್ನಿ ಹಾಲಮ್ಮ, ಪುತ್ರಿ ಮಂಗಳಿ ಆಗಮಿಸಿ ರಸ್ತೆ ಬದಿ ನಿಂತಿದ್ದರು. ಈ ವೇಳೆ ಬಂದ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಮೂವರನ್ನು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದ ವೇಳೆ ಹಾಲಮ್ಮ ಮಾರ್ಗ ಮಧ್ಯೆ ಸಾವನ್ನಪ್ಪಿದ್ದು, ತಂದೆ, ಮಗಳಿಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಕಳಿಸಿದ್ದಾರೆ.



ವೈದ್ಯರ ವಿರುದ್ಧ ಪ್ರತಿಭಟನೆ: ಅಪಘಾತದಲ್ಲಿ ಮೃತಪಟ್ಟ ಹಾಲಮ್ಮನವರ ಶವವನ್ನು ಬೆಳಗ್ಗೆ 9 ಗಂಟೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಶವಾಗಾರಕ್ಕೆ ಮರಣೋತ್ತರ ಪರೀಕ್ಷೆ ನಡೆಸಲು ತಂದರೂ ವೈದ್ಯರು ಸಂಜೆ 4 ಕಳೆದರೂ ಮರಣೋತ್ತರ ಪರೀಕ್ಷೆ ಮಾಡದೇ ವಿಳಂಬ ಮಾಡಿದ್ದಾರೆ ಎಂದು ಆರೋಪಿಸಿ ಮೃತ ಮಹಿಳೆಯ ಸಂಬಂಧಿಕರು ವೈದ್ಯರ ವಿರುದ್ಧ ಪ್ರತಿಭಟನೆ ನಡೆಸಿದರು. ಪ್ರತಿಭಟನೆ ವಿಷಯ ತಿಳಿಯುತ್ತಿದ್ದಂತೆ ವೈದ್ಯರು ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಶವವನ್ನು ಹಸ್ತಾಂತರಿಸಿದರು. ಈ ಸಂಬಂಧ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

CET / NEET CRASH COURSE

Classes Start from 23rd March 2024
Timings 9.00am to 5.00pm

- Classes will be conducted by Highly experienced teachers who have minimum 15 to 25 years experience.
- 25 classes in each subject
- Daily Tests
- 3 to 4 Mock Exams will be conducted

Venue :
HARI VIDYALAYA COMPOSITE PU COLLEGE
Bogadi, Mysore - 570 026
Call : 91410 54735, 91410 54736, 94498 09181

Kumuda Spa

Best price guaranteed in Hair & Salon services. SPA & Massage packages available in most reasonable price.

20% Discount on all Packages
0821-4193567/9632769550

Walk in Interview for Teachers for CBSE English Medium School in Nanjangud

on 23rd March 2024 at 10 am.
Qualification: Any Degree
Requirement: Good communication in English language. Preference will be given to candidates from Nanjangud.
Interested candidates may contact :
7676110063 / 8150857937

ANAND BROTHERS FAMILY STORE

BUY 3 GET 1
BUY 1 GET 1
FREE
OFFER AVAILABLE ON 10+ INSTA ACCOUNT SHARES
FOR UGADI AND RAMZAAN
SAREES, DRESS, KURTIES, JEANS TOPS WESTREN WARES, KIDS WARE, MENS WARES ONLINE AND OFFLINE
ALL FAMILY SHOPPING AND WANTED 1000 + SALES GIRLS AND BOYS FOR SALES JOB GANDHI SQUARE, MYSORE
9606565552 - 7406788889



For Sale

Sankalpa Central Park Yadavagiri 2Bhk Flot for Sale. 40x60 Site for Sale at huyilalu village, Yelwala hobli, Mysore Taluk. layout known as nithyaananda sagar layout Mysore. Contact

94819402921

ಹಸಿರು ನಮ್ಮ ಉಸಿರು

ಶ್ರೀ ಗೌರೀಶಂಕರ ಟ್ರಾವೆಲ್ಸ್

5.4.24 (3 ದಿನ): ಕಾಶಿ, ಅಯೋಧ್ಯ
28.4.24 (6 ದಿನ): ಕಾಶಿ, ಅಯೋಧ್ಯ, ಗಯ
12.5.24 (5 ದಿನ): ಮುನ್ನಾರ್, ತ್ರಿವೇಂಡ್ರಂ
30.5.24 (11 ದಿನ): ನೇಪಾಳ್, ಕಾಶಿ, ಮುಕ್ತಿನಾಥ್
15.7.24 (11 ದಿನ): ವೈಷ್ಣೋದೇವಿ, ಅಮರ್‌ನಾಥ್
(ವಿಮಾನ, ಬಸ್, ಊಟ, ರೂಂ)
ಮೊ: 9620002114

FOR ADVERTISEMENT

STAR OF MYSORE
Please Call: 0821-2496522 / 23
Email: ad@starofmysore.com

ಮೈಸೂರು ಮಿತ್ರ
Please Call: 0821-2496522 / 23
Email: ad@mysurumithra.com



• 10 am to 8 pm • Open All Days • Master / Visa Card Accepted
INNERWEAR • LEISUREWEAR • ACTIVEWEAR • KIDSWEAR • SOCKS

Venue In Mysore
JLB Road | The Institution Of Engineers (Auditorium Hall), Jhansi Lakshmibai Road – 5



ಜಮೀನು ಬೇಕಾಗಿದೆ

ಮೈಸೂರಿನಿಂದ 10.15 ಕಿ.ಮೀ ಒಳಗೆ ನಿವೇಶನ ರಚಿಸಲು 8 ರಿಂದ 10 ಎಕರೆ ಪರಿವರ್ತನೆಗೊಂಡಿರುವ ಭೂಮಿಯು ಬೇಕಾಗಿದೆ. ಭೂಮಾಲೀಕರು ಮಾತ್ರ ತಮ್ಮ ಜಮೀನಿನ ದಾಖಲೆಯ ನಕಲು ಮತ್ತು ಬೆಲೆಯನ್ನು ಕಾರ್ಯದರ್ಶಿ, ಕೇಂದ್ರ ಆಹಾರ ಸಂಶೋಧನಾಲಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ, ಸಿ.ಎಫ್.ಟಿ.ಆರ್.ಐ ಆವರಣ, ಮೈಸೂರುರವರಿಗೆ 10 ದಿನದೊಳಗೆ ತಲುಪುವಂತೆ ಕಳುಹಿಸಬೇಕು. ದೂರವಾಣಿ:

080-2510249, 9110841202



ಇಂದೇ ಏಥರ್ ನ ಅನುಭವಪಡೆಯಿರಿ

ಏಥರ್ 450 ಸೀರೀಸ್ ಬೆಲೆ ₹1 09 999ರಿಂದ ಆರಂಭ. ಮಾರ್ಚ್ 31 2024ರೊಳಗೆ ಏಥರನ್ನು ಖರೀದಿಸಿ ಹಾಗೂ ನೋಂದಾಯಿಸಿಕೊಳ್ಳಿ, ಹಾಗೂ ₹22 485ವರೆಗಿನ FAME-II ಸಬ್ಸಿಡಿಯ ಲಾಭ ಪಡೆಯಿರಿ

Ather Space Experience Center: Mysore - Chamrajpuram: 88843 99800 | Mysore - Hunsur Road: 98188 38899 | Mandya: 88840 14477 | Ather Test Ride Zone: Siddarth Layout: 98188 38899

ಬೆಂಗಳೂರಿನಲ್ಲಿ, ಏಥರ್ 450Sನ ಯಥಾರ್ಥ ಎಕ್ಸ್-ಶೋರೂಂ ಬೆಲೆಯು, FAME II ಸಬ್ಸಿಡಿ ಹಾಗೂ ಅನ್ವಯಿಸಬಹುದಾದ ರಿಯಾಯಿತಿಗಳನ್ನು ಒಳಗೊಂಡಿದ್ದು, ಮಾರ್ಚ್ 31, 2024ರವರೆಗೆ ಮಾನ್ಯವಾಗಿರುತ್ತದೆ. ₹22 485ಗಳ FAME II ಸಬ್ಸಿಡಿಯು 450X HR ಖರೀದಿಗೆ ಅನ್ವಯಿಸುತ್ತದೆ. ಕೊಡುಗೆಗಳ ಯಥಾರ್ಥ ಮೌಲ್ಯಗಳನ್ನು ಅರಿಯಲು ನಿಮ್ಮ ಹತ್ತಿರದ ಏಥರ್ ಸ್ಪೇಸ್ ಸೆಂಟರನ್ನು ಸಂಪರ್ಕಿಸಿ. www.atherenergy.com ಏಥರ್ ಎನರ್ಜಿಯ ಏಕಮಾತ್ರ ಅಧಿಕೃತ ಜಾಲತಾಣವಾಗಿದೆ